ಮಂಗಳವಾರ, ಫೆಬ್ರುವರಿ 6, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ

ಮುಂಬೈನಲ್ಲಿ ನಡೆದ 'ತೇರಿ ಬಾತೋ ಮೆ ಐಸಾ ಉಲ್ಝಾ ಜಿಯಾ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಕೃತಿ ಸನೊನ್ ಪಾಲ್ಗೊಂಡಿದ್ದರು

#ನನ್ನತೆರಿಗೆನನ್ನಹಕ್ಕು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಮತ್ತು ಕನ್ನಡಿಗರ ಮೇಲೆ ಕೇಂದ್ರ ಸರ್ಕಾರದ ಆರ್ಥಿಕ ದೌರ್ಜನ್ಯದ ವಿರುದ್ಧ

ಚಲೋ ದಿಲ್ಲಿ

- ಅನುದಾನ ನೀಡಿಕೆಯಲ್ಲಿ ಕರ್ನಾಟಕಕ್ಕೆ ತಾರತಮ್ಯ
- ಸೌಲಭ್ಯ ನೀಡಿಕೆಯಲ್ಲಿ ಕನ್ನಡಿಗರಿಗೆ ಅನ್ಯಾಯ

07ನೇ ಫೆಬ್ರವರಿ 2024
ಬೆಳಿಗ್ಗೆ 11.00 ಗಂಟೆಗೆ

ಜಂತರ್ ಮಂತರ್
ನವದೆಹಲಿ

ದಿಲ್ಲಿ ಹೋಗೋಣ ಬನ್ನಿ ಕೇಳೋಣ...

- **ಬರ ಪರಿಹಾರಕ್ಕೆ ಬಿಡಿಗಾಸಿಲ್ಲ**
  ರಾಜ್ಯದ ಬೇಡಿಕೆ : **18,177 ಕೋಟಿ ರೂ.**
  ಕೇಂದ್ರ ಸರ್ಕಾರ ನೀಡಿದ್ದು : **ಶೂನ್ಯ**
- **ತೆರಿಗೆ ಪಾಲಿನಲ್ಲಿ ತಾರತಮ್ಯ**
  ಶೇ. 4.72 ರಿಂದ ಶೇ. 3.64 ಇಳಿಕೆ.
  ರಾಜ್ಯಕ್ಕೆ ಆದ ನಷ್ಟ: **62,098 ಕೋಟಿ ರೂ.** (ಐದು ವರ್ಷಗಳಲ್ಲಿ)
- **ಭದ್ರಾ ಮೇಲ್ದಂಡೆ ಯೋಜನೆಗೆ ನಿರ್ಲಕ್ಷ್ಯ**
  2023-24 ರಲ್ಲಿ ಘೋಷಿಸಿದ್ದು: **5,300 ಕೋಟಿ ರೂ.**
  ಕೇಂದ್ರ ಸರ್ಕಾರ ನೀಡಿದ್ದು : **ಶೂನ್ಯ**
- **ಮರೀಚಿಕೆಯಾದ ವಿಶೇಷ ಅನುದಾನ**
  15ನೇ ಹಣಕಾಸು ಆಯೋಗ ಶಿಫಾರಸ್ಸು: **5,495 ಕೋಟಿ ರೂ.**
  ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದು: **ಶೂನ್ಯ**
- **ಸಹಭಾಗಿತ್ವ ಯೋಜನೆಗೆ ಅನುದಾನ ಕಡಿತ**
  2021-22 : **20,000 ಕೋಟಿ ರೂ.**
  2022-23: **13,000 ಕೋಟಿ ರೂ.**
- **ನನಸಾಗದ ಕನಸು**
  ಕನಸಾಗೇ ಉಳಿದ ಏಮ್ಸ್
  ಮಹದಾಯಿ ಯೋಜನೆಗೆ ಮನ್ನಣೆ ಇಲ್ಲ

ಕೇಂದ್ರ ಸರ್ಕಾರದ ಅನ್ಯಾಯದಿಂದ ಕರ್ನಾಟಕಕ್ಕೆ 2017-18 ರಿಂದ ಆದ ನಷ್ಟ **ರೂ. 1,87,000 ಕೋಟಿ**

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆ ಕಲ್ಪಿಸಲು ಒತ್ತಾಯ

ಬೆಂಗಳೂರು: 'ರೈಲಿನಲ್ಲಿ ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆ ಕಲ್ಪಿಸಬೇಕು' ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ಆಗ್ರಹಿಸಿದೆ.

ಶಿವಮೊಗ್ಗ-ಯಶವಂತಪುರ ರೈಲಿನಲ್ಲಿ ಮಹಿಳೆಯೊಬ್ಬರನ್ನು ಕೊಲೆ ಮಾಡಿ, ಚಿನ್ನಾಭರಣ ದೋಚಿರುವ ಘಟನೆ ನಡೆದಿದೆ. ಘಟನೆಯಿಂದ ರೈಲುಗಳಲ್ಲಿ ಪ್ರಯಾಣಿಸುವ ಮಹಿಳೆಯರ ಆತಂಕ ಹೆಚ್ಚಿಸಿದೆ. ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆ ಕಲ್ಪಿಸಬೇಕು ಎಂದು ಸಮಿತಿಯ ಜಿಲ್ಲಾ ಕಾರ್ಯದರ್ಶಿ ಎ.ಶಾಂತಾ ಒತ್ತಾಯಿಸಿದ್ದಾರೆ.

ನಗರದ ಅರಣ್ಯ ಭವನದಲ್ಲಿ ಕೆಲಸ ಮಾಡುತ್ತಿದ್ದ ಜಿ.ಅನ್ನಪೂರ್ಣ ಅವರು ಇಲಾಖೆ ಪರೀಕ್ಷೆಯ ಮೇಲ್ವಿಚಾರಣೆಗಾಗಿ ಶಿವಮೊಗ್ಗಕ್ಕೆ ತೆರಳಿ ರೈಲಿನಲ್ಲಿ ವಾಪಸ್ ಬರುತ್ತಿದ್ದರು. ಆಗ ಕೃತ್ಯ ನಡೆದಿದೆ. ಈ ಘಟನೆಯು ರೈಲ್ವೆ ಇಲಾಖೆಯ ವೈಫಲ್ಯ ತೋರಿಸುತ್ತದೆ ಎಂದು ದೂರಿದ್ದಾರೆ.

ಅನ್ನಪೂರ್ಣ ಅವರು ಮಹಿಳಾ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದರು. ಅದೇ ಬೋಗಿಯಲ್ಲಿ ಘಟನೆ ನಡೆದಿದೆ. ಮಹಿಳಾ ಬೋಗಿಗಳು ಮಹಿಳೆಯರಿಗೆ ಎಷ್ಟು ಸುರಕ್ಷಿತವಾಗಿವೆ ಎಂಬುದನ್ನು ರೈಲ್ವೆ ಇಲಾಖೆ ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

10 ವರ್ಷಗಳಿಂದ ಏಕೆ ಗ್ಯಾರಂಟಿ ನೀಡಿಲ್ಲ?

ಹೊಸ ವಿನ್ಯಾಸದ 100 ಸಾರಿಗೆ ಬಸ್‌ಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಲ್ಲಿ 10 ವರ್ಷಗಳಿಂದ ನರೇಂದ್ರ ಮೋದಿ ಅಧಿಕಾರದಲ್ಲಿದ್ದರೂ, ಇಲ್ಲಿಯವರೆಗೆ ಏಕೆ ಜನರಿಗೆ 'ಗ್ಯಾರಂಟಿ'ಗಳನ್ನು ನೀಡಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಹೊಸ ವಿನ್ಯಾಸ ಹಾಗೂ ಹೊಸ ಬ್ರ್ಯಾಂಡ್‌ನ 'ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್' – 'ಅಶ್ವಮೇಧ' 100 ಸಾರಿಗೆ ಬಸ್‌ಗಳಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

'ನಾವು ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದಾಗ ಕರ್ನಾಟಕ ದಿವಾಳಿಯಾಗುತ್ತದೆ ಎಂದು ಮೋದಿ ಹೇಳಿದ್ದರು. ಬಿಟ್ಟಿ ಭಾಗ್ಯ ಎಂದು ಬಿಜೆಪಿಯವರು ಮೂದಲಿಸಿದ್ದರು. ಬಿಜೆಪಿ ಇಲ್ಲಿವರೆಗೆ ಸುಳ್ಳುಗಳನ್ನೇ ಹೇಳಿಕೊಂಡು ಬಂದಿತ್ತು. ಈ ಬಾರಿ ಮೋದಿ ಗ್ಯಾರಂಟಿ ಎಂದು ಹೇಳುತ್ತಿದ್ದಾರೆ. ಜನರು ಈ ಸುಳ್ಳು ಭರವಸೆಗೆ ಮರುಳಾಗಬಾರದು' ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿಯ 'ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್' – 'ಅಶ್ವಮೇಧ' ಸಾರಿಗೆ ಬಸ್ ಜೊತೆಗೆ ಮಹಿಳೆಯರು ಸೆಲ್ಫಿ ತೆಗೆದುಕೊಂಡರು – ಪ್ರಜಾವಾಣಿ ಚಿತ್ರ

'ವಿದೇಶದಲ್ಲಿರುವ ಕಪ್ಪು ಹಣವನ್ನು ದೇಶಕ್ಕೆ ತಂದರೆ ಭಾರತದ ಪ್ರತಿ ಕುಟುಂಬಕ್ಕೂ ₹ 15 ಲಕ್ಷದಷ್ಟು ಆಗುತ್ತದೆ ಎಂದಿದ್ದರು. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ, ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿದ್ದರು. ಯಾವುದೇ ಭರವಸೆಗಳನ್ನು ಪ್ರಧಾನಿ ಈಡೇರಿಸಿಲ್ಲ' ಎಂದು ಟೀಕಿಸಿದರು.

'ಬಡವರ ಬಗ್ಗೆ ಕಾಳಜಿ ಇದ್ದು, ರಾಜಕೀಯ ಇಚ್ಛಾಶಕ್ತಿ ಇದ್ದಾಗ ಮಾತ್ರ ಜನರಿಗೆ ಉತ್ತಮ ಕಾರ್ಯಕ್ರಮಗಳನ್ನು ನೀಡಲು ಸಾಧ್ಯ. ಶಕ್ತಿ ಯೋಜನೆಯಡಿ ನಿಗಮದ ಬಸ್‌ಗಳಲ್ಲಿ ಎಲ್ಲ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಟ್ಟೆವು. ಇಲ್ಲಿವರೆಗೆ 146 ಕೋಟಿ ಬಾರಿ ಮಹಿಳೆಯರು, ವಿದ್ಯಾರ್ಥಿನಿಯರು ಪ್ರಯಾಣಿಸಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಈ ಯೋಜನೆ ಪೂರಕವಾಗಿದೆ' ಎಂದು ವಿಶ್ಲೇಷಿಸಿದರು.

1000 ಬಸ್: 'ಕೆಎಸ್‌ಆರ್‌ಟಿಸಿ ಈ ವರ್ಷ 1000 ಬಸ್‌ಗಳನ್ನು ಸೇರ್ಪಡೆ ಮಾಡಲಿದ್ದು, ಅದರಲ್ಲಿ 100 ಬಸ್‌ಗಳನ್ನು ಇಂದು ಲೋಕಾರ್ಪಣೆ ಮಾಡಲಾಗಿದೆ. ನಾಲ್ಕು ವರ್ಷಗಳಿಂದ ಹೊಸ ಬಸ್‌ಗಳ ಖರೀದಿಯಾಗಿರಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ 5,800 ಬಸ್‌ಗಳನ್ನು ಸೇರ್ಪಡೆ ಮಾಡಲು ಕ್ರಮ ಕೈಗೊಂಡಿದ್ದೇವೆ' ಎಂದು ವಿವರಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ ಕೆ. ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಬಿಬಿಎಂಪಿ: ಒಂದೇ ಕಾಮಗಾರಿಗೆ ಎರಡು ಸಲ ₹1.5 ಕೋಟಿ ಪಾವತಿ'

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಒಂದೇ ಕಾಮಗಾರಿಗೆ ಎರಡು ಬಾರಿ ಬಿಲ್ ಆಗಿರುವ ಹಲವು ಪ್ರಕರಣಗಳು ಪತ್ತೆಯಾಗಿವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಎರಡು ಬಾರಿ ಬಿಲ್ ಆಗಿರುವ, ಹೆಚ್ಚುವರಿ ಪಾವತಿ ಮಾಡಲಾಗಿರುವ ಪ್ರಕರಣಗಳ ತನಿಖೆಯನ್ನು ಈಗಾಗಲೇ ನಡೆಸಲಾಗುತ್ತಿದೆ. ಎರಡು ಬಾರಿ ಹಣ ಪಡೆದಂತಹ ಏಜೆನ್ಸಿಗಳಿಂದ, ಅವುಗಳ ಮುಂದಿನ ಕಾಮಗಾರಿಗಳ ಬಿಲ್‌ನಲ್ಲಿ ಕಡಿತ ಮಾಡಿಕೊಳ್ಳಲು ಯೋಜಿಸಲಾಗಿದೆ' ಎಂದರು.

2021ರಲ್ಲಿ ಮಾರ್ಚ್ ಮತ್ತು ಜುಲೈ ನಡುವೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ 'ಕೋವಿಡ್ ಕೇರ್ ಸೆಂಟರ್' ಸೌಲಭ್ಯಗಳಿಗಾಗಿ ಬೆಂಗಳೂರು ದಕ್ಷಿಣ ವಲಯದ ಆರೋಗ್ಯ ಅಧಿಕಾರಿಯವರು ರಾಜ ಎಂಟರ್‌ಪ್ರೈಸಸ್ ಏಜೆನ್ಸಿಗೆ ₹1.50 ಕೋಟಿ ಬಿಡುಗಡೆ ಮಾಡಿದ್ದರು. ಬಿಬಿಎಂಪಿ ಕೇಂದ್ರ ಯೋಜನೆ ವಿಭಾಗದ ದಕ್ಷಿಣ ವಲಯದಿಂದಲೂ ₹1.51 ಕೋಟಿಯನ್ನು ಅದೇ ಏಜೆನ್ಸಿಗೆ, ಅದೇ ಸೌಲಭ್ಯಗಳಿಗಾಗಿ 2021ರ ಮಾರ್ಚ್ ಮತ್ತು ಆಗಸ್ಟ್ ನಡುವೆ ಬಿಡುಗಡೆ ಮಾಡಿದ್ದರು. ಈ ಪ್ರಕರಣವನ್ನು ಲೆಕ್ಕ ಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿ, ಕ್ರಮ ಕೈಗೊಳ್ಳಲು ಶಿಫಾರಸು ಮಾಡಲಾಗಿತ್ತು.

'ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ 'ಕೋವಿಡ್ ಕೇರ್ ಸೆಂಟರ್' ಸೌಲಭ್ಯಗಳಿಗಾಗಿ ಎರಡು ಬಾರಿ ಹಣ ಬಿಡುಗಡೆ ಮಾಡಿರುವ ಆರೋಗ್ಯ ಅಧಿಕಾರಿ ಹಾಗೂ ಎಂಜಿನಿಯರ್‌ಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು ತಿಳಿಸಿದರು.

ಜೀತ ಪದ್ಧತಿ ಕುರಿತು ಜಾಗೃತಿ ಸಮಾವೇಶ ನಾಳೆ

ಬೆಂಗಳೂರು: ಜೀತಪದ್ಧತಿ ರದ್ದತಿ ಕಾನೂನು 1976ರ ಸಮರ್ಪಕ ಅನುಷ್ಠಾನದ ಕುರಿತು ಜೀವಿಕ, ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದಿಂದ ಇದೇ 7ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಜೀವಿಕ ಸಂಚಾಲಕ ಕಿರಣ ಕಮಲ ಪ್ರಸಾದ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೀತ ವಿಮುಕ್ತರಿಗೆ ಕೇಂದ್ರ ಸರ್ಕಾರದ ಪುನರ್ವಸತಿ ಯೋಜನೆಯ ಸಮಗ್ರ ಅಂಶಗಳ ಪ್ರಕಾರ ಎಲ್ಲ ಸೌಲಭ್ಯಗಳನ್ನು ಕೂಡಲೇ ಕಲ್ಪಿಸಬೇಕು. ಹಳ್ಳಿಗಳಲ್ಲಿ ವಾಸಿಸುವ ಜೀತವಿಮುಕ್ತರಿಗೆ ಸಿಗಬೇಕಾದ 5 ಎಕರೆ ಜಮೀನು ನೀಡಬೇಕು. ಬಹುತೇಕ ಜೀತದಾಳುಗಳು ಪರಿಶಿಷ್ಟ ಜಾತಿ ಮತ್ತು ಪಂಗಡದವರಾಗಿದ್ದಾರೆ. ಇವರಿಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ವಿಶೇಷ ಯೋಜನೆ ರೂಪಿಸಿ, ಅದನ್ನು ಕಾರ್ಯರೂಪಕ್ಕೆ ತರಬೇಕು. ಇದಕ್ಕಾಗಿ ಸರ್ಕಾರ ಮುಂದಿನ ಬಜೆಟ್‌ನಲ್ಲಿ ₹100 ಕೋಟಿ ಅನುದಾನ ನೀಡಬೇಕು' ಎಂದು ಒತ್ತಾಯಿಸಿದರು.

'ಜೀತ ಸಮಸ್ಯೆ ನಿರ್ಮೂಲನೆಗಾಗಿ ಕಾರ್ಯನಿರ್ವಹಿಸುತ್ತಿರುವ ತಜ್ಞರನ್ನೊಳಗೊಂಡ ರಾಜ್ಯಮಟ್ಟದ ಒಂದು ಪ್ರತ್ಯೇಕ ಆಯೋಗ ರಚಿಸಬೇಕು' ಎಂದು ಆಗ್ರಹಿಸಿದರು.

ಸರ್ಕಾರಿ ನೌಕರರ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರು ಅನುಷ್ಠಾನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 7ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರಿ ನೌಕರರ ವಿವಿಧ ಸಂಘಟನೆಗಳ ಮತ್ತು ಇಲಾಖಾ ಹಾಗೂ ವೃಂದ ಸಂಘಗಳ ಜಂಟಿ ಕ್ರಿಯಾ ಸಮಿತಿ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ಸಮನ್ವಯ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಿ. ಶಿವಶಂಕರ್, 'ರಾಜ್ಯದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಎಲ್ಲ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕು ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಗುತ್ತಿಗೆ, ಹೊರಗುತ್ತಿಗೆ ಅರೆಕಾಲಿಕ ನೇಮಕಾತಿಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು' ಎಂದು ಒತ್ತಾಯಿಸಿದರು.

'ಕೋವಿಡ್ ನೆಪದಲ್ಲಿ ತಡೆಹಿಡಿದಿರುವ 18 ತಿಂಗಳ ತುಟ್ಟಿಭತ್ಯೆ ಕೂಡಲೇ ಬಿಡುಗಡೆಗೊಳಿಸಬೇಕು. ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿನ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೀಘ್ರ ಪರಿಷ್ಕರಣೆ ಮಾಡಿ, ಜೇಷ್ಠತಾ ಪಟ್ಟಿ ಸಿದ್ಧಪಡಿಸಬೇಕು ಹಾಗೂ ನಿಯಮಾನುಸಾರ ಪದೋನ್ನತಿ ನೀಡಬೇಕು. ಆಡಳಿತ ಸುಧಾರಣೆ ನೆಪದಲ್ಲಿ ಇಲಾಖೆಗಳ ವಿಲೀನ, ನೌಕರರ ಸಂಖ್ಯೆ ಕಡಿತ, ಸಾರ್ವಜನಿಕ ಉದ್ದಿಮೆಗಳ, ಸರ್ಕಾರದ ಯೋಜನೆಗಳನ್ನು ಖಾಸಗೀಕರಣ ಮಾಡುವುದನ್ನು ಕೈಬಿಡಬೇಕು' ಎಂದು ಆಗ್ರಹಿಸಿದರು.

'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಕಾಯ್ದೆ ಸೇರಿದಂತೆ ಕೇಂದ್ರ ಸರ್ಕಾರಿ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 16ರಂದು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಕರೆ ನೀಡಿರುವ ರಾಷ್ಟ್ರೀಯ ಮುಷ್ಕರಕ್ಕೆ ಬೆಂಬಲ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ತೆರಿಗೆ: ಎಚ್ಚರಿಕೆಗೆ 'ಎಐ– ಐವಿಆರ್‌ಎಸ್'

ಬಿಬಿಎಂಪಿ: ಆಸ್ತಿ ಮಾಲೀಕರಿಗೆ ನಿತ್ಯವೂ ಕರೆ; ಮೊದಲ ಬಾರಿಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ ಮಾಲೀಕರಿಗೆ ನಿತ್ಯವೂ 'ಎಚ್ಚರಿಕೆಯ ಕರೆ' ಮಾಡಲು ನಿರ್ಧರಿಸಿರುವ ಬಿಬಿಎಂಪಿ, ಇದಕ್ಕಾಗಿ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆಯ 'ಐವಿಆರ್‌ಎಸ್' ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಗಿದೆ.

ಆಸ್ತಿ ತೆರಿಗೆ ಸಂಬಂಧ ಮಾಲೀಕರಿಗೆ ಧ್ವನಿ ಸಂದೇಶವನ್ನು ಕರೆ ಮೂಲಕ ನೀಡುವ 'ಇಂಟಿಗ್ರೇಟೆಡ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಮ್ (ಐವಿಆರ್‌ಎಸ್)' ಅಳವಡಿಸಿಕೊಳ್ಳಲು ಟೆಂಡರ್ ಆಹ್ವಾನಿಸಲಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳ ಮನವಿ ಮೇರೆಗೆ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಬಿಬಿಎಂಪಿ ಮಾಹಿತಿ ವಿಭಾಗ ಮುಂದಾಗಿದೆ.

'ಆಸ್ತಿ ತೆರಿಗೆ ಪಾವತಿ ಬಾಕಿ, ಕೈಗೊಳ್ಳಲಾಗುವ ಕ್ರಮಗಳನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಆಸ್ತಿ ಮಾಲೀಕರಿಗೆ 'ಐವಿಆರ್‌ಎಸ್' ಮೂಲಕ ಕರೆ ಮಾಡಿ ಆಗಾಗ್ಗೆ ತಿಳಿಸಲಾಗುತ್ತದೆ.

ಐವಿಆರ್‌ಎಸ್ ಸೌಲಭ್ಯಗಳು

- ಆಸ್ತಿ ಮಾಲೀಕರಿಗೆ ತೆರಿಗೆ ಬಾಕಿ ಇರುವ ಬಗ್ಗೆ ಆಗಾಗ್ಗೆ ಕರೆ ಮೂಲಕ ಸಂದೇಶ ನೀಡುವುದು
- ಐವಿಆರ್‌ಎಸ್ ಮೂಲಕ ನಿರ್ದಿಷ್ಟ ಸಂಖ್ಯೆ ಆಯ್ಕೆ ಮಾಡಿಕೊಂಡು ನಾಗರಿಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು
- ಕೃತಕ ಬುದ್ಧಿಮತ್ತೆ (ಎಐ) ಆಧಾರಿತವಾಗಿ ಸಾರ್ವಜನಿಕರ ಪ್ರಶ್ನೆಗಳಿಗೆ 'ಚಾಟ್‌ಬಾಟ್ ವ್ಯವಸ್ಥೆ'ಯಲ್ಲಿ ಉತ್ತರಿಸುವುದು
- ಅರ್ಜಿಗಳು ಹಾಗೂ ಸಮಸ್ಯೆಗಳನ್ನು ನಿವಾರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಐವಿಆರ್‌ಎಸ್ ಮೂಲಕ ಎಚ್ಚರಿಕೆ ಸಂದೇಶ ರವಾನಿಸುವುದು.
- ದೂರು ಹಾಗೂ ಪರಿಹಾರದ ಬಗ್ಗೆ ನಾಗರಿಕರಿಂದ ಪ್ರತಿಕ್ರಿಯೆ ಪಡೆದುಕೊಳ್ಳುವುದು.

ಇದರಿಂದ ಆಸ್ತಿ ತೆರಿಗೆ ಸಂಗ್ರಹದಲ್ಲಿ ಮತ್ತಷ್ಟು ವೇಗ ಕಂಡುಕೊಳ್ಳಬಹುದಾಗಿದೆ' ಎಂದು ಮಾಹಿತಿ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 20 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಲ್ಲಿವೆ. 2024ರ ಜನವರಿ ಅಂತ್ಯಕ್ಕೆ ಸುಮಾರು 6 ಲಕ್ಷ ಆಸ್ತಿಗಳ ತೆರಿಗೆ ಪಾವತಿಯಾಗಿಲ್ಲ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ತೆರಿಗೆ ಪಾವತಿ ಮಾಡಿಸಿಕೊಳ್ಳಲು ಕಂದಾಯ ವಿಭಾಗದ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. ಆದರೆ ಆಗಾಗ್ಗೆ ಮಾಲೀಕರಿಗೆ ನೆನಪಿಸುವ ಕಾರ್ಯ ಆಗುತ್ತಿಲ್ಲ. ಹೀಗಾಗಿ, ವೃತ್ತಿಪರ, ಐವಿಆರ್‌ಎಸ್ ಆಧಾರಿತ ತಂತ್ರಜ್ಞಾನ ಅಳವಡಿಸಿಕೊಳ್ಳಲು ಬಿಬಿಎಂಪಿ ಕಂದಾಯ ಇಲಾಖೆ ಮುಂದಾಗಿದೆ' ಎಂದರು.

'ಐವಿಆರ್‌ಎಸ್ ಕೇಂದ್ರವು ವಾರದ ಏಳೂ ದಿನ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಲಿದೆ. ದಿನವೂ ಸುಮಾರು 60 ಸಾವಿರ ಕರೆಗಳನ್ನು ಮಾಡಬೇಕಿದ್ದು, ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರ ಸಂಖ್ಯೆ ಕಡಿಮೆಯಾದಂತೆ ಈ ಕರೆಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಸಹಾಯ ವ್ಯವಸ್ಥೆ ಹಾಗೂ ಇತರೆ ದೂರು ವಿಭಾಗಗಳಿಂದ ಪ್ರತಿನಿತ್ಯ ಸುಮಾರು 200 ದೂರುಗಳನ್ನು ನಾಗರಿಕರಿಂದ ಬಿಬಿಎಂಪಿ ಸ್ವೀಕರಿಸುತ್ತಿದ್ದು, ಅದರ ಬಗ್ಗೆ ಕೈಗೊಂಡ ಕ್ರಮದ ಮಾಹಿತಿಯನ್ನೂ ನಾಗರಿಕರಿಗೆ ನೀಡಬೇಕು. ಎಲ್ಲ ಕರೆ ಹಾಗೂ ದೂರುಗಳ ದಾಖಲೆಯನ್ನು ಪ್ರತಿ ತಿಂಗಳೂ ಬಿಬಿಎಂಪಿಗೆ ಏಜೆನ್ಸಿ ಒದಗಿಸಬೇಕು' ಎಂದು ಅಧಿಕಾರಿಗಳು ತಿಳಿಸಿದರು.

'ಫೆ.21ರವರೆಗೆ ಟೆಂಡರ್ ಸಲ್ಲಿಸಲು ಅವಕಾಶವಿದ್ದು, ತಿಂಗಳಾಂತ್ಯಕ್ಕೆ ಎಲ್ಲ ಪ್ರಕ್ರಿಯೆ ಮುಗಿಯಲಿದೆ. ಮಾರ್ಚ್ ಮೊದಲ ವಾರದಿಂದ ಐವಿಆರ್‌ಎಸ್ ವ್ಯವಸ್ಥೆ ಆರಂಭಿಸುವ ಯೋಜನೆಯಿದೆ' ಎಂದರು.

'ಸಾರಿಗೆ ಕನ್ನಡ ರತ್ನ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರಿಗೆ ಸಿಗಬೇಕಾದ ಮಾನ್ಯತೆ, ಹಕ್ಕುಗಳು ಸಿಗುತ್ತಿಲ್ಲ. ಅಂಚೆ ಕಚೇರಿ, ರೈಲ್ವೆ ಇಲಾಖೆ ಸೇರಿದಂತೆ ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುವ ಪ್ರಮಾಣ ಕಡಿಮೆ' ಎಂದು ಕೆಎಸ್‌ಆರ್‌ಟಿಸಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ರಾಜ್ಯಾಧ್ಯಕ್ಷ ಮನು ಬಳಿಗಾರ್ ಬೇಸರ ವ್ಯಕ್ತಪಡಿಸಿದರು.

ಬಿಎಂಟಿಸಿ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಸೋಮವಾರ ನಡೆದ 16 ಮಂದಿ ಕನ್ನಡ ಪರಿಚಾರಕರಿಗೆ 'ಸಾರಿಗೆ ಕನ್ನಡ ರತ್ನ ಪ್ರಶಸ್ತಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡ, ನೆಲ, ಭಾಷೆಗೆ ಸಂಬಂಧಿಸಿದಂತೆ ಕೇಂದ್ರದಿಂದ ಸತತವಾಗಿ ಅನ್ಯಾಯವಾಗುತ್ತಿದೆ ಎಂದು ದೂರಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಗೌರವ ಸಲಹೆಗಾರ ವ.ಚ. ಚನ್ನೇಗೌಡ ಮಾತನಾಡಿ, '1.26 ಲಕ್ಷ ಸಾರಿಗೆ ಉದ್ಯೋಗಿಗಳಿದ್ದಾರೆ. ಬಹುತೇಕ ಎಲ್ಲರೂ ಕನ್ನಡಿಗರು ಎಂಬುದು ಸಂತೋಷದ ವಿಚಾರ. ಸಾರಿಗೆ ಸಂಸ್ಥೆಯಲ್ಲಿ ಆಡಳಿತ ಭಾಷೆ ಕನ್ನಡವೇ ಆಗಿದೆ' ಎಂದು ಶ್ಲಾಘಿಸಿದರು.

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಪ್ರಭುಸ್ವಾಮಿ, ರಾಜ್ಯ ಸಂಚಾಲಕ ಕೆ.ಎಸ್.ಹುಸೇನ್, ರಾಜ್ಯ ಜಂಟಿ ಕಾರ್ಯದರ್ಶಿ ಎಚ್.ಕೆ. ಸುರೇಶ್ ಭಾಗವಹಿಸಿದ್ದರು.

ಕನ್ನಡ ಪರಿಚಾರಕರಿಗೆ ಬಿಎಂಟಿಸಿ ಕನ್ನಡ ಕ್ರಿಯಾ ಸಮಿತಿವತಿಯಿಂದ ಸೋಮವಾರ 'ಸಾರಿಗೆ ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

8ಕ್ಕೆ 'ಬೆಂಗಳೂರು ಚಲೋ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ನಿಯಮ ರೂಪಿಸಬೇಕು. ಅಧ್ಯಕ್ಷ, ಸದಸ್ಯರಿಗೆ ಕಾರ್ಯ ಜವಾಬ್ದಾರಿ ನಿಗದಿ ಮಾಡಬೇಕು ಎಂದು ಒತ್ತಾಯಿಸಿ ಗ್ರಾಮ ಪಂಚಾಯಿತಿ ಸದಸ್ಯರು ಫೆ. 8ರಂದು 'ಬೆಂಗಳೂರು ಚಲೋ' ಹಮ್ಮಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ನೇತೃತ್ವದಲ್ಲಿ ನಡೆಯುವ ಚಳವಳಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಗ್ರಾಮ ಪಂಚಾಯಿತಿ ಸದಸ್ಯರು ಭಾಗವಹಿಸುವರು ಎಂದು ಒಕ್ಕೂಟದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಹೇಳಿದ್ದಾರೆ.

ಪಂಚಾಯಿತಿಗಳು ನೀಡುವ ಸೇವೆಗಳ ಸಂಖ್ಯೆ ಹೆಚ್ಚಳವಾಗಿದೆ. ಹಾಗಾಗಿ, ಬಾಪೂಜಿ ಸೇವಾ ಕೇಂದ್ರಗಳನ್ನು ಬಲಪಡಿಸಬೇಕು. ಮುಂಚೂಣಿ ಕಾರ್ಯಾಲಯಗಳನ್ನು ಸ್ಥಾಪಿಸಬೇಕು. ಅಧಿಕಾರ ವಿಕೇಂದ್ರೀಕರಣ ಕಾಯ್ದೆ ರಚಿಸಬೇಕು. ಗ್ರಾಮ ಪಂಚಾಯಿತಿ ಸದಸ್ಯರನ್ನು ರಾಜ್ಯ ಶಿಷ್ಟಾಚಾರದ ವ್ಯಾಪ್ತಿಗೆ ತರಬೇಕು. ಕೇರಳ ಮಾದರಿಯಲ್ಲಿ ಗೌರವಧನ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿ 'ಬೆಂಗಳೂರು ಚಲೋ' ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನಿಡಿದ್ದಾರೆ.

ಡ್ರೋನ್ ಕಣ್ಗಾವಲು

ಬೆಂಗಳೂರಿನ ಪ್ರಮುಖ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆಯ ಮೇಲೆ ನಿಗಾ ವಹಿಸಲು ಡ್ರೋನ್ ಬಳಕೆ ಮಾಡಿಕೊಳ್ಳಲಾಗುತ್ತಿದ್ದು ಪುರಭವನದ ಎದುರು ಸೋಮವಾರ ಅಶೋಕನಗರ ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ತಿಮ್ಮೇಗೌಡ ಅವರು ಡ್ರೋನ್ ಹಾರಿಸಿದರು

ಪ್ರಜಾವಾಣಿ ಚಿತ್ರ/ ರಂಜು ಪಿ.

ಚಿತ್ರಾವಳಿ

ಖಯಾಲ್ ಸಂಗೀತ ಅಕಾಡೆಮಿ ವತಿಯಿಂದ ತಬಲಾ ವಾದಕ ಸತೀಶ್ ಹಂಪಿಹೊಳಿ ಅವರಿಗೆ 'ಖಯಾಲ್ ಪುರಸ್ಕಾರ' ನೀಡಿ ಗೌರವಿಸಲಾಯಿತು. ಶಾಸಕ ಅಜಯ್ ಧರ್ಮಸಿಂಗ್, ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ಹಿಂದೂಸ್ತಾನಿ ಗಾಯಕ ಸೋಮನಾಥ ಮರಡೂರು, ಶಿವಾನಂದ ಸಾಲಿಮಠ ಮತ್ತು ವಾಣಿ ಮರಡೂರು ಪಾಲ್ಗೊಂಡಿದ್ದರು

ನೆಲಮಂಗಲ ಸಮೀಪದ ನಂದರಾಮಯ್ಯನಪಾಳ್ಯದ ಬ್ಲುಮೂನ್ ಶಾಲೆ ದಶಮಾನೋತ್ಸವ ಆಚರಣೆಯಲ್ಲಿ ನಿವೃತ್ತ ಯೋಧ ಎಂ.ಎನ್.ರವಿಕುಮಾರ್ ಅವರನ್ನು ಗೌರವಿಸಲಾಯಿತು. ಶಾಲೆಯ ಕಾರ್ಯದರ್ಶಿ ಸಿ.ಎನ್.ಚಂದ್ರಶೇಖರ್, ನಟಿ ಗಿರಿಜಾ ಲೋಕೇಶ್, ಶಾಲೆಯ ಅಧ್ಯಕ್ಷೆ ಭಾಗ್ಯಮ್ಮ, ದಾಸನಪುರ ಗ್ರಾ.ಪಂ ಸದಸ್ಯ ಮುತ್ತುರಾಜ್, ಸಿಗಂದೂರು ಚೌಡೇಶ್ವರಿ ದೇವಸ್ಥಾನದ ಕಾರ್ಯದರ್ಶಿ ರವಿಕುಮಾರ್, ಬ್ಲಾಸಂ ಶಾಲೆಯ ಚಿರಾಗ್ ಪಾಲ್ಗೊಂಡಿದ್ದರು

ತಜ್ಞರ ಸಮಿತಿ ವರದಿ ನಿರೀಕ್ಷೆಯಲ್ಲಿ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪಶ್ಚಿಮಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳ ಕರಡು ಅಧಿಸೂಚನೆ ಅಂತಿಮಗೊಳಿಸಲು ತಜ್ಞರ ಸಮಿತಿಯ ಶಿಫಾರಸುಗಳಿಗೆ ಕಾಯುತ್ತಿದ್ದೇವೆ' ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಖಾತೆಯ ರಾಜ್ಯ ಸಚಿವ ಅಶ್ವಿನ್ ಕುಮಾರ್ ಚೌಬೆ ಸೋಮವಾರ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಈ ಬಗ್ಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಕರ್ನಾಟಕ, ತಮಿಳುನಾಡು, ಕೇರಳ, ಗುಜರಾತ್, ಮಹಾರಾಷ್ಟ್ರ, ಗೋವಾ ರಾಜ್ಯಗಳಲ್ಲಿ ವ್ಯಾಪಿಸಿರುವ 56,825 ಚದರ ಕಿ.ಮೀ ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಸಚಿವಾಲಯವು 2022ರ ಜುಲೈ 6ರಂದು ಐದನೇ ಬಾರಿ ಕರಡು ಅಧಿಸೂಚನೆ ಹೊರಡಿಸಿತ್ತು. ಪರಿಸರ ಸೂಕ್ಷ್ಮ ಪ್ರದೇಶ ಕಡಿಮೆ ಮಾಡಬೇಕು ಎಂದು ಕರ್ನಾಟಕ ಸೇರಿ ಉಳಿದ ರಾಜ್ಯಗಳು ಒತ್ತಾಯಿಸಿದ್ದವು. ಇದರಿಂದಾಗಿ ಕರಡು ಅಧಿಸೂಚನೆಯನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ' ಎಂದಿದ್ದಾರೆ.

'ರಾಜ್ಯಗಳ ಆಕ್ಷೇಪದ ಬಗ್ಗೆ ಪರಿಶೀಲಿಸಲು ಸಚಿವಾಲಯದ ನಿವೃತ್ತ ಮಹಾನಿರ್ದೇಶಕರ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ. ರಾಜ್ಯಗಳಿಗೆ ಭೇಟಿ ನೀಡಿ ಚರ್ಚಿಸಿ ವರ್ಷದೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗಾಣಿಗ ಮಂಡಳಿ: ₹200 ಕೋಟಿ ಅನುದಾನಕ್ಕಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿಗೆ ಮುಂಬರುವ ಬಜೆಟ್‌ನಲ್ಲಿ ₹ 200 ಕೋಟಿ ಅನುದಾನ ನೀಡಬೇಕು' ಎಂದು ಆಗ್ರಹಿಸಿ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾದ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಎಲ್ಲರೂ ಒಂದಾಗಿ ನಿಗಮದ ಅನುದಾನಕ್ಕೆ ಮುಂದಾಗಿ' ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯದ ಎಲ್ಲ ಜಿಲ್ಲೆಗಳ ಸಮಾಜದ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿಯನ್ನು ಸ್ಥಾಪಿಸಿ 2023ರ ಫೆಬ್ರುವರಿ 20ರಂದು ಹೊರಡಿಸಲಾಗಿದೆ. ಈ ಮಂಡಳಿಯ ಅನುಷ್ಠಾನ, ನೋಂದಣಿ, ಕಚೇರಿ ಸ್ಥಾಪಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಗಾಣಿಗ ಸಮುದಾಯದವರು ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ. ಕುಲಕಸುಬು ಕಳೆದುಕೊಂಡು ಜೀವನ ಸಾಗಿಸಲು ಕಷ್ಟಪಡುತ್ತಿದ್ದಾರೆ. ಮಕ್ಕಳಿಗೆ ವಿದ್ಯಾಭ್ಯಾಸ, ಉದ್ಯೋಗ ಕೊಡಿಸಲು ಪರದಾಡುತ್ತಿದ್ದಾರೆ. ಸಮಾಜದ ಅಭಿವೃದ್ಧಿಗೆ ಸರ್ಕಾರ ಒತ್ತು ನೀಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ಪದಾಧಿಕಾರಿಗಳು – ಪ್ರಜಾವಾಣಿ ಚಿತ್ರ

7ರಂದು ಮಾಡಾಳ್ ಮಲ್ಲಿಕಾರ್ಜುನ ಬಿಜೆಪಿ ಸೇರ್ಪಡೆ

ಚನ್ನಗಿರಿ: ಕ್ಷೇತ್ರದ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಮಾಡಾಳ್ ಮಲ್ಲಿಕಾರ್ಜುನ ಫೆ.7ರಂದು ಬೆಂಗಳೂರಿನಲ್ಲಿ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣಕ್ಕೆ ಪಕ್ಷೇತರರಾಗಿ ಕಣಕ್ಕಿಳಿದಿದ್ದರು. ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರಿಂದ ಅವರನ್ನು ಆರು ವರ್ಷಗಳವರೆಗೆ ಬಿಜೆಪಿಯಿಂದ ಉಚ್ಚಾಟಿಸಲಾಗಿತ್ತು.

ಲೋಕಾಯುಕ್ತ ದಾಳಿಯಲ್ಲಿ ಬಹಿರಂಗ • ಮಧ್ಯವರ್ತಿಗಳ ಹಾವಳಿ, ಅಧಿಕಾರಿಗಳ ಗೈರು

ತಾಲ್ಲೂಕು ಕಚೇರಿಗಳಲ್ಲಿ ಅವ್ಯವಸ್ಥೆಯ ದರ್ಶನ

• ಪ್ರಜ್ವಲ್ ಡಿಸೋಜ

ಬೆಂಗಳೂರು: ಅನುಮತಿ ಇಲ್ಲದೇ ಅಧಿಕಾರಿಗಳು, ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗುವುದು, ಭಾರಿ ಸಂಖ್ಯೆಯ ಕಡತಗಳ ಬಾಕಿ, ಕಡತ ನಿರ್ವಹಣೆಯಲ್ಲಿ ಲೋಪ, ಮಧ್ಯವರ್ತಿಗಳ ಹಾವಳಿ ಸೇರಿದಂತೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ತಾಲ್ಲೂಕು ಕಚೇರಿಗಳು ಅವ್ಯವಸ್ಥೆಯ ಆಗರಗಳಾಗಿವೆ ಎಂಬುದನ್ನು ಲೋಕಾಯುಕ್ತದ ಅಧಿಕಾರಿಗಳ ತಪಾಸಣಾ ವರದಿ ಬಹಿರಂಗಪಡಿಸಿದೆ.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂಬತ್ತು ತಾಲ್ಲೂಕು ಕಚೇರಿಗಳ ಮೇಲೆ ಜನವರಿ 20ರಂದು ಏಕಕಾಲಕ್ಕೆ ದಾಳಿ ಮಾಡಿದ್ದ ಲೋಕಾಯುಕ್ತದ ಪೊಲೀಸ್ ಹಾಗೂ ನ್ಯಾಯಾಂಗ ವಿಭಾಗಗಳ ಅಧಿಕಾರಿಗಳು ಶೋಧ ನಡೆಸಿದ್ದರು. ಬೆಂಗಳೂರು ನಗರ ಜಿಲ್ಲೆಯ ಐದು ತಾಲ್ಲೂಕು ಕಚೇರಿಗಳಲ್ಲಿ ಕಂಡುಬಂದ ಅಂಶಗಳ ಕುರಿತು ತನಿಖಾ ತಂಡಗಳು ಸಲ್ಲಿಸಿರುವ ಪ್ರಾಥಮಿಕ ವರದಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಯಲಹಂಕ ತಾಲ್ಲೂಕು ಕಚೇರಿಯಲ್ಲಿ 43 ಅಧಿಕಾರಿಗಳು, ಸಿಬ್ಬಂದಿ ಅನುಮತಿ ಇಲ್ಲದೇ ಹೊರ ಹೋಗಿದ್ದರು. ಅವರು ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಲ್ಗೊಂಡಿರುವುದು ಪತ್ತೆಯಾಗಿದೆ. ಅಲ್ಲಿ 44 ಕಡತಗಳು ಒಂದರಿಂದ ನಾಲ್ಕು ತಿಂಗಳವರೆಗೆ ಬಾಕಿ ಇದ್ದರೆ, 16 ಕಡತಗಳು ಹಲವು ತಿಂಗಳಿಂದ ವಿಲೇವಾರಿ ಆಗದಿರುವುದು ಕಂಡುಬಂದಿದೆ' ಎಂಬ ಉಲ್ಲೇಖ ವರದಿಯಲ್ಲಿದೆ.

'2023ರ ಜುಲೈ 15ಕ್ಕೂ ಮೊದಲು ಸ್ವೀಕರಿಸಿದ್ದ ಅರ್ಜಿಗಳ ಸ್ವೀಕೃತಿಗೆ ಸಂಬಂಧಿಸಿದ ಕಡತವೇ ನಾಪತ್ತೆಯಾಗಿದೆ. ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದು, ಇನ್ನೂ ಎಫ್‌ಐಆರ್ ದಾಖಲಿಸಿಲ್ಲ. ಜುಲೈ 15ರ ನಂತರ ಅರ್ಜಿಗಳ ಸ್ವೀಕೃತಿಗೆ ಸಂಬಂಧಿಸಿದ ಮಾಹಿತಿಯನ್ನೂ ಸಮರ್ಪಕವಾಗಿ ದಾಖಲಿಸಿಲ್ಲ' ಎಂದು ತನಿಖಾ ತಂಡ ಹೇಳಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ 1,281 ಅರ್ಜಿಗಳನ್ನು ವಿಲೇವಾರಿ ಮಾಡದೇ ಬಾಕಿ ಉಳಿಸಿಕೊಳ್ಳಲಾಗಿದೆ. ಕಚೇರಿಯಲ್ಲಿದ್ದ 31 ಅಧಿಕಾರಿಗಳು, ಸಿಬ್ಬಂದಿ ಪೈಕಿ 19 ಮಂದಿ ಮಾತ್ರ ನಗದು ಘೋಷಿಸಿಕೊಂಡಿದ್ದರು.

ಮಧ್ಯವರ್ತಿಗಳ ಹಾವಳಿ: ಆನೇಕಲ್ ತಾಲ್ಲೂಕು ಕಚೇರಿಯಲ್ಲಿ ಮಧ್ಯವರ್ತಿಗಳು ಇದ್ದರು. ಅವರು ಮೊಬೈಲ್ ಬಳಸಿ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದ್ದುದು ಪತ್ತೆಯಾಗಿದೆ. ತಹಶೀಲ್ದಾರ್ ಹೆಸರೇ ಹಾಜರಾತಿ ಕಡತದಲ್ಲಿ ಇರಲಿಲ್ಲ. ಗ್ರೇಡ್–2 ತಹಶೀಲ್ದಾರ್ ಜನವರಿ ತಿಂಗಳಲ್ಲಿ 20ವರೆಗೂ ಹಾಜರಾತಿ ಕಡತಕ್ಕೆ ಸಹಿ ಮಾಡಿಲ್ಲ. ಕೆಲವು ಅಧಿಕಾರಿಗಳು, ಸಿಬ್ಬಂದಿಯೂ ಸಹಿ ಮಾಡಿರಲಿಲ್ಲ ಎಂದು ವರದಿ ಹೇಳಿದೆ.

2023ರ ಡಿಸೆಂಬರ್ ಅಂತ್ಯಕ್ಕೆ 3,119 ಅರ್ಜಿಗಳು ತಾಲ್ಲೂಕು ಕಚೇರಿಯಲ್ಲಿ ಬಾಕಿ ಇದ್ದವು. ಈ ಸಂಬಂಧ ನೋಟಿಸ್ ಕೂಡ ನೀಡದಿರುವುದು ಕಂಡುಬಂದಿದೆ ಎಂದು ತನಿಖಾ ತಂಡ ತಿಳಿಸಿದೆ.

ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿಯಲ್ಲಿ ಪಹಣಿ ತಿದ್ದುಪಡಿಗೆ ಸಂಬಂಧಿಸಿದ 530 ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದವು. ಕೆಲವು ಅರ್ಜಿಗಳು ಮೂರರಿಂದ ಆರು ತಿಂಗಳಿನಷ್ಟು ಹಿಂದಿನವು. 2023ರ ಜುಲೈ 18ರಂದು ಸಲ್ಲಿಕೆಯಾಗಿದ್ದ ಅರ್ಜಿ ಕೂಡ ಬಾಕಿ ಇದೆ ಎಂಬ ಉಲ್ಲೇಖ ವರದಿಯಲ್ಲಿದೆ. ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆಗೆ ತೆರಳಿದ್ದ ಅವಧಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರೇಡ್–2 ತಹಶೀಲ್ದಾರ್ ಕಚೇರಿಯಲ್ಲಿ ಇರಲಿಲ್ಲ. 'ಮೂವ್‌ಮೆಂಟ್ ವಹಿ'ಯಲ್ಲಿ ಈ ಬಗ್ಗೆ ಉಲ್ಲೇಖವಿರಲಿಲ್ಲ. ಹಲವು ಸಿಬ್ಬಂದಿ ಹಾಜರಾತಿ ಕಡತಕ್ಕೆ ಸಹಿ ಮಾಡಿರಲಿಲ್ಲ, ನಗದನ್ನೂ ಘೋಷಿಸಿಕೊಂಡಿರಲಿಲ್ಲ ಎಂದು ತನಿಖಾ ತಂಡ ತಿಳಿಸಿದೆ.

ಹಿರಿಯ ಅಧಿಕಾರಿಗಳಿಗೆ ಹೊಣೆ

'ಬಹುತೇಕ ತಾಲ್ಲೂಕು ಕಚೇರಿಗಳಲ್ಲಿ ಜನರು ದಿನಗಟ್ಟಲೆ ಬಂದು ಕಾದು ಕುಳಿತರೂ ಕೆಲಸ ಆಗುತ್ತಿಲ್ಲ ಎಂಬ ದೂರುಗಳಿವೆ. ಅಲ್ಲಿನ ಅಧಿಕಾರಿಗಳು ಉತ್ತರಿಸುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಹಿರಿಯ ಅಧಿಕಾರಿಗಳು ಈ ಕುರಿತು ನಿಗಾ ವಹಿಸುವಂತೆ ಶಿಫಾರಸು ಮಾಡಲಾಗುವುದು' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ಮಂಗಳವಾರ, ಫೆಬ್ರುವರಿ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 37 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ಹೃದ್ರೋಗಗಳಿಗೂ ಮಧುಮೇಹಕ್ಕೂ ನಂಟಿದೆ; ಅಸಡ್ಡೆ ಬೇಡ

ಆಳ-ಅಗಲ
ಕವಿರಾಜಮಾರ್ಗಕಾರನ ಎಲ್ಲೆಯನ್ನೂ ಮೀರಿದ ಕನ್ನಡಿಗರ ನೆಲೆ
‘ಪವಿತ್ರಜಲ ಸಿಂಪಡಿಸಿ ಹಿಂದೂ ಧರ್ಮಕ್ಕೆ ಸ್ವಾಗತ’ 7
ಸರ್ವರ್ ಸಮಸ್ಯೆ: ರೈತರು ಕಂಗಾಲು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,731	21,771	₹64,780 (ಬೆಂಗಳೂರು)	₹72,700 (ಬೆಂಗಳೂರು)	83.03

ಕೇಂದ್ರದ ಬಳಿ ಮಾತನಾಡಲು ಯಡಿಯೂರಪ್ಪ, ಬೊಮ್ಮಾಯಿಗೆ ಬಾಯಿಯೇ ಇಲ್ಲ. ವಿಜಯೇಂದ್ರಗೆ ಲೆಕ್ಕ ಗೊತ್ತೇನ್ರಿ, ಅಶೋಕನಿಗೆ ಏನೂ ಗೊತ್ತಾಗುವುದಿಲ್ಲ. ಬಿಜೆಪಿ ಸಂಸದರು ಬಾಯಿಯೇ ಬಿಡೋದಿಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಧಿಕಾರಕ್ಕೆ ಬಂದ 9 ತಿಂಗಳಲ್ಲೇ ಸಿದ್ದರಾಮಯ್ಯ ಸರ್ಕಾರ ಜನಪ್ರಿಯತೆ ಕಳೆದುಕೊಂಡಿದೆ. ಜನರ ಗಮನ ಬೇರೆಡೆ ಸೆಳೆಯಲು ದೆಹಲಿಯಲ್ಲಿ ಪ್ರತಿಭಟನೆಯ ಬೀದಿನಾಟಕ ಮಾಡಲು ಹೊರಟಿದ್ದಾರೆ
ಆರ್.ಅಶೋಕ, ವಿರೋಧ ಪಕ್ಷದ ನಾಯಕ, ವಿಧಾನಸಭೆ

ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಿದೆ. ಈ ಅನ್ಯಾಯವನ್ನು ನೋಡಿಕೊಂಡು ಇನ್ನೆಷ್ಟು ದಿನ ಸುಮ್ಮನೆ ಕೂರಬೇಕು? ಅದಕ್ಕಾಗಿ ಪ್ರತಿಭಟನೆ ಮಾಡುತ್ತಿದ್ದೇವೆ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಿದ್ದರಾಮಯ್ಯ ಸತ್ಯ ಮುಚ್ಚಿಟ್ಟು ರಾಜಕೀಯ ಸ್ಟಂಟ್ ಮಾಡುತ್ತಿದ್ದಾರೆ. ಇವರ ವೈಫಲ್ಯದಿಂದ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ
ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ತಾರತಮ್ಯಕ್ಕೆ ‘ಕೈ’ ಸರ್ಕಾರ ಆಕ್ರೋಶ

‘ಮೋದಿ, ನಿರ್ಮಲಾರಿಂದ ₹1.87 ಲಕ್ಷ ಕೋಟಿ ನಷ್ಟ’ • ನಾಳೆ ದೆಹಲಿಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಪಾಲು ಹಂಚಿಕೆ, ಅನುದಾನ, ನೆರವು ನೀಡಿಕೆಯ ವಿಷಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ನಿರಂತರ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ರಾಷ್ಟ್ರ ಮಟ್ಟದಲ್ಲಿ ಪ್ರಸ್ತಾಪಿಸಲು ಅಣಿಯಾಗಿದೆ.

ದೆಹಲಿಯ ಜಂತರ್‌ಮಂತರ್‌ನಲ್ಲಿ ಬುಧವಾರ ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ನಡೆಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಬಿಂಬಿಸಲು ಕಾಂಗ್ರೆಸ್ ಮುಂದಾಗಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಪ್ರಧಾನಿ ಮೋದಿ ಮತ್ತು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ವಾಗ್ದಾಳಿ ನಡೆಸಿದರು. ‘ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಯ್ಯುವ ಕೆಲಸ ಮಾಡುತ್ತಿದ್ದಾರೆ. ಹಾಲು ಕೊಡುವ ಹಸುವಿನ ಕೆಚ್ಚಲು ಕೊಯ್ಯಲು ಹೊರಟಿದ್ದಾರೆ’ ಎಂದು ಕೆಂಡಕಾರಿದರು.

‘ಕೇಂದ್ರ ಸರ್ಕಾರದಿಂದ ತೆರಿಗೆ ಪಾಲು ಹಂಚಿಕೆ, ಸೆಸ್, ಸರ್‌ಚಾರ್ಜ್ ಮತ್ತು ವಿಶೇಷ ಅನುದಾನದ ನೀಡಿಕೆಯಲ್ಲಿ 2017ರಿಂದ ಇಲ್ಲಿಯ ವರೆಗೆ ರಾಜ್ಯಕ್ಕೆ ₹1,87,867 ಕೋಟಿ ನಷ್ಟ ಆಗಿದೆ. ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುವುದನ್ನು ಒಪ್ಪಲು ಸಾಧ್ಯವಿಲ್ಲ. ರಾಜ್ಯದ ವಿರುದ್ಧದ ಕೇಂದ್ರದ ಧೋರಣೆಯನ್ನು ನಾವು ವಿರೋಧಿಸುತ್ತೇವೆ’ ಎಂದರು.

‘ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿಗೆ ಹಣ ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ಅವರೂ ಅಭಿವೃದ್ಧಿ ಹೊಂದಲಿ. ಆದರೆ, ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡುವುದನ್ನು ಸಹಿಸುವುದಿಲ್ಲ’ ಎಂದು ಹೇಳಿದರು.

‘ಬಿಜೆಪಿ ವಿರುದ್ಧ ರಾಜಕೀಯ ಕಾರಣಕ್ಕಾಗಲಿ, ಚುನಾವಣೆಯ ಹಿನ್ನೆಲೆಯಲ್ಲಾಗಲಿ ನಾವು ಈ ಪ್ರತಿಭಟನೆ ಮಾಡುತ್ತಿಲ್ಲ. ನರೇಂದ್ರ ಮೋದಿ ಅವರು ಪ್ರಧಾನಿ ಆದ ಬಳಿಕ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ ಎಂಬುದನ್ನು ದೇಶಕ್ಕೇ ಮನವರಿಕೆ ಮಾಡಲು ಹೊರಟಿದ್ದೇವೆ. ಈ ಬಗ್ಗೆ ಶ್ವೇತಪತ್ರವನ್ನು ಹೊರಡಿಸುವ ಬಗ್ಗೆ ಗಂಭೀರ ಆಲೋಚನೆ ಮಾಡುತ್ತಿದ್ದೇವೆ’ ಎಂದೂ ಹೇಳಿದರು.

7ನೇ ಪುಟ ನೋಡಿ

‘ರಾಜಸ್ವ ಸ್ವೀಕೃತಿ ಹಿನ್ನಡೆ ಏಕೆ ಉತ್ತರಿಸಿ’

ರಾಜಸ್ವ ಸ್ವೀಕೃತಿ ಗುರಿ (ರೆವೆನ್ಯೂ ರಿಸೀಟ್) ₹2 ಲಕ್ಷ 38 ಸಾವಿರ ಕೋಟಿ ಇದ್ದು, ಡಿಸೆಂಬರ್ ಅಂತ್ಯಕ್ಕೆ ₹1 ಲಕ್ಷ 61 ಸಾವಿರ ಕೋಟಿ ಮಾತ್ರ ಸ್ವೀಕಾರ ಆಗಿದೆ. ಶೇ 67ರಷ್ಟು ಮಾತ್ರ ಸಾಧನೆ ಆಗಿದೆ. ನಮ್ಮ ಸರ್ಕಾರ ಇದ್ದಾಗ ಶೇ 82ರಷ್ಟು ಗುರಿ ಸಾಧಿಸಿದ್ದೆವು. ಸಿಎಂಗೆ ಗುರಿ ಸಾಧಿಸಲು ಆಗುತ್ತಿಲ್ಲ. ಶೇ 82ರಿಂದ ಶೇ 67ಕ್ಕೆ ಇಳಿದುದಕ್ಕೆ ಮೋದಿ ಅವರ ಮೇಲೆ ಆರೋಪ ಮಾಡುವುದನ್ನು ಬಿಡಲಿ. ಗುರಿ ಮುಟ್ಟಲು ಏಕೆ ಸಾಧ್ಯವಾಗಿಲ್ಲ ಎಂದು ಜನರಿಗೆ ಉತ್ತರಿಸಲಿ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ರಾಜ್ಯಗಳಿಗೆ ಅನುದಾನ ತಾರತಮ್ಯ ನಿರ್ಮಲಾ – ಅಧೀರ್ ಜಟಾಪಟಿ

ನವದೆಹಲಿ: ಕರ್ನಾಟಕ ಸೇರಿದಂತೆ ಬಿಜೆಪಿಯೇತರ ಪಕ್ಷಗಳ ಆಡಳಿತ ಹೊಂದಿರುವ ರಾಜ್ಯಗಳಿಗೆ ಅನುದಾನ ಬಿಡುಗಡೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಲೋಕಸಭೆಯಲ್ಲಿ ಕಾಂಗ್ರೆಸ್

ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಡುವೆ ಸೋಮವಾರ ಜಟಾಪಟಿ ನಡೆದಿದೆ. ಅಧೀರ್ ರಂಜನ್ ಅವರು ತಾರತಮ್ಯದ ವಿಚಾರವನ್ನು ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪಿಸಿದರು. ಆದರೆ, ನಿರ್ಮಲಾ ಸೀತಾರಾಮನ್ ಇದನ್ನು ಬಲವಾಗಿ ಅಲ್ಲಗಳೆದರು. ‘ಪಟ್ಟಭದ್ರ ಹಿತಾಸಕ್ತಿಗಳು ಇಂತಹ ರಾಜಕೀಯಪ್ರೇರಿತ ಆರೋಪ ಮಾಡುತ್ತಿವೆ. ಆ ಮೂಲಕ ಸಂತೋಷ ಪಡುತ್ತಿವೆ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ವ್ಯವಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಅಂತಹ ಪರಿಸ್ಥಿತಿ ಉದ್ಭವಿಸಿಲ್ಲ. ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತದೆ’ ಎಂದು ನಿರ್ಮಲಾ ಸ್ಪಷ್ಟಪಡಿಸಿದರು. ಈ ವೇಳೆ ನಿರ್ಮಲಾ ಹಾಗೂ ಅಧೀರ್ ನಡುವೆ ಮಾತಿನ ಜಟಾಪಟಿ ನಡೆಯಿತು.

ಕೇಂದ್ರ ಸರ್ಕಾರವು ಅನುದಾನ ಬಿಡುಗಡೆಯಲ್ಲಿ ಅನ್ಯಾಯ, ತಾರತಮ್ಯ ಹಾಗೂ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಬುಧವಾರ (ಇದೇ 7ರಂದು) ನವದೆಹಲಿಯಲ್ಲಿ ಪ್ರತಿಭಟನೆ ನಡೆಸಲಿದೆ.

ವಿವರ 7

ಸಂಸತ್‌ನಲ್ಲಿ ಸಾಮರಸ್ಯ

ವಿವಿಧ ಅಲ್ಪಸಂಖ್ಯಾತ ಸಮುದಾಯಗಳನ್ನು ಪ್ರತಿನಿಧಿಸುವ ಧಾರ್ಮಿಕ ಮುಖಂಡರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ಸೋಮವಾರ ಸಂಸತ್ ಆವರಣಕ್ಕೆ ಬಂದಿದ್ದರು –ಪಿಟಿಐ ಚಿತ್ರ

11.48 ಕೋಟಿ ಪ್ಯಾನ್‌ಗಳಿಗೆ ಜೋಡಣೆಯಾಗದ ಆಧಾರ್

₹602 ಕೋಟಿ ದಂಡ ಸಂಗ್ರಹ

ನವದೆಹಲಿ (ಪಿಟಿಐ): ಗಡುವಿನೊಳಗೆ ಪ್ಯಾನ್– ಆಧಾರ್ ಜೋಡಣೆ ಮಾಡದ ವ್ಯಕ್ತಿಗಳಿಂದ ದಂಡದ ರೂಪದಲ್ಲಿ ₹601.97 ಕೋಟಿ ಸಂಗ್ರಹಿಸಲಾಗಿದೆ ಎಂದು ಕೇಂದ್ರ ಸರ್ಕಾರವು, ಸೋಮವಾರ ಲೋಕಸಭೆಗೆ ತಿಳಿಸಿದೆ.

ವಿನಾಯಿತಿ ಪಡೆದ ಕೆಲವು ವರ್ಗಗಳನ್ನು ಹೊರತುಪಡಿಸಿ, ಪ್ಯಾನ್‌ಗೆ ಆಧಾರ್ ಸಂಖ್ಯೆ ಜೋಡಿಸಲು 2023ರ ಜೂನ್ 30ರ ಗಡುವು ನೀಡಲಾಗಿತ್ತು. ಆ ವರ್ಷದ ಜುಲೈ 1ರ ನಂತರ ಜೋಡಣೆಗೆ ಮುಂದಾದರೆ ₹1,000 ದಂಡ ಪಾವತಿಸುವಂತೆ ಸರ್ಕಾರ ಆದೇಶಿಸಿತ್ತು.

ದೇಶದಲ್ಲಿ ಇನ್ನೂ 11.48 ಕೋಟಿ ಪ್ಯಾನ್ ಕಾರ್ಡ್‌ಗಳಿಗೆ ಆಧಾರ್ ಜೋಡಣೆಯಾಗಿಲ್ಲ (ಜನವರಿ 29ರ ವರೆಗೆ) ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಸಂಸತ್‌ನ ಕೆಳಮನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಅಂತಿಮ ಗಡುವಿನೊಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸದ ವ್ಯಕ್ತಿಗಳಿಂದ 2023ರ ಜುಲೈ 1ರಿಂದ ಪ್ರಸಕ್ತ ವರ್ಷದ ಜನವರಿ 31ರ ವರೆಗೆ ಈ ದಂಡ ಮೊತ್ತವನ್ನು ಸಂಗ್ರಹಿಸಲಾಗಿದೆ ಎಂದು ಹೇಳಿದ್ದಾರೆ.

ಆಧಾರ್ ಜೋಡಣೆ ಮಾಡದವರ ಪ್ಯಾನ್ ಸಂಖ್ಯೆಯು 2023ರ ಜುಲೈ 1ರ ಬಳಿಕ ನಿಷ್ಕ್ರಿಯವಾಗಲಿದೆ. ಆ ಬಳಿಕ ತೆರಿಗೆ ಪಾವತಿದಾರರು ತೆರಿಗೆ ಮರುಪಾವತಿ (ರೀಫಂಡ್) ಪಡೆಯಲು ಅವಕಾಶ ಇರುವುದಿಲ್ಲ ಎಂದು ಆದಾಯ ತೆರಿಗೆ ಇಲಾಖೆ ಸ್ಪಷ್ಟಪಡಿಸಿತ್ತು. ಅಲ್ಲದೇ, ಅಂತಹ ತೆರಿಗೆದಾರರ ಟಿಡಿಎಸ್ ಹಾಗೂ ಟಿಸಿಎಸ್ ಹೆಚ್ಚಿನ ಪ್ರಮಾಣದಲ್ಲಿ ಕಡಿತವಾಗಲಿದೆ. ಅಂತಹವರು ನಿಷ್ಕ್ರಿಯವಾದ ಪ್ಯಾನ್ ಮತ್ತು ಆಧಾರ್ ಸಂಖ್ಯೆ ನೀಡಿ ₹1,000 ಪಾವತಿಸಿ ಮತ್ತೆ ಸಕ್ರಿಯಗೊಳಿಸಿಕೊಳ್ಳಬಹುದು ಎಂದು ತಿಳಿಸಿತ್ತು.

ಕೆಎಫ್‌ಡಿ: ಒಂದೇ ದಿನ 13 ಮಂದಿಗೆ ಸೋಂಕು ದೃಢ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಂಗನ ಕಾಯಿಲೆ (ಕೆಎಫ್‌ಡಿ) ಹೆಚ್ಚಳಗೊಂಡಿದೆ. ಕಳೆದ 24 ಗಂಟೆಗಳಲ್ಲಿ ಹೊಸನಗರ ಹಾಗೂ ತೀರ್ಥಹಳ್ಳಿ ತಾಲ್ಲೂಕಿನ 13 ಜನರಲ್ಲಿ ಸೋಂಕು ದೃಢಪಟ್ಟಿದೆ.

ಹೊಸನಗರ ತಾಲ್ಲೂಕಿನ ಮಾರುತಿಪುರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಮಾರುತಿಪುರ, ಮಳವಳ್ಳಿ, ಹೊಸ್ಕೆರೆ, ಕೇಶವಪುರ, ವಿಜಯಪುರ, ಮಾವಿನಹೊಳೆಯ 8 ಜನರಿಗೆ, ಸಂಪೆಕಟ್ಟೆಯ ಇಬ್ಬರಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ.

ಈ ಎಲ್ಲರನ್ನೂ ಸಾಗರದ ವಿಭಾಗೀಯ ಅಸ್ಪತ್ರೆಗೆ ದಾಖಲಿಸಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಮಾಳೂರು, ಗುಡ್ಡೆಕೊಪ್ಪ ಹಾಗೂ ಎಡಬಟ್ಟೆಯ ತಲಾ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಇವರಿಗೆ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

‘ಎಲ್ಲರ ಆರೋಗ್ಯ ಸ್ಥಿರವಾಗಿದೆ. ಸಂಪೆಕಟ್ಟೆಯ 72 ವರ್ಷದ ವೃದ್ಧರೊಬ್ಬರು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆನೀಡಲಾಗುತ್ತಿದೆ’ ಎಂದು ಡಿಎಚ್‌ಒ ರಾಜೇಶ ಸುರಗಿಹಳ್ಳಿ ‘ಪ್ರಜಾವಾಣಿ’ಗೆ ತಿಳಿಸಿದರು.

3ನೇ ಅವಧಿಯಲ್ಲಿ ದೊಡ್ಡ ನಿರ್ಧಾರ: ಅತಿದೊಡ್ಡ ಆರ್ಥಿಕತೆ ‘ಗ್ಯಾರಂಟಿ’– ಮೋದಿ

‘400 ಸ್ಥಾನ ಗೆದ್ದು ಮತ್ತೆ ಅಧಿಕಾರಕ್ಕೆ’

ನವದೆಹಲಿ (ಪಿಟಿಐ): ಬಿಜೆಪಿ ನೇತೃತ್ವದ ಎನ್‌ಡಿಎ ಭಾರಿ ಬಹುಮತದೊಂದಿಗೆ ಕೇಂದ್ರದಲ್ಲಿ ಸತತ ಮೂರನೇ ಅವಧಿಗೆ ಅಧಿಕಾರಕ್ಕೇರಲಿದೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರವಾಗಿ ಲೋಕಸಭೆಯಲ್ಲಿ ಸೋಮವಾರ ಭಾಷಣ ಮಾಡಿದ ಅವರು, ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 370ಕ್ಕೂ ಅಧಿಕ ಸ್ಥಾನಗಳನ್ನು ಹಾಗೂ ಎನ್‌ಡಿಎ ಮೈತ್ರಿಕೂಟವು 400ಕ್ಕೂ ಅಧಿಕ ಸ್ಥಾನಗಳನ್ನು ಗೆಲ್ಲಲಿದೆ’ ಎಂಬ ಭರವಸೆಯ ಮಾತುಗಳನ್ನಾಡಿದರು.

‘ಇಡೀ ದೇಶದಲ್ಲಿ ಬಿಜೆಪಿ ಪರ ಅಲೆ ಇರುವುದನ್ನು ಗಮನಿಸಿದ್ದೇನೆ. ಚುನಾವಣೆಗೆ 100ರಿಂದ 125 ದಿನಗಳಷ್ಟೇ ಬಾಕಿಯಿವೆ. ಅಬ್ ಕೀ ಬಾರ್’ ಎಂದು ಹೇಳಿದ ಮೋದಿ ಮೌನ ವಹಿಸಿದಾಗ, ಬಿಜೆಪಿ ಸದಸ್ಯರು ‘400 ಪಾರ್’ (400ಕ್ಕೂ ಅಧಿಕ) ಎನ್ನುತ್ತಾ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

‘ನಮ್ಮ ಸರ್ಕಾರವು ಮೂರನೇ ಅವಧಿಯಲ್ಲಿ ‘ದೊಡ್ಡ ನಿರ್ಧಾರ’ಗಳನ್ನು ತೆಗೆದುಕೊಳ್ಳಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಲೋಕಸಭೆಯಲ್ಲಿ ಮಾತನಾಡಿದರು –ಪಿಟಿಐ ಚಿತ್ರ

ಮುಂದಿನ 1,000 ವರ್ಷಗಳಿಗೆ ಸಮೃದ್ಧ ಭಾರತಕ್ಕೆ ಅಡಿಪಾಯ ಹಾಕುವಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದ್ದೇವೆ. ದೇಶವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆಯಲಿದೆ’ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ಲೋಕಸಭೆಯಲ್ಲಿ ತಮ್ಮ ಎರಡನೇ ಅವಧಿಯ ಕೊನೆಯ ಭಾಷಣ ಮಾಡಿದ ಪ್ರಧಾನಿ, ಕಾಂಗ್ರೆಸ್ ಒಳಗೊಂಡಂತೆ ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಮಾತಿನ ಚಾಟಿ ಬೀಸಿದರು. ತಮ್ಮ 100 ನಿಮಿಷಗಳ ಭಾಷಣದಲ್ಲಿ ಸರ್ಕಾರದ ಸಾಧನೆಗಳನ್ನು ಬಿಡಿಸಿಟ್ಟರು.

‘ಪ್ರತಿಪಕ್ಷಗಳಿಗೆ ಇಂದು ಒದಗಿರುವ ದಯನೀಯ ಸ್ಥಿತಿಗೆ ಕಾಂಗ್ರೆಸ್ ಪಕ್ಷವೇ ಪ್ರಮುಖ ಕಾರಣ. ಉತ್ತಮ ಪ್ರತಿಪಕ್ಷ ಆಗುವಂತಹ ಅವಕಾಶ ಕಾಂಗ್ರೆಸ್‌ಗೆ ಲಭಿಸಿತ್ತು. ಆದರೆ, ಕಳೆದ ಹತ್ತು ವರ್ಷಗಳಲ್ಲಿ ತನ್ನ ಜವಾಬ್ದಾರಿಯನ್ನು ನಿಭಾಯಿಸಲು ವಿಫಲವಾಗಿದೆ’ ಎಂದು ದೂರಿದರು.

ಕಾಂಗ್ರೆಸ್ ಪಕ್ಷವು ಒಂದೇ ಕುಟುಂಬದ ಹಿಡಿತಕ್ಕೆ ಸಿಲುಕಿಕೊಂಡಿದೆ. ಜನರ ಆಕಾಂಕ್ಷೆಗಳು ಮತ್ತು ಸಾಧನೆಗಳನ್ನು ನೋಡಲು ಅವರಿಗೆ ಎಂದಿಗೂ ಸಾಧ್ಯವಾಗಿಲ್ಲ
ನರೇಂದ್ರ ಮೋದಿ, ಪ್ರಧಾನಿ

ಈ ದೇಶದಲ್ಲಿ ಪ್ರತಿಯೊಬ್ಬರಿಗೂ ಕನಸು ಕಾಣುವ ಹಕ್ಕು ಇದೆ. 400 ಅಥವಾ 500 ಸ್ಥಾನಗಳ ಕನಸು ಕಾಣುವ ಹಕ್ಕು ಪ್ರಧಾನಿಗೆ ಇದೆ. ಆದರೆ ವಾಸ್ತವ ಬೇರೆಯೇ ಇದೆ
ಜಾನ್ ಬ್ರಿಟ್ಟಾಸ್, ಸಿಪಿಎಂ ನಾಯಕ

7ನೇ ಪುಟ ನೋಡಿ

ಪಣಂಬೂರು ಬೀಚ್‌ನಲ್ಲಿ ಮತೀಯ ಗೂಂಡಾಗಿರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಪಣಂಬೂರು ಬೀಚ್‌ನಲ್ಲಿ ಜೊತೆಯಲ್ಲಿದ್ದ ಮುಸ್ಲಿಂ ಯುವಕ– ಹಿಂದೂ ಯುವತಿಗೆ ಕಿರುಕುಳ ನೀಡಿ ಮತೀಯ ಗೂಂಡಾಗಿರಿ ನಡೆಸಿದ ಆರೋಪದ ಮೇರೆಗೆ ಪೊಲೀಸರು ಹಿಂದುತ್ವವಾದಿ ಸಂಘಟನೆಯ ನಾಲ್ವರನ್ನು ಬಂಧಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ಪಿಲಾತಬೆಟ್ಟು ಗ್ರಾಮದ ಪ್ರಶಾಂತ್ ಭಂಡಾರಿ (38), ಬೆಳ್ತಂಗಡಿ ತಾಲ್ಲೂಕು ಕರಾಯ ಗ್ರಾಮದ ಉಮೇಶ್ ಪಿ. (23), ಪುತ್ತಿಲ ಗ್ರಾಮದ ಸುಧೀರ್ (26) ಮತ್ತು ಮಚ್ಚಿನ ಗ್ರಾಮದ ಕೀರ್ತನ್ ಪೂಜಾರಿ (20) ಬಂಧಿತರು. ಆರೋಪಿಗಳ ವಿರುದ್ಧ, ಅಕ್ರಮ ಕೂಟ ರಚನೆ, ಯುವಕ– ಯುವತಿಯನ್ನು ತಡೆದು ಅಡ್ಡಿಪಡಿಸಿದ್ದು, ಉದ್ದೇಶಪೂರ್ವಕವಾಗಿ ಅವಮಾನಿಸಿ, ಶಾಂತಿಭಂಗವನ್ನುಂಟು ಮಾಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕರೆದಾಗ ಠಾಣೆಗೆ ಹಾಜರಾಗುವಂತೆ ಸೂಚಿಸಿ, ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಅವರನ್ನು ಬಿಟ್ಟುಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ 28 ವರ್ಷದ ಯುವತಿಯೊಬ್ಬರು ಮತೀಯ ಗೂಂಡಾಗಿರಿ ವಿರುದ್ಧ ಪಣಂಬೂರು ಠಾಣೆಗೆ ದೂರು ನೀಡಿದ್ದರು.

‘ನಾನು ಕೆಲಸದ ನಿಮಿತ್ತ ಮಲ್ಪೆಗೆ ಹೋಗುವವಳಿದ್ದೆ. ನನಗೆ ಪರಿಚಯವಿದ್ದ ಹುಡುಗನಿಗೆ ಸಾಹಿತ್ಯ ಕ್ಷೇತ್ರದಲ್ಲಿ ಪ್ರಶಸ್ತಿ ದೊರೆತಿದ್ದು, ಆತನಿಗೆ ಅಭಿನಂದನೆ ಸಲ್ಲಿಸಲು ಪಣಂಬೂರು ಬೀಚ್‌ನಲ್ಲಿ ಭಾನುವಾರ ಸಂಜೆ 4.50 ಸುಮಾರಿಗೆ ಭೇಟಿಯಾಗಿದ್ದೆ. ಆಗ ಕೆಲವು ಯುವಕರ ಗುಂಪೊಂದು ನಮ್ಮಿಬ್ಬರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿತ್ತು. ನಾವಿಬ್ಬರು ಒಟ್ಟಿಗೆ ಇದ್ದಿದ್ದಕ್ಕೆ ಆ ಗುಂಪಿನಲ್ಲಿದ್ದವರು ಆಕ್ಷೇಪ ವ್ಯಕ್ತಪಡಿಸಿ ಬೈದಿದ್ದರು. ಇನ್ನು ಕೆಲವರು ಇದನ್ನು ವಿಡಿಯೊ ಚಿತ್ರೀಕರಣ ಮಾಡಿದ್ದರು’ ಎಂದು ಯುವತಿ ದೂರಿನಲ್ಲಿ ಆರೋಪಿಸಿದ್ದಾರೆ.

‘ಘಟನೆ ನಡೆದ ಮಾಹಿತಿ ಬಂದ ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದ ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದು, ಪರಿಸ್ಥಿತಿ ತಿಳಿಗೊಳಿಸಿದ್ದರು. ಇಂತಹ ಘಟನೆಗಳು ಮರುಕಳಿಸುವುದನ್ನು ತಡೆಯಲು ಪಣಂಬೂರು ಬೀಚ್, ತಣ್ಣೀರುಬಾವಿ ಬೀಚ್ ಮತ್ತು ಟ್ರೀ ಪಾರ್ಕ್‌ಗಳಲ್ಲಿ ನಿತ್ಯವೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು’ ಎಂದು ನಗರದ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಚಂಡೀಗಢ ಮೇಯರ್ ಚುನಾವಣೆ ಪ್ರಜಾತಂತ್ರದ ಕೊಲೆ -‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಚಂಡೀಗಢ ಮೇಯರ್ ಹುದ್ದೆಗೆ ನಡೆದ ಚುನಾವಣೆಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಕಾಪಿಡುವಂತೆ ಸುಪ್ರೀಂ ಕೋರ್ಟ್ ಸೋಮವಾರ ಸೂಚನೆ ನೀಡಿದೆ. ಈ ಚುನಾವಣೆಯಲ್ಲಿ ಬಿಜೆಪಿಯ ಮನೋಜ್ ಕುಮಾರ್ ಸೋನಕರ್ ಅವರು ಎಎಪಿ–ಕಾಂಗ್ರೆಸ್‌ನ ಜಂಟಿ ಅಭ್ಯರ್ಥಿಯನ್ನು ಸೋಲಿಸಿದ್ದರು.

ಮೇಯರ್ ಚುನಾವಣೆಯಲ್ಲಿ ಒಟ್ಟು ಎಂಟು ಮತಗಳನ್ನು ಅಸಿಂಧುಗೊಳಿಸಲಾಗಿತ್ತು. ‘ಚುನಾವಣಾಧಿಕಾರಿಯು ಮತಪತ್ರಗಳನ್ನು ಕೆಡಿಸಿರುವುದು ಸ್ಪಷ್ಟವಾಗಿದೆ, ಇದು ಪ್ರಜಾತಂತ್ರದ ಅಣಕ, ಪ್ರಜಾತಂತ್ರದ ಕೊಲೆ. ಅವರ ವಿರುದ್ಧ ಕ್ರಮ ಜರುಗಿಸಬೇಕಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಎಎಪಿ ಕೌನ್ಸಿಲರ್ ಕುಲದೀಪ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು. ಮೇಯರ್ ಹುದ್ದೆಯ ಚುನಾವಣಾ ಫಲಿತಾಂಶಕ್ಕೆ ತಡೆ ನೀಡಲು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಕುಲದೀಪ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಮೇಯರ್ ಚುನಾವಣೆಗೆ ಸಂಬಂಧಿಸಿದ ಇಡೀ ಪ್ರಕ್ರಿಯೆಯ ವಿಡಿಯೊ ಪರಿಶೀಲನೆ ನಡೆಸಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠಕ್ಕೆ ಮನವಿ ಮಾಡಿದರು. ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಎ.ಎಂ. ಸಿಂಘ್ವಿ ಅವರು ಮತದಾನದ ದಿನದ ವಿಡಿಯೊ ಬಗ್ಗೆ ಪ್ರಸ್ತಾಪಿಸಿದರು.

7ನೇ ಪುಟ ನೋಡಿ

ಕೋರ್ಟ್ ಹೇಳಿದ್ದೇನು?

- ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ವಿಡಿಯೊ, ಮತಪತ್ರಗಳು ಹಾಗೂ ಇತರ ದಾಖಲೆಗಳನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ಸಲ್ಲಿಸಬೇಕು
- ಚಂಡೀಗಢ ಮುನ್ಸಿಪಲ್ ಕಾರ್ಪೊರೇಷನ್ ಕಲಾಪ ನಡೆಸುವುದನ್ನು ಮುಂದೂಡಬೇಕು

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಹುದ್ದೆ

ಐಎಎಸ್ ಅಧಿಕಾರಿಗಳ ಹಿಂದೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಹಾಗೂ ಕೆಲವು ಸದಸ್ಯರು ಮತ್ತು ಕಾರ್ಯದರ್ಶಿ ನಡುವೆ ಕಳೆದ ಕೆಲವು ತಿಂಗಳುಗಳಿಂದ ಆಂತರಿಕ ಸಂಘರ್ಷ ನಡೆಯುತ್ತಿದೆ. ಈ ಮಧ್ಯೆ, ಆಯೋಗದಲ್ಲಿ ಒಂದೂವರೆ ತಿಂಗಳಿನಿಂದ ಪರೀಕ್ಷಾ ನಿಯಂತ್ರಕ ಹುದ್ದೆ ಖಾಲಿಯಿದೆ. ಈ ಹುದ್ದೆಯನ್ನು ವಹಿಸಿಕೊಳ್ಳಲು ಐಎಎಸ್ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

2023ರ ಜೂನ್ 21ರಂದು ಪರೀಕ್ಷಾ ನಿಯಂತ್ರಕರಾಗಿದ್ದ ಡಾ. ಗಿರೀಶ್ ದಿಲೀಪ್ ಬದೋಲೆ ಅವರನ್ನು ಡಿ. 26ರಂದು ವರ್ಗಾವಣೆ ಮಾಡಿದ್ದ ಸರ್ಕಾರ, ತೆರವಾದ ಹುದ್ದೆಯನ್ನು ಆಯೋಗದ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರಿಗೇ ಹೆಚ್ಚುವರಿಯಾಗಿ ನೀಡಿತ್ತು. ಅಂದಿನಿಂದ ಕಾರ್ಯದರ್ಶಿ ಹುದ್ದೆಯ ಜೊತೆಗೆ ಪರೀಕ್ಷಾ ನಿಯಂತ್ರಕರಾಗಿಯೂ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.



ಈ ಮಧ್ಯೆ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಶಿಲ್ಪಾ ಶರ್ಮ ಅವರಿಗೆ ಹೆಚ್ಚುವರಿಯಾಗಿ ಪರೀಕ್ಷಾ ನಿಯಂತ್ರಕ ಹುದ್ದೆ ನೀಡಿ ಸರ್ಕಾರ ಜ. 12ರಂದು ಆದೇಶ ಮಾಡಿತ್ತು. ಆದರೆ, ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿಲ್ಲ. ಹೀಗಾಗಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಗ್ಯಾನೇಂದ್ರ ಕುಮಾರ್ ಅವರಿಗೆ ಪರೀಕ್ಷಾ ನಿಯಂತ್ರಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಿ ಜ. 31ರಂದು ಸರ್ಕಾರ ಆದೇಶ ಮಾಡಿತ್ತು. ಅವರು ಕೂಡಾ ಈವರೆಗೂ ಈ ಹುದ್ದೆಯನ್ನು ವಹಿಸಿಕೊಂಡಿಲ್ಲ.

‘ವಿವಿಧ ಇಲಾಖೆಗಳ ಸುಮಾರು ಎರಡು ಸಾವಿರ ಹುದ್ದೆಗಳಿಗೆ ಸಂಬಂಧಿಸಿದ 20ಕ್ಕೂ ಹೆಚ್ಚು ನೇಮಕಾತಿ ಪ್ರಸ್ತಾವಗಳು ಈ ಹಿಂದೆಯೇ ಕೆಪಿಎಸ್‌ಸಿಯಲ್ಲಿದೆ. ರಾಜ್ಯ ಸರ್ಕಾರ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಆಯೋಗಕ್ಕೆ ಕಳೆದ ವಾರವಷ್ಟೆ ಪ್ರಸ್ತಾವ ಕಳುಹಿಸಿದೆ’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಹೋಟಾ ಸಮಿತಿ ಶಿಫಾರಸಿಗೂ ಕಿಮ್ಮತ್ತಿಲ್ಲ

‘ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರನ್ನು ರಾಜ್ಯ ಸರ್ಕಾರ ಆಗಾಗ ಬದಲಿಸುತ್ತಲೇ ಬಂದಿದೆ. ಕಳೆದ 10 ವರ್ಷಗಳಲ್ಲಿ 10 ಮಂದಿ (ಒಬ್ಬರನ್ನು ಎರಡು ಬಾರಿ) ಐಎಎಸ್ ಅಧಿಕಾರಿಗಳನ್ನು ಈ ಮಹತ್ವದ ಹುದ್ದೆಗೆ ನೇಮಿಸಿದೆ. ಇದರಿಂದಲೂ ಪರೀಕ್ಷಾಪೂರ್ವ ಮತ್ತು ಪರೀಕ್ಷೋತ್ತರ ಕಾರ್ಯಗಳು ವಿಳಂಬವಾಗುತ್ತಿವೆ’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿ ಸುಧಾರಣೆಗೆ ರಚಿಸಲಾಗಿದ್ದ ಪಿ.ಸಿ. ಹೋಟಾ ಸಮಿತಿಯು, ಪರೀಕ್ಷಾ ನಿಯಂತ್ರಕ ಹುದ್ದೆಗೆ ಐಎಎಸ್ ಅಧಿಕಾರಿಗಳನ್ನು ನೇಮಿಸಬೇಕು. ಕನಿಷ್ಠ ಮೂರು ವರ್ಷ ಪೂರ್ಣಗೊಳ್ಳುವ ಮೊದಲೇ ವರ್ಗಾವಣೆ ಮಾಡಬಾರದೆಂದು ಶಿಫಾರಸು ಮಾಡಿತ್ತು. ಆದರೆ, ಐಎಎಸ್ ಅಧಿಕಾರಿಯನ್ನು ಸರ್ಕಾರ ನೇಮಿಸುತ್ತಲೇ ಬಂದಿದ್ದರೂ, ಬಹುತೇಕ ಅಧಿಕಾರಿಗಳನ್ನು ಕೆಲವೇ ತಿಂಗಳುಗಳಲ್ಲಿ ಬದಲಿಸಿದೆ.

ವಿಧಾನಸೌಧ ಠಾಣೆಯಲ್ಲಿ ಪ್ರಕರಣ: ಕೃತ್ಯ ಎಸಗಿದ್ದ ಅಣ್ಣ– ತಮ್ಮ ಪೊಲೀಸರ ವಶಕ್ಕೆ

ವಿಡಿಯೊ ಬ್ಲ್ಯಾಕ್‌ಮೇಲ್: ₹65 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾಫ್ಟ್‌ವೇರ್ ಕಂಪನಿಯ ಎಂಜಿನಿಯರ್‌ನಿಂದ ವಂಚನೆ ಬಗ್ಗೆ ದೂರು
- ಅಪರಿಚಿತನ ಸೋಗಿನಲ್ಲಿ ಸ್ನೇಹಿತನಿಂದ ಹಣ ವಸೂಲಿ ಮಾಡಿದ್ದ ಆರೋಪಿ
- ಹಣ ನೀಡಲು ಬ್ಯಾಂಕ್‌ನಿಂದ ಸಾಲ ಮಾಡಿದ್ದ ಸಂತ್ರಸ್ತ

ಅಪರಾಧ ಸುದ್ದಿ

ಬೆಂಗಳೂರು: ಸ್ನೇಹಿತನ ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿ ₹ 65 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ ಸಾಫ್ಟ್‌ವೇರ್ ಕಂಪನಿಯ ಎಂಜಿನಿಯರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ದೂರುದಾರರ ಸ್ನೇಹಿತರೇ ಆದ ಅಕ್ಷಯ್ ಕುಮಾರ್ ಹಾಗೂ ಈತನ ಸಹೋದರ ಭರತ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿವಮೊಗ್ಗದ ದೂರುದಾರ, ಹಲವು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದಿದ್ದರು. ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಉತ್ತಮ ವೇತನವಿದೆ. ದೂರುದಾರರಿಗೆ 18 ವರ್ಷಗಳಿಂದ ಅಕ್ಷಯಕುಮಾರ್ ಹಾಗೂ ಭರತ್ ಪರಿಚಯವಿದ್ದರು. ಆಗಾಗ ಭೇಟಿಯಾಗುತ್ತಿದ್ದರು. ವೈಯಕ್ತಿಕ ವಿಷಯಗಳು ಸಹ ಪರಸ್ಪರ ಗೊತ್ತಿದ್ದವು' ಎಂದು ಮೂಲಗಳು ತಿಳಿಸಿವೆ.

ಫೋಟೊ, ವಿಡಿಯೊ ಚಿತ್ರೀಕರಣ: 'ಸಣ್ಣ–ಪುಟ್ಟ ಕೆಲಸ ಮಾಡುತ್ತಿದ್ದ ಅಕ್ಷಯಕುಮಾರ್ ಹಾಗೂ ಭರತ್, ಆರ್ಥಿಕವಾಗಿ ಸಂಕಷ್ಟದಲ್ಲಿದ್ದರು. ಹಣದ ಸಹಾಯ ಮಾಡುವಂತೆ ದೂರುದಾರರನ್ನು ಆಗಾಗ ಕೇಳುತ್ತಿದ್ದರು. ದೂರುದಾರ ಸ್ವಲ್ಪ ಹಣವನ್ನೂ ನೀಡುತ್ತಿದ್ದರು. ಕೆಲ ಸಂದರ್ಭದಲ್ಲಿ ಹಣ ನೀಡಲು ನಿರಾಕರಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ನೇಹಿತನನ್ನೇ ಬ್ಲ್ಯಾಕ್‌ಮೇಲ್ ಮಾಡಿ ಹಣ ಪಡೆಯಲು ಅಣ್ಣ–ತಮ್ಮ ಸಂಚು ರೂಪಿಸಿದ್ದರು. ಸ್ನೇಹಿತನ ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊವನ್ನು ಆರೋಪಿಗಳು ಚಿತ್ರೀಕರಿಸಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

ಅಪರಿಚಿತನ ಹೆಸರಿನಲ್ಲಿ ಹಣ ವಸೂಲಿ: 'ದೂರುದಾರರಿಗೆ ಫೋಟೊ ಹಾಗೂ ವಿಡಿಯೊ ಕಳುಹಿಸಿದ್ದ ಆರೋಪಿಗಳು, 'ಅಪರಿಚಿತನೊಬ್ಬ ಹಣ ಕೇಳುತ್ತಿದ್ದಾನೆ. ಹಣ ನೀಡದಿದ್ದರೆ ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊ–ವಿಡಿಯೊ ಅಪ್‌ಲೋಡ್ ಮಾಡುವುದಾಗಿ ಬೆದರಿಸುತ್ತಿದ್ದಾನೆ' ಎಂದು ಹೇಳಿದ್ದರು. ಅದನ್ನು ನಂಬಿದ್ದ ದೂರುದಾರ, ಸ್ವಲ್ಪ ಹಣ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೂರುದಾರ ಹಣ ನೀಡುತ್ತಾ ನಂಬಿದ್ದನ್ನು ತಿಳಿದ ಆರೋಪಿಗಳು, ಪದೇ ಪದೇ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ದೂರುದಾರ ಹಂತ ಹಂತವಾಗಿ ₹65 ಲಕ್ಷ ನೀಡಿದ್ದರು. ಇತ್ತೀಚೆಗೆ ಅಣ್ಣ–ತಮ್ಮನ ಬಗ್ಗೆ ದೂರುದಾರರಿಗೆ ಅನುಮಾನ ಬಂದಿತ್ತು. ಹೀಗಾಗಿ, ಅವರು ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಹೇಳಿವೆ.

ಸಾಲ ಮಾಡಿ ಹಣ ಸಂದಾಯ: 'ಫೋಟೊ ಹಾಗೂ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾದರೆ ಮರ್ಯಾದೆ ಹೋಗುತ್ತದೆಂದು ದೂರುದಾರ ಹೆದರಿದ್ದರು. ಮನೆಯವರಿಗೂ ವಿಷಯ ತಿಳಿಸಿದ್ದರು. ನಂತರ, ಬ್ಯಾಂಕ್‌ನಲ್ಲೂ ಸಾಲ ಮಾಡಿ ಆರೋಪಿಗಳಿಗೆ ಹಣ ನೀಡಿದ್ದರು' ಎಂದು ತಿಳಿಸಿವೆ.

ಉರುಳಿಬಿದ್ದ ದ್ವಿಚಕ್ರ ವಾಹನ: ಸವಾರ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಹಂಪ್‌ನಿಂದಾಗಿ ದ್ವಿಚಕ್ರ ವಾಹನವೊಂದು ಉರುಳಿಬಿದ್ದು, ಸವಾರ ಅರುಣ್ ಕುಮಾರ್ (27) ಮೃತಪಟ್ಟಿದ್ದಾರೆ.

'ಕಲಬುರಗಿಯ ಅರುಣ್‌ಕುಮಾರ್, ಎಲೆಕ್ಟ್ರಾನಿಕ್ ಸಿಟಿಯ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಗೊಲ್ಲಹಳ್ಳಿಯಲ್ಲಿ ವಾಸವಿದ್ದರು. ಭಾನುವಾರ ರಾತ್ರಿ ಸ್ನೇಹಿತರನ್ನು ಭೇಟಿಯಾಗಿ ದ್ವಿಚಕ್ರ ವಾಹನದಲ್ಲಿ ಮನೆಗೆ ವಾಪಸು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಅರುಣ್ ಅವರು ದ್ವಿಚಕ್ರ ವಾಹನವನ್ನು ಅತಿ ವೇಗವಾಗಿ ಚಲಾಯಿಸುತ್ತಿದ್ದರೆಂಬುದು ಗೊತ್ತಾಗಿದೆ. ರಸ್ತೆ ಹಂಪ್‌ನಿಂದಾಗಿ ದ್ವಿಚಕ್ರ ವಾಹನ ಉರುಳಿಬಿದ್ದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದು ಅರುಣ್ ಗಾಯಗೊಂಡಿದ್ದರು. ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಸೈಬರ್ ಸುರಕ್ಷತೆ ಕುರಿತ ಜಾಗೃತಿ: ಟ್ರೂ ಕಾಲರ್ ಜತೆ ಒಪ್ಪಂದ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಸುರಕ್ಷತೆ ಮತ್ತು ಡಿಜಿಟಲ್ ಸಂವಹನದ ಕುರಿತು ಜಾಗೃತಿ ಮೂಡಿಸಲು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಕರೆದಾರರ ಗುರುತು (ಕಾಲರ್ ಐಡಿ) ಹಾಗೂ ಸ್ಪ್ಯಾಮ್ ಕರೆಗಳನ್ನು ನಿರ್ಬಂಧಿಸುವ ತಂತ್ರಾಂಶ ಹೊಂದಿರುವ ಟ್ರೂ ಕಾಲರ್ ಕಂಪನಿಯೊಂದಿಗೆ ಸೋಮವಾರ ಒಪ್ಪಂದ ಮಾಡಿಕೊಂಡಿತು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಟ್ರೂ ಕಾಲರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ರಿಷಿತ್ ಜುಂಜುನ್‌ವಾಲಾ ಅವರ ಉಪಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ಯೋಜನೆಯಡಿ, ಟ್ರೂ ಕಾಲರ್ ಕಂಪನಿಯು ಸೈಬರ್ ಸುರಕ್ಷತೆ ಮತ್ತು ಡಿಜಿಟಲ್ ಸಂವಹನ ಕುರಿತು ಜಾಗೃತಿ ಮೂಡಿಸಲು ಸರಣಿ ಕಾರ್ಯಕ್ರಮಗಳನ್ನು ನಡೆಸಲಿದೆ. ಸೈಬರ್ ವಂಚನೆ ತಡೆಗೆ ಕನ್ನಡದಲ್ಲೂ ತರಬೇತಿ ನೀಡಲಿದೆ.

ಒಪ್ಪಂದದ ಬಳಿಕ ಮಾತನಾಡಿದ ಪ್ರಿಯಾಂಕ್ ಖರ್ಗೆ, 'ಅಮಾಯಕ ನಾಗರಿಕರು ಸೈಬರ್ ವಂಚನೆಯಿಂದ ತೊಂದರೆಗೊಳಗಾಗುವುದನ್ನು ರಕ್ಷಿಸಲು ತರಬೇತಿ ನೀಡುವ ಉದ್ದೇಶವಿದೆ. ಅದಕ್ಕಾಗಿಯೇ ಟ್ರೂ ಕಾಲರ್ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

ಸಿ.ಎನ್.ಆರ್.ರಾವ್ 'ಶತಮಾನದ ರಸಾಯನ ವಿಜ್ಞಾನಿ'

ಬೆಂಗಳೂರು: ವಿಜ್ಞಾನಿ ಸಿ.ಎನ್.ಆರ್.ರಾವ್ ಅವರಿಗೆ ಇಂಡಿಯನ್ ಕೆಮಿಕಲ್ ಸೊಸೈಟಿ 'ಶತಮಾನದ ರಸಾಯನ ವಿಜ್ಞಾನಿ' ಬಿರುದು ನೀಡಿ ಗೌರವಿಸಿದೆ.

ಭಾರತದ ಶ್ರೇಷ್ಠ ವಿಜ್ಞಾನಿ ರಾವ್ ಅವರು ರಸಾಯನ ವಿಜ್ಞಾನ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ, ಕೈಗೊಂಡ ಸಂಶೋಧನೆ, ಕೊಟ್ಟ ಕೊಡುಗೆಗಳಿಗಾಗಿ ಸೊಸೈಟಿಯು ತನ್ನ ಶತಮಾನೋತ್ಸವದ ಸಮಯದಲ್ಲಿ ಇಂತಹ ಬಿರುದು ನೀಡಿ ಗೌರವಿಸಿದೆ.

ಇಂಡಿಯನ್ ಕೆಮಿಕಲ್ ಸೊಸೈಟಿ ಅಧ್ಯಕ್ಷ ಜಿ.ಡಿ.ಯಾದವ್, ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಅಧ್ಯಕ್ಷ ಜಿ.ಯು.ಕುಲಕರ್ಣಿ ಅವರು ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಬಿರುದು ಪ್ರದಾನ ಮಾಡಿದರು. ವಿಜ್ಞಾನಿ ಜಗದೀಶ್ ಪಟಾಂಕರ್, ನೆಹರು ಸಂಶೋಧನಾ ಕೇಂದ್ರದ ಸಂಯೋಜಕಿ ಇಂದುಮತಿ ರಾವ್ ಉಪಸ್ಥಿತರಿದ್ದರು.

ಹಣಕ್ಕಾಗಿ ಪೀಡಿಸಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ಕ್ಯಾತ್ಸಂದ್ರ ರೈಲು ನಿಲ್ದಾಣ ಬಳಿ ನಡೆದಿದ್ದ ಕುಮಾರಸ್ವಾಮಿ (28) ಕೊಲೆ ಪ್ರಕರಣ ಭೇದಿಸಿರುವ ಬೆಂಗಳೂರು ಗ್ರಾಮಾಂತರ ರೈಲ್ವೆ ಠಾಣೆ ಪೊಲೀಸರು, ಆರೋಪಿ ಬಿ. ಸುನೀಲ್‌ನನ್ನು (28) ಬಂಧಿಸಿದ್ದಾರೆ.

'ವಿಜಯನಗರ ಜಿಲ್ಲೆಯ ಚಿರತಗೊಂಡ ಗ್ರಾಮದ ಕುಮಾರಸ್ವಾಮಿ ಮೃತದೇಹ ಫೆ. 2ರಂದು ಕ್ಯಾತಸಂದ್ರ ರೈಲು ನಿಲ್ದಾಣ ಬಳಿ ಪತ್ತೆಯಾಗಿತ್ತು. ಕೊಲೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಯಾದ ಬಳ್ಳಾರಿ ಜಿಲ್ಲೆಯ ಬೊಮ್ಮನಾಳದ ಸುನೀಲ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ರೈಲ್ವೆ ಎಸ್ಪಿ ಡಾ. ಸೌಮ್ಯಲತಾ ತಿಳಿಸಿದರು.

ಹಳೇ ವಿದ್ಯಾರ್ಥಿ: 'ಸ್ಥಳೀಯ ಮಠವೊಂದರ ಶಾಲೆಯ ಹಳೇ ವಿದ್ಯಾರ್ಥಿ ಸುನೀಲ್, ಫೆ. 1ರಂದು ತುಮಕೂರಿಗೆ ಬಂದಿದ್ದ. ಕಟ್ಟಡ ಕಾರ್ಮಿಕರಾಗಿದ್ದ ಕುಮಾರಸ್ವಾಮಿ ಸಹ ತುಮಕೂರಿನಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಸುನೀಲ್, ಫೆ. 1ರಂದು ಬೆಳಿಗ್ಗೆ ಬಾರ್‌ಗೆ ಹೋಗಿದ್ದ. ಅದೇ ಬಾರ್‌ನಲ್ಲಿ ಕುಮಾರಸ್ವಾಮಿ ಹಾಗೂ ಸ್ನೇಹಿತರ ಪರಿಚಯವಾಗಿತ್ತು. ಎಲ್ಲರೂ ಮದ್ಯ ಕುಡಿದಿದ್ದರು.

ಬಿ. ಸುನೀಲ್

ಸುನೀಲ್ ಬಳಿ ₹ 19 ಸಾವಿರ ಹಣವಿತ್ತು. ಸುನೀಲ್‌ನೇ ಕುಮಾರಸ್ವಾಮಿ ಹಾಗೂ ಸ್ನೇಹಿತರ ಬಿಲ್ ಪಾವತಿಸಿ ಹೊರಟುಹೋಗಿದ್ದ' ಎಂದು ತಿಳಿಸಿವೆ.

'ಸುನೀಲ್, ಸಂಜೆ ಪುನಃ ಬಾರ್‌ಗೆ ಹೋಗಿದ್ದ. ಮದ್ಯ ಪಾರ್ಸೆಲ್ ತೆಗೆದುಕೊಂಡಿದ್ದ. ಅದೇ ಬಾರ್ ಬಳಿ ನಿಂತಿದ್ದ ಕುಮಾರಸ್ವಾಮಿ, ಸುನೀಲ್‌ನನ್ನು ಅಡ್ಡಗಟ್ಟಿದ್ದರು. 'ಮತ್ತಷ್ಟು ಹಣ ಕೊಡು' ಎಂದು ಪೀಡಿಸಿದ್ದರು. ಹಣವಿಲ್ಲವೆಂದು ಸುನೀಲ್ ಹೇಳಿದರೂ ಸುಮ್ಮನಾಗಿರಲಿಲ್ಲ.'

'ಹಣದ ವಿಚಾರಕ್ಕೆ ಇಬ್ಬರೂ ಪರಸ್ಪರ ಬೈದಾಡಿಕೊಂಡರು. ಸಿಟ್ಟಾಗಿದ್ದ ಆರೋಪಿ ಸುನೀಲ್, ಕುಮಾರಸ್ವಾಮಿಯವರನ್ನು ಒದ್ದಿದ್ದ. ತೀವ್ರ ಗಾಯಗೊಂಡು ಸ್ಥಳದಲ್ಲೇ ಕುಮಾರಸ್ವಾಮಿ ಮೃತಪಟ್ಟಿದ್ದರು. ದೇಹವನ್ನು ರೈಲು ನಿಲ್ದಾಣ ಬಳಿ ಎಸೆದು ಸುನೀಲ್ ಪರಾರಿಯಾಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೊಬೈಲ್ ಸುಳಿವು: 'ಮೃತವ್ಯಕ್ತಿ ಧರಿಸಿದ್ದ ಉಡುಪಿನ ಜೇಬಿನಲ್ಲಿ ಮೊಬೈಲ್ ನಂಬರ್ ಚೀಟಿ ಸಿಕ್ಕಿತ್ತು. ಅದರ ಸುಳಿವಿನಿಂದ ಆರೋಪಿಯನ್ನು ಸೆರೆ ಹಿಡಿಯಲಾಯಿತು' ಎಂದು ಮೂಲಗಳು ತಿಳಿಸಿವೆ.

ಸಿದ್ಧಸಿರಿ ಘಟಕ-ಮುಚ್ಚಳಿಕೆ ಸಲ್ಲಿಸಲು ಸೂಚನೆ

ಬೆಂಗಳೂರು: 'ಪರಿಸರ ನಿಯಮಗಳ ಉಲ್ಲಂಘನೆ ಆರೋಪ ಎದುರಿಸುತ್ತಿರುವ ಸಿದ್ಧಸಿರಿ ಎಥೆನಾಲ್ ಮತ್ತು ಪವರ್ ಘಟಕದಿಂದ ಯಾವುದೇ ವಾಣಿಜ್ಯ ಚಟುವಟಿಕೆ ನಡೆಸುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಸಲ್ಲಿಸಿ' ಎಂದು ಹೈಕೋರ್ಟ್, ಕಾರ್ಖಾನೆ ಮಾಲೀಕರಿಗೆ ಸೂಚಿಸಿದೆ.

ಈ ಸಂಬಂಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರ ಪುತ್ರ, ಸಂಸ್ಥೆಯ ನಿರ್ದೇಶಕ ರಮಣಗೌಡ ಬಿ.ಪಾಟೀಲ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ವೆಂಕಟೇಶ್ ಪಿ.ದಳವಾಯಿ, 'ರಾಜಕೀಯ ಕಾರಣಕ್ಕಾಗಿ ಘಟಕ ಮುಚ್ಚಲು ಒತ್ತಾಯಿಸಲಾಗುತ್ತಿದೆ' ಎಂದು ಆಕ್ಷೇಪಿಸಿದರು.

ಆದರೆ ಇದನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, 'ಕಾರ್ಖಾನೆಯನ್ನು ನಿಯಮದ ಪ್ರಕಾರ ನಡೆಸುತ್ತಿಲ್ಲ. ಹೀಗಾಗಿ, ಕ್ರಮ ಕೈಗೊಳ್ಳಲಾಗಿದೆಯಷ್ಟೆ' ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು ಅರ್ಜಿದಾರರನ್ನು ಉದ್ದೇಶಿಸಿ, 'ನೀವು 2021ರಲ್ಲಿ ಕಾರ್ಖಾನೆ ಖರೀದಿ ಮಾಡಿದ್ದೀರಿ. ಈಗ 2024ನೇ ಇಸವಿ. ಈ ಅವಧಿಯಲ್ಲಿ ನೀವು ಅಗತ್ಯ ಅನುಮತಿ ಪಡೆಯಬೇಕಿತ್ತಲ್ಲವೇ' ಎಂದು ಪ್ರಶ್ನಿಸಿತು.

'ಅನುಮತಿ ಪಡೆಯುವತನಕ ವಾಣಿಜ್ಯ ಚಟುವಟಿಕೆ ನಡೆಸದಂತೆ ಮುಚ್ಚಳಿಕೆ ನೀಡಿ. ಈ ಸಂಬಂಧ ಅರ್ಜಿದಾರರ ಅಭಿಪ್ರಾಯ ತಿಳಿಸಿ' ಎಂದು ಸೂಚಿಸಿ, ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

ಕಬ್ಬು ಬೆಳೆಗಾರರ 'ಬೆಂಗಳೂರು ಚಲೋ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆ.6ರಂದು 'ಬೆಂಗಳೂರು ಚಲೊ' ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 11ರಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಆರಂಭಗೊಳ್ಳಲಿದೆ. ರಾಜ್ಯದ ಎಲ್ಲೆಡೆಯಿಂದ ರೈತರು ಭಾಗಿಯಾಗಲಿದ್ದಾರೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಕರುಬೂರು ಶಾಂತಕುಮಾರ್ ತಿಳಿಸಿದ್ದಾರೆ. 'ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದು, ರೈತರ ಸಾಲ ಮನ್ನಾ ಮಾಡಲಾಗಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಸಾಲ ಮನ್ನಾ ಮಾಡಬೇಕು. ಕಬ್ಬು ಕಟಾವು ಹಾಗೂ ಸಾಗಣೆ ಹೆಸರಿನಲ್ಲಿ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡಲಾಗಿದೆ. ರೈತರಿಂದ ಹೆಚ್ಚುವರಿಯಾಗಿ ಪಡೆದ ಹಣವನ್ನು ವಾಪಸ್ ಪಾವತಿಸಬೇಕು' ಎಂದು ಆಗ್ರಹಿಸಿದರು.

ತೆಲಂಗಾಣದಲ್ಲಿ ಪ್ರತಿಯೊಬ್ಬರಿಗೂ ರಾಜ್ಯ ಸರ್ಕಾರವೇ ವಿಮಾ ಕಂತು ಪಾವತಿಸಿ, ₹5 ಲಕ್ಷದ ಜೀವ ವಿಮಾ ಪಾಲಿಸಿ ನೀಡಲಾಗಿದೆ. ಆಕಸ್ಮಿಕ, ಅಪಘಾತ, ಸಾವು, ಆತ್ಮಹತ್ಯೆಗೆ ಮಾಡಿಕೊಂಡ ಬೆಳೆಗಾರರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ದೊರೆಯುತ್ತದೆ. ಅದೇ ಮಾದರಿಯನ್ನು ರಾಜ್ಯದಲ್ಲೂ ಜಾರಿಗೊಳಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸುತ್ತಿರುವ ಬಜೆಟ್‌ನಲ್ಲಿ ರೈತರ ಪರ ಯೋಜನೆಗಳನ್ನು ಪ್ರಕಟಿಸಿ ಎಂದು ಆಗ್ರಹಿಸಿದ್ದಾರೆ.

ಆತ್ಮಹತ್ಯೆಗೆ ಕುಮ್ಮಕ್ಕು ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲಕ್ಕಸಂದ್ರದ ಮೇರಿ ಇಮ್ಮಾಕ್ಯುಲೇಟ್ ಶಾಲೆಯ ಪ್ರಾಂಶುಪಾಲರಾದ ಮರಿಯಾ ಲೈಲಾ, ಶಿಕ್ಷಕಿ ಫಿಲೋಮಿನಾ ಮಾನ್ಯುಯಲ್ ವಿರುದ್ಧದ ಆತ್ಮಹತ್ಯೆ ಕುಮ್ಮಕ್ಕು ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಸಲ್ಲಿಸಲಾಗಿದ್ದಅರ್ಜಿಯನ್ನು ನ್ಯಾಯಮೂರ್ತಿ ಜಿ. ಬಸವರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. 'ಆರೋಪಿಗಳು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಹೇಗೆ ಪ್ರಚೋದನೆ ನೀಡಿದರು ಎಂಬುದನ್ನು ಸಾಬೀತು ಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ' ಎಂಬ ಅಭಿಪ್ರಾಯದೊಂದಿಗೆ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 306ರ ಅಡಿ ದಾಖಲಿಸಿದ್ದ ಪ್ರಕರಣವನ್ನು ನ್ಯಾಯಪೀಠ ರದ್ದುಗೊಳಿಸಿದೆ.

'ಆರೋಪಿಗಳು ಮಕ್ಕಳನ್ನು ಸರಿಯಾಗಿ ನಡೆಸಿಕೊಳ್ಳುತ್ತಿರಲಿಲ್ಲ. ಹಾಗಾಗಿಯೇ, ಅವರು ಹತಾಶರಾಗಿ ಸ್ಯಾಂಕಿ ಕೆರೆಯಲ್ಲಿ ಮುಳುಗಿ ಸತ್ತಿದ್ದಾರೆ' ಎಂದು ಪ್ರಾಸಿಕ್ಯೂಷನ್ ವಾದ ಮಂಡಿಸಿತ್ತು ಆದರೆ, ಇದನ್ನು ನ್ಯಾಯಪೀಠ ತಳ್ಳಿಹಾಕಿದೆ.

'ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿತ್ತು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ಮಕ್ಕಳು ತರಗತಿಗಳಿಗೆ ಸರಿಯಾಗಿ ಹಾಜರಾಗದೇ ಇರುವುದು ಅವರನ್ನು ಬೈಯ್ಯುವುದು ಸಾಮಾನ್ಯ. ಡೆತ್ ನೋಟ್ ಬರೆದಿಟ್ಟಿದ್ದಾರೆ ಎಂದ ಮಾತ್ರಕ್ಕೆ ಆರೋಪಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗದು' ಎಂದು ನ್ಯಾಯಪೀಠ ಹೇಳಿದೆ.

'ಕಪ್ಪು ಜನರ ಗಾಯ ತೆರೆದಿಡುವ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಜನರ ಸಾಧನೆ ಮತ್ತು ಅದರ ಹಿಂದಿನ ಗಾಯಗಳನ್ನು 'ಗುರುತಿನ ಬಾಣಗಳು' ತೆರೆದಿಟ್ಟಿವೆ ಎಂದು ವಿಶ್ವಸಂಸ್ಥೆಯ ಮಾನವಹಕ್ಕುಗಳ ವಿಶೇಷ ತಜ್ಞೆ ಕೆ.ಪಿ.ಅಶ್ವಿನಿ ಹೇಳಿದರು.

ಸಂಕಥನ ಪ್ರಕಾಶನ ಹೊರತಂದಿರುವ ಹರೀಶ್ ಗಂಗಾಧರ್ ಅವರ 'ಗುರುತಿನ ಬಾಣಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವದಲ್ಲಿ 'ಬ್ಲ್ಯಾಕ್ ಮಂತ್' ಆಚರಿಸುವ ಸಮಯದಲ್ಲಿಯೇ ಕಪ್ಪು ಜನರ ಕುರಿತು ಮಾತನಾಡುವ ಈ ಕೃತಿ ಬಂದಿರುವುದು ಸಾಂಕೇತಿಕವಾಗಿದೆ ಎಂದು ತಿಳಿಸಿದರು.

ಲೇಖಕ ನೆಲ್ಲುಕುಂಟೆ ವೆಂಕಟೇಶ್ ಮಾತನಾಡಿ, 'ಈ ಕೃತಿಯಲ್ಲಿ 59 ಗುರುತಿನ ಬಾಣಗಳಿವೆ. ಎಲ್ಲರೂ ದುಡಿಯುವ ವರ್ಗಕ್ಕೆ ಸೇರಿದವರು, ದಮನಿತ ಸಮುದಾಯವರು. ಹೊರಟ ಬಾಣಗಳು ಗಾಂಧಿ- ಅಂಬೇಡ್ಕರ್ ಚಿಂತನೆಗಳ ಕಡೆಗೆ ತಲುಪಿವೆ. ಗಾಂಧಿ-ಅಂಬೇಡ್ಕರ್ ಚಿಂತನೆಗಳೇ ಜಾಗತಿಕ ಚಿಂತನೆಗಳಾಗಿವೆ' ಎಂದು ವಿಶ್ಲೇಷಿಸಿದರು.

ಜಾಗತಿಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುವ ಕೆಲಸವನ್ನು ಲಂಕೇಶ್ ಮಾಡುತ್ತಿದ್ದರು. ಕಳೆದ 20 ವರ್ಷಗಳಲ್ಲಿ ಅದು ನಿಂತೇ ಹೋಗಿತ್ತು. ಹರೀಶ್ ಜಾಗತಿಕ ಭಾಷೆಯಲ್ಲಿ ಮಾತನಾಡುತ್ತಿರುವುದು ಪ್ರಮುಖ ವಿದ್ಯಮಾನ ಎಂದರು.

ನಗರದಲ್ಲಿ ನಡೆದ 'ಗುರುತಿನ ಬಾಣಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ನಲ್ಲೂರು ಪ್ರಸಾದ್, ವಿಶ್ವಸಂಸ್ಥೆಯ ಮಾನವಹಕ್ಕುಗಳ ವಿಶೇಷ ತಜ್ಞೆ ಕೆ.ಪಿ.ಅಶ್ವಿನಿ, ಬರಹಗಾರ ಬಂಜಗೆರೆ ಜಯಪ್ರಕಾಶ್, ಕೃಷಿ ಸಚಿವ ಚಲುವರಾಯಸ್ವಾಮಿ, ಲೇಖಕ ನೆಲ್ಲುಕುಂಟೆ ವೆಂಕಟೇಶ್, ಕೃತಿಕಾರ ಹರೀಶ್ ಗಂಗಾಧರ್, ಉಪನ್ಯಾಸಕಿ ಅರ್ಪಿತಾ ಪಿ. ಪಾಲ್ಗೊಂಡಿದ್ದರು.

ಬರಹಗಾರ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಸಿನಿಮಾ, ಸಾಹಿತ್ಯ, ಕ್ರೀಡೆ, ಜೂಜು ಎಲ್ಲದರ ಕುರಿತು ಲಂಕೇಶ್ ಬರೆಯುತ್ತಿದ್ದರು. ಈ ರೀತಿಯ ವೈವಿಧ್ಯವನ್ನು ಈ ಕೃತಿಯಲ್ಲಿ ಕಾಣಬಹುದು. ಓದಿನ, ವಿಷಯದ ವಿಸ್ತಾರಗಳು ಇಲ್ಲಿ ಕಾಣಿಸಿವೆ' ಎಂದರು.

ಕೃತಿಕಾರ ಹರೀಶ್ ಗಂಗಾಧರ್ ಮಾತನಾಡಿ, 'ನಾವು ಪ್ರಪಾತಕ್ಕೆ ಬೀಳದಂತೆ ಯಾವ ದಿಕ್ಕಿನಲ್ಲಿ ಹೋಗಬೇಕೆಂದು ಹೇಳುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಿದ್ದೇನೆ' ಎಂದು ವಿವರಿಸಿದರು. ಕೃಷಿ ಸಚಿವ ಚಲುವರಾಯಸ್ವಾಮಿ ಕೃತಿ ಬಿಡುಗಡೆ ಮಾಡಿದರು. ಸಂಕಥನದ ರೂವಾರಿ ರಾಜೇಂದ್ರ ಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ನಲ್ಲೂರು ಪ್ರಸಾದ್ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ಅಜಯ್ ರಾವ್

ಕಾಲೇಜಿನ ವಾರ್ಷಿಕೋತ್ಸವ, ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ: ಅಜಯ್ ರಾವ್, ಅತಿಥಿಗಳು: ಶ್ವೇತಾಬಾಯಿ, ಎಸ್. ಪಿ. ದಯಾನಂದ್, ಎಸ್. ಎಂ. ಹಂಜಿ, ಸುಮಾ ಅನಿಲ್‌ಕುಮಾರ್, ಜಿ.ಪಿ. ವಿಶ್ವನಾಥ್, ಅಧ್ಯಕ್ಷತೆ: ಎಸ್.ಎಸ್. ದೊಡ್ಡಣ್ಣವರ, ಆಯೋಜನೆ ಮತ್ತು ಸ್ಥಳ: ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ, ವಿಜಯನಗರ, ಬೆಳಿಗ್ಗೆ 10.30

ರಾಜ್ಯಮಟ್ಟದ ಕಲಾ ಸಮ್ಮೇಳನ, ಕರ್ಪೂರಿ ಠಾಕೂರ್ ಅವರಿಗೆ ಗೌರವ ಸಮರ್ಪಣೆ: ಸಾನ್ನಿಧ್ಯ: ಸವಿತಾನಂದನಾಥ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಕೆ.ಎನ್. ರಾಜಣ್ಣ, ಜಮೀರ್ ಅಹಮದ್ ಖಾನ್, ಬಿ.ಎಲ್. ಶಂಕರ್, ಧರಣಿದೇವಿ ಮಾಲಗತ್ತಿ, ಜಯಪ್ರಕಾಶ್ ಹೆಗ್ಡೆ, ಎಂ.ಸಿ. ವೇಣುಗೋಪಾಲ್, ಆಯೋಜನೆ: ಕರ್ನಾಟಕ ರಾಜ್ಯ ಸವಿತಾ ಕಲಾ ಸಂಘ, ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಪುರಂದರದಾಸರ ಪುಣ್ಯದಿನ ಮಹೋತ್ಸವ: ಹರಿದಾಸ ಮಂಜರಿ: ಚಾಂದನಿ ಗರ್ತಿಕೆರೆ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಸುವರ್ಣ ಕರ್ನಾಟಕ ರಂಗ ಅಭಿಯಾನ: **ಉದ್ಘಾಟನೆ:** ಶ್ರೀನಿವಾಸ್ ಜಿ. ಕಪ್ಪಣ್ಣ, ಅಧ್ಯಕ್ಷತೆ: ಬಿ. ಸುರೇಶ್, ರಂಗ ಗೌರವ ಪ್ರದಾನ: ಕೆ. ಮರುಳಸಿದ್ಧಪ್ಪ, ಬಿ.ವಿ. ರಾಜಾರಾಮ್, 'ಅಂಬೆ' ನಾಟಕ ಪ್ರದರ್ಶನ: ನಿರ್ದೇಶನ: ಸಾಲಿಯಾನ್ ಉಮೇಶ್ ನಾರಾಯಣ, ಆಯೋಜನೆ: ನಮ ತುಳುವೆರ್ ಕಲಾ ಸಂಘಟನೆ, ಸ್ಥಳ: ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30

ಪ್ರವಚನ ವಾಹಿನಿ: 'ಪ್ರಹ್ಲಾದ ರಾಜರ ನರಸಿಂಹ ಸ್ತೋತ್ರ' ಕುರಿತು ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಗರಸಭಾ ಕಾರ್ಯಾಲಯ, ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂ.: 080–27722735, ಸಹಾಯವಾಣಿ: 080–27722135, Web : www.nelamangala.mrc.gov.in, Email : itstaff_ulb_nelamangala@yahoo.com

ಸಂಖ್ಯೆ:ನಸನೆ/ತಾಂತ್ರಿಕ(ವಿ)/ಟೆಂಡರ್/89/2023–24 ದಿನಾಂಕ : 03.02.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1 & 2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 16.01.2024ರಂದು ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಯಾವುದೇ ಗುತ್ತಿಗೆದಾರರು ಭಾಗವಹಿಸದ ಕಾಮಗಾರಿಗಳಾದ 2023–24ನೇ ಸಾಲಿನ ನಗರಸಭೆ ನಿಧಿಯಡಿ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ (ABC) ಮಾಡಿಸುವ ಬಗ್ಗೆ ಹಾಗೂ 2023–24ನೇ ಸಾಲಿನ ನಗರಸಭೆ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಮರು ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ **ರೂ.124.15 ಲಕ್ಷಗಳ** ಕೈಗೊಳ್ಳುವ ಕಾಮಗಾರಿಗಳ ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in/ ಮೂಲಕ ಟೆಂಡರ್ ಸಲ್ಲಿಸುವುದು. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀಮತಿ ಲತಾ ಹೇಮಂತ್‌ಕುಮಾರ್, ಮಾನ್ಯ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀಮತಿ ಸುಜಾತ ಮುನಿಯಪ್ಪ, ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀ ಪ್ರದೀಪ್ ಸಿ, ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀ ಮನುಕುಮಾರ್ ಹೆಚ್.ಎಂ. (ಕೆ.ಎಂ.ಎ.ಎಸ್) ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/3414/ಶಿರಡಿಸಾಯಿ/2023–24

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562107
ದೂರವಾಣಿ : 080–27821501, ಇ–ಮೇಲ್ : itstaff_ulb_attibele@yahoo.com
ವೆಬ್‌ಸೈಟ್ :www.attibeletown.mrc.gov.in

ಸಂಖ್ಯೆ : ಅಪುನ/ಅರ/ಪ.ಅ/ಟೆಂಡರ್/ಸಿಆರ್/59/2023–24 ದಿನಾಂಕ: 03.02.2024

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

ಪುರಸಭಾ ನಿಧಿಯಡಿಯಲ್ಲಿ ಅತ್ತಿಬೆಲೆ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ, ನೇರ ವೇತನ ಪಾವತಿ ಪೌರಕಾರ್ಮಿಕರು ಹಾಗೂ ಆರೋಗ್ಯ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ಪ್ರತಿ ದಿನ ಬೆಳಗಿನ ಉಪಹಾರ ಪೂರೈಸುವುದು ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಲು ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರು/ಏಜೆನ್ಸಿದಾರರಿಂದ ಟೆಂಡರ್ ಆಹ್ವಾನಿಸಿದ್ದು, ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.attibeletown.mrc.gov.in ಹಾಗೂ ಕಚೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಪರಿಸರ ಅಭಿಯಂತರರಿಂದ ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯುಮೆಂಟ್ ಮತ್ತು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

ಟೆಂಡರ್‌ಗಳನ್ನು ಸಲ್ಲಿಸಲು ಕ್ರ.ಸಂ.(1) ಕ್ಕೆ ಕೊನೆಯ ದಿನಾಂಕ: 13.02.2024 ಮತ್ತು ಕ್ರ.ಸಂ. (1) ಕ್ಕೆ ಕೊನೆಯ ದಿನಾಂಕ: 22.02.2024

ಕ್ರ.ಸಂ	ವಿವರ	ಟೆಂಡರ್‌ಗಿಟ್ಟ ಮೊತ್ತ	ಇಂಡೆಂಟ್ ಸಂಖ್ಯೆ	ಇ.ಎಂ.ಡಿ. ಮೊತ್ತ
1	ಅತ್ತಿಬೆಲೆ ಪುರಸಭೆ ವ್ಯಾಪ್ತಿಯ ಸ್ವಚ್ಛತೆ ಹಾಗೂ ಘನತ್ಯಾಜ್ಯ ವಿಲೇವಾರಿಗಾಗಿ ಅವಶ್ಯಕತೆಯಿರುವ ವಾಹನ ಚಾಲಕರು, ಚಾಲಕರು ಕಂ ಆಪರೇಟರ್ಸ್, ಹೆಲ್ಪರ್ಸ್, ಲೋಡರ್ಸ್ ಮತ್ತು ಮೇಲ್ವಿಚಾರಕರನ್ನು ಸರಬರಾಜು ಮಾಡುವ	ರೂ. 69,07,020.48	DMA/2023-24/SE0032/CALL-2	ರೂ. 1,38,140.00
2	ಅತ್ತಿಬೆಲೆ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ, ನೇರ ವೇತನ ಪಾವತಿ ಪೌರಕಾರ್ಮಿಕರು ಹಾಗೂ ಆರೋಗ್ಯ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ಪ್ರತಿ ದಿನ ಬೆಳಗಿನ ಉಪಹಾರ ಪೂರೈಸುವುದು.	ರೂ. 5,36,550.00	DMA/2023-24/SE2209	ರೂ. 13,414.00

ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ

ವಾಸಾಸಂಇ/ವಾ.ಪ್ರ/3409/ಶಿರಡಿಸಾಯಿ/2023–24

PUBLIC NOTICE

To all the persons / To whomsoever it my concern, let it be known that our clients **Mrs. Manju Kothari**, wife of Late Mr. Sunil Kothari and **Ms. Shweta Kothari**, daughter of Late Mr. Sunil Kothari both residing at R/ at No.6, Sirur Park, Vidyanagar, Hubli - 580021 do hereby **Terminate/ Cancel / Revoke in its entirety** the :-

(I) Joint Development Agreement dated 22/07/2015 in favour of **Mrs. Siri Manasa** W/o. Mr. Padmaiah Vuppu, registered as document No.GNR-1-01555-2015-16 (Book-1), Stored in CD No. GNRD 108 in the office of the Sub-Registrar, Ganganagar, Bangalore and

(ii) General Power of Attorney dated 22/07/2015 in favour of **Mrs. Siri Manasa** W/o. Mr. Padmaiah Vuppu registered as document No.GNR-4-00155-2015-16 (Book-4), Stored in CD No. GNRD 108 in the office of the Sub - Registrar, Ganganagar, Bangalore.

Any person / s having any manner of claims / objections for the proposed may lodge their claims / objections with the undersigned, with documentary evidence within **Ten (10) days** from the date of this publication. Any claims / objections received thereafter will not be binding on our clients and my client will proceed to purchase the schedule property as if there are no claims/ objections.

SCHEDULE PROPERTY

All that piece and parcel of the Site Bearing No.44/1-C, New No 44/19, PID No.77-109-44/19, New PID No. 093-W0114-1, totally measuring 5783 Sq.feet, situated at Devaraju Urs Road, (Race Course Road), Sampangirama Nagar, BBMP, Ward No.77, Bangalore, and bounded on:

East by : Plot No.44/1-E,
West by : Layout Road,
North by : Layout Road,
South by : Plot No.44/1

ILP INDIA LAW PRACTICE

Praveen Prabhakar/ Prashanth Mirle
India Law Practice – ILP,
Advocates and Attorneys
4th Floor, JP Square, No.190, Sankey Road, Sadashivanagar, Bangalore 560080
B: 80 23612770/3770 | F: 80 23614770
e-mail: contact@ilplaw.co.in
Place : Bengaluru, Date : 06.02.2024

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU–219/2463/2023–24 ದಿನಾಂಕ: 05.02.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಮೆ॥ ಮಾವಿಸ್ ಹಾಸ್ಪಿಟಲ್ ಪ್ರೈ ಲಿ., #971/24, ಕೆ.ಹೆಚ್.ಬಿ ಕಾಲೋನಿ 'ಎ' ಸೆಕ್ಟರ್, ಯಲಹಂಕ ನ್ಯೂ ಟೌನ್ ಬೆಂಗಳೂರು–560064.	ಯಲಹಂಕ	ಯಲಹಂಕ	ಆವಲಹಳ್ಳಿ	117/1A 117/1B 117/5 ಮತ್ತು 117/17	ಒಟ್ಟು 1 ಎಕರೆ 11 ಗುಂಟೆ	ವಸತಿ ವಲಯ	ವಾಣಿಜ್ಯ ಉಪಯೋಗ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಗದ ಹಾಸ್ಪಿಟಲ್ ಕಟ್ಟಿದರೆ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರಕ್ಕೆ ರೆವಿನ್ಯೂ ಸಿಗುತ್ತದೆ, ಸುಮಾರು 100 ಜನರಿಗೆ ಕೆಲಸ ಸಿಗುತ್ತದೆ, ಸುತ್ತ–ಮುತ್ತ ಇರುವ ಸಾರ್ವಜನಿಕರಿಗೆ ಸೇವೆ ಸಿಗುತ್ತದೆ, ಮೆಡಿಕಲ್ ಟೂರಿಸಂಗೆ ಪ್ರಮೋಷನ್ ಸಿಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವಸತಿ'** ವಲಯದಿಂದ **'ವಾಣಿಜ್ಯ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

CHANGE OF NAME
I, ANANDAMURTHY R SHARMA, R/at # 57/8/1, Aasare, 4th Cross, G Chandrashekaran Road, Gattigere, Rajarajeshwari Nagar, Bengaluru-560098, have changed my son's name from SAMARTHA A SHARMA to **AHAAN SHARMA** vide affidavit dt:03-02-2024, before Notary K.V.Prema Kumari, Bengaluru, Henceforth he shall be called **AHAAN SHARMA** only.

I, KUDDUS ALI BAIG, Residing at Bengaluru-45 have changed my name as KHUDDUS ALI BAIG, vide affidavit dated 5/2/2024 before Notary K.S. Bammappanavar, Bengaluru

I, KALAPANA ANILKUMAR WAGHCHOURE, Residing at FLat No. 1207, Tower -2, Mangalam Ecstasy Apartment, Seegehalli Near K.R.Puram RTO, Virgo Nagar Post, Bangalore- 560049 have changed my name to KALPANA ANILKUMAR WAGHCHOURE vide affidavit dated 03/02/2021 before notary K.B. Sada Shivappa, Bangalore.

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&
Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD **Classifieds** More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಮೂಲಸೌಕರ್ಯ ಕಾಣದ ಕೆ.ಆರ್‌.ಪುರ ವಿಧಾನಸಭೆ ಕ್ಷೇತ್ರದ ಹಳ್ಳಿಗಳ ಸ್ಥಿತಿ

ಹರಡಿದ ಕಸ, ಗುಂಡಿ ರಸ್ತೆಗಳ 'ಸಹವಾಸ'

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಎಲ್ಲೆಂದರಲ್ಲಿ ಬಿದ್ದಿರುವ ಕಸ, ರಸ್ತೆಯ ಮೇಲೆ ಹರಿಯುವ ಚರಂಡಿ ನೀರು, ಹಳ್ಳ-ದಿಣ್ಣೆಗಳಿಂದ ಕೂಡಿರುವ ರಸ್ತೆ, ದೂಳುಮಯ ರಸ್ತೆಗಳು...

ಈ ಎಲ್ಲ ಸಮಸ್ಯೆಗಳು ಕಾಣ ಸಿಗುವುದು ಕೆ.ಆರ್.ಪುರ ವಿಧಾನಸಭೆ ಕ್ಷೇತ್ರದಲ್ಲಿರುವ ಬಿಬಿಎಂಪಿ ವ್ಯಾಪ್ತಿಗೆ ಸೇರಿರುವ 110 ಹಳ್ಳಿಗಳಲ್ಲಿ.

2007ರಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ ಮೇಲೆ ಈ ಹಳ್ಳಿಗಳು ಮೂಲಸೌಕರ್ಯಗಳೊಂದಿಗೆ ಅಭಿವೃದ್ಧಿ ಪಥದತ್ತ ಸಾಗಲಿವೆ ಎಂದು ಇಲ್ಲಿನ ನಾಗರಿಕರು ಕನಸು ಕಂಡಿದ್ದರು. ಆದರೆ, ಇಂದಿನವರೆಗೂ ಅದು ನನಸಾಗಿಲ್ಲ.

ರಸ್ತೆ, ಒಳಚರಂಡಿ, ಶಾಲೆಗಳ ಉನ್ನತೀಕರಣ ಮುಂತಾದ ಕೆಲಸಗಳಿಗೆ ಆದ್ಯತೆ ಕೊಡಬೇಕಾದ ಬಿಬಿಎಂಪಿ ಅನುದಾನದ ಕೊರತೆ ಇನ್ನಿತರ ಕಾರಣಗಳಿಗಾಗಿ ಮೂಲ ಸೌಲಭ್ಯ ಒದಗಿಸುವಲ್ಲಿ ವಿಫಲವಾಗಿದೆ. ಕೆ.ಆರ್. ಪುರ ಭಾಗದ ಯೋಜನೆ ಅನುಷ್ಠಾನ ಗೊಳ್ಳಬೇಕಾದ ಹಳ್ಳಿಗಳಲ್ಲಿ, ಅಲ್ಲಲ್ಲಿ ಚರಂಡಿ, ರಸ್ತೆ ನಿರ್ಮಾಣಕ್ಕಾಗಿ ಅಗೆದು ಹಾಗೆಯೇ ಬಿಡಲಾಗಿದೆ.

ಬಂಜಾರ ಬಡಾವಣೆ, ಕನಕನಗರ, ಕಲ್ಕೆರೆ ಗ್ರಾಮಗಳ ರಸ್ತೆಗಳು ದೂಳುಮಯವಾಗಿವೆ. ರಸ್ತೆ ನಿರ್ಮಾಣ ಕಾಮಗಾರಿ ನಿರಂತರವಾಗಿ ಸಾಗುತ್ತಿದೆ ಎಂದು ನಂಬಿಸಲೆಂಬಂತೆ ಆಗಾಗ್ಗೆ ಒಂದಷ್ಟು ಮಣ್ಣು ತೆಗೆದು ಹಾಕಲಾಗುತ್ತದೆ. ಅಭಿವೃದ್ಧಿ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ, 'ಅನುದಾನದ ಕೊರತೆ ಇದೆ, ನಾವು ಏನು ಮಾಡಲು ಸಾಧ್ಯ?' ಎನ್ನುವ ಹಾರಿಕೆಯ ಉತ್ತರ ನೀಡುತ್ತಾರೆ.

'ವರ್ಷಗಳಿಂದ ಅಭಿವೃದ್ಧಿ ಎನ್ನುವುದು ಇಲ್ಲಿ ಮರೀಚಿಕೆಯಾಗಿದೆ. ಈ ಭಾಗದಲ್ಲಿ ಅಪಾರ್ಟ್‌ಮೆಂಟ್, ಶಾಲೆಗಳು, ಬಡಾವಣೆಗಳು ಹೆಚ್ಚಿವೆ. ಹಾಳಾಗಿರುವ ರಸ್ತೆಗಳಿಗೆ ತೇಪೆ ಹಾಕುತ್ತಾರೆ. ಇಂಥ ರಸ್ತೆಗಳು ಮೂರ್ನಾಲ್ಕು ತಿಂಗಳು ಮಾತ್ರ ಚೆನ್ನಾಗಿರುತ್ತವೆ, ಅಷ್ಟೇ' ಎಂದು ಬಂಜಾರ ಬಡಾವಣೆ ನಿವಾಸಿ ನಾಗೇಶ್ ದೂರಿದರು.

'ಹೊರಮಾವು ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಗಳು ಮಂದಗತಿಯಲ್ಲಿ ಸಾಗಿವೆ. ಹೊರಮಾವಿನ ಕೆಲ ಭಾಗಗಳಲ್ಲಿ ರಸ್ತೆ, ಚರಂಡಿಯ ಕಾಮಗಾರಿಗಳೇ ಆರಂಭವಾಗಿಲ್ಲ' ಎಂದು ಹೊರಮಾವು ನಿವಾಸಿ ಜ್ಯೋತಿ ಹೇಳಿದರು.

ಕೆ.ಆರ್. ಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 2015ರಿಂದ 2023ರವರೆಗೆ ರಸ್ತೆ, ಚರಂಡಿ ನಿರ್ಮಾಣಕ್ಕೆ ಆಗಿರುವ ವೆಚ್ಚ

ಬಿಬಿಎಂಪಿ ವ್ಯಾಪ್ತಿಯ 11 ಹಳ್ಳಿಗಳಲ್ಲಿ ಸಮಸ್ಯೆ

ಕೆ.ಆರ್.ಪುರ ಕ್ಷೇತ್ರದ ಅಮಾನಿ ಬೈರತಿ ಖಾನೆ, ಚಳ್ಳಕೆರೆ, ಗೆದ್ದಲಹಳ್ಳಿ, ಹೊರಮಾವು, ಅಗರ, ಕೊತ್ತನೂರು, ನಾರಾಯಣಪುರ, ಕ್ಯಾಲಸನಹಳ್ಳಿ, ನಗರೇಶ್ವರ ನಾಗೇನಹಳ್ಳಿ, ಕೆ.ಚನ್ನಸಂದ್ರ, ಕಲ್ಕೆರೆ ಗ್ರಾಮಗಳು ಬಿಬಿಎಂಪಿಗೆ ಸೇರ್ಪಡೆಯಾದ ಗ್ರಾಮಗಳು. ಈ ಗ್ರಾಮಗಳಲ್ಲಿ ಮುಖ್ಯ ರಸ್ತೆಗಳೂ ಸೇರಿ ಉಪ ರಸ್ತೆಗಳು ಅಲ್ಲಲ್ಲಿ ತಗ್ಗು-ದಿಣ್ಣೆಗಳಿಂದ ಕೂಡಿದ್ದು, ದೂಳು ಆವರಿಸಿಕೊಂಡಿದೆ. ಈ 11 ಹಳ್ಳಿಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಬಿಬಿಎಂಪಿ ಈಗಾಗಲೇ ₹400 ಕೋಟಿಗೂ ಹೆಚ್ಚು ವೆಚ್ಚ ಮಾಡಿದೆ. ಆದರೆ, ಹಳ್ಳಿಗಳಲ್ಲಿ ಈ ಮಟ್ಟಿಗೆ ಕಾಮಗಾರಿಗಳಾಗಿರುವ ಕುರುಹು ಕಾಣುತ್ತಿಲ್ಲ.

'ನನ್ನ ನಗರ, ನನ್ನ ಜವಾಬ್ದಾರಿ' ಕೈಪಿಡಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜನಾಗ್ರಹ ಸಿಟಿಜನ್‌ಶಿಪ್ ಆ್ಯಂಡ್ ಡೆಮಾಕ್ರಸಿ ಹೊರತಂದಿರುವ 'ನನ್ನ ನಗರ, ನನ್ನ ಜವಾಬ್ದಾರಿ' ಕೈಪಿಡಿಯ ಕರ್ನಾಟಕ ಆವೃತ್ತಿಯನ್ನು ಗಣ್ಯರು ಬಿಡುಗಡೆ ಮಾಡಿದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕಿ ಸುವರ್ಣ ಕಲ್ಲಕುಂಟ್ಲ, ಬಿಬಿಎಂಪಿ ಮಾಜಿ ಸದಸ್ಯ ಅಬ್ದುಲ್ ವಾಜಿದ್, ಶಿವಮೊಗ್ಗ ನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಧೀರರಾಜ್ ಹೊನ್ನವಿಲೆ ಅವರು ಕೈಪಿಡಿಯನ್ನು ಬಿಡುಗಡೆ ಮಾಡಿದರು.

ಜನಾಗ್ರಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್ ಮಾತನಾಡಿ, 'ವಾರ್ಡ್ ಸಮಿತಿ ಸಭೆ ಹಾಗೂ ಸೇವಾ ವಿತರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ ಮಾತ್ರ ನಗರಗಳಲ್ಲಿ ಜೀವನಮಟ್ಟ ಸುಧಾರಣೆ ಮಾಡಲು ಸಾಧ್ಯವಾಗಲಿದೆ' ಎಂದು ಹೇಳಿದರು.

ಜನಾಗ್ರಹದ ನಾಗರಿಕ ಸಹಭಾಗಿತ್ವ ಕಾರ್ಯಕ್ರಮದ ಮುಖ್ಯಸ್ಥ ಸಂತೋಷ್ ನರಗುಂದ ಮಾತನಾಡಿ, 'ಈ ಕೈಪಿಡಿ ಮೂಲಕ ಕರ್ನಾಟಕದ 315 ಸಣ್ಣ ಮತ್ತು ದೊಡ್ಡ ಪಟ್ಟಣಗಳು ಮತ್ತು 7 ಸಾವಿರ ವಾರ್ಡ್‌ಗಳಲ್ಲಿನ ಸಮಸ್ಯೆ ಪರಿಹರಿಸುವ ಗುರಿ ಹೊಂದಿದ್ದೇವೆ' ಎಂದರು.

ಉದ್ಘಾಟನೆ ನಂತರ 'ನಾಗರಿಕರ ಸಹಭಾಗಿತ್ವದೊಂದಿಗೆ ಸಮಾನ ಮತ್ತು ಸುಸ್ಥಿರ ನಗರಗಳ ನಿರ್ಮಾಣ' ಎಂಬ ವಿಷಯದ ಕುರಿತು ಸಂವಾದ ನಡೆಯಿತು.

ವರ್ತೂರಿನ ಸ್ವಾಭಿಮಾನಿ ಬಳಗದ ಕಾರ್ಯಕರ್ತರು ಹಾಗೂ ವರ್ತೂರು ಗ್ರಾಮದ ನಿವಾಸಿಗಳು ವರ್ತೂರು ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು

ಬಿಬಿಎಂಪಿ ಕಚೇರಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವಂತೆ ಒತ್ತಾಯಿಸಿ ವರ್ತೂರಿನ ಸ್ವಾಭಿಮಾನಿ ಬಳಗದ ಕಾರ್ಯಕರ್ತರು ಹಾಗೂ ವರ್ತೂರು ಗ್ರಾಮದ ನಿವಾಸಿಗಳು ವರ್ತೂರು ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

'ನೀರುಗಂಟಿಗಳು ತಾರತಮ್ಯ ಎಸಗುತ್ತಿದ್ದು, ವರ್ತೂರು ಸುತ್ತಮುತ್ತಲಿನ ನಿವಾಸಿಗಳು ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗಿದೆ. ನೀರಿನ ಸಮಸ್ಯೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಥವಾ ಅಧಿಕಾರಿಗಳ ಬಳಿ ಹಂಚಿಕೊಂಡರೆ ನೀರುಗಂಟಿಗಳು ನಮ್ಮ ಮನೆಗಳಿಗೆ ನೀರನ್ನೇ ಬಿಡುತ್ತಿಲ್ಲ' ಎಂದು ಆಪಾದಿಸಿದರು.

ನೂತನವಾಗಿ ಕೊರೆಸುತ್ತಿರುವ ಕೊಳವೆಬಾವಿಗಳ ಯಂತ್ರೋಪಕರಣ ಆಗಾಗ್ಗೆ ಕೆಟ್ಟು ಹೋಗುತ್ತಿವೆ. ಕೆಟ್ಟುಹೋದ ಯಂತ್ರೋಪಕರಣವನ್ನು ಆರು ತಿಂಗಳಾದರೂ ಸರಿಪಡಿಸುವುದಿಲ್ಲ. ಹೊಸ ಕೊಳವೆಬಾವಿಗಳಿಗೆ ಮೋಟಾರ್ ಅಳವಡಿಸಿಲ್ಲ ಎಂದು ಸಾರ್ವಜನಿಕರು ದೂರಿದರು.

ಸಮರ್ಪಕ ನೀರು ಪೂರೈಸದ ಬಗ್ಗೆ ಹಲವು ಬಾರಿ ಬಿಬಿಎಂಪಿ ವಾರ್ಡ್ ಎಂಜಿನಿಯರ್‌ಗೆ ದೂರು ನೀಡಿದರೂ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸ್ವಾಭಿಮಾನಿ ಬಳಗದ ಅಧ್ಯಕ್ಷ ಕುಪ್ಪಿ ಮಂಜುನಾಥ್ ದೂರಿದರು.

ಮನವಿ ಸ್ವೀಕರಿಸಿದ ಎಇಇ ವೆಂಕಟೇಶ ಪ್ರತಿಭಟನಕಾರರಿಗೆ ನೀರಿನ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಸ್ವಾಭಿಮಾನಿ ಬಳಗದ ವಿಜಯಕುಮಾರ್, ವರಪುರಿ ನಾರಾಯಣಸ್ವಾಮಿ, ಜೆ.ಕೆ. ರವಿ, ಶ್ರೀನಿವಾಸ್, ಜಗದೀಶ್ ರೆಡ್ಡಿ, ರವಿಶಂಕರ್, ಸರೋಜ, ಲಕ್ಷ್ಮೀಗೋಪಲ್ ರಾವ್, ಮಂಜಳಾ ಸೇರಿದಂತೆ ವರ್ತೂರು ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಡ್ಡಾ ಭೇಟಿಯಾದ ಸೋಮಣ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಮಾಜಿ ಸಚಿವ ವಿ.ಸೋಮಣ್ಣ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಸೋಮವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಇದೇ 27ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಯನ್ನಾಗಿ ತಮ್ಮನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು. 'ವರಿಷ್ಠರ ಸೂಚನೆಯಂತೆ ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಪಕ್ಷದ ಕೆಲ ಮುಖಂಡರ ಷಡ್ಯಂತ್ರದಿಂದ ಸೋಲು ಅನುಭವಿಸಿದೆ. ರಾಜ್ಯಸಭಾ ಅಭ್ಯರ್ಥಿಯನ್ನಾಗಿ ಮಾಡಿ ಹಿತ ಕಾಯಬೇಕು' ಎಂದು ಒತ್ತಾಯಿಸಿದರು.

ನಡ್ಡಾ ಪ್ರತಿಕ್ರಿಯಿಸಿ, 'ಯಾವುದೇ ಕಾರಣಕ್ಕೂ ಆತುರದ ನಿರ್ಧಾರ ಬೇಡ. ಪಕ್ಷ ನಿಮ್ಮ ಹಿತ ಕಾಯಲಿದೆ. ನಿಮಗೆ ಸ್ಥಾನಮಾನ ನೀಡುವ ಬಗ್ಗೆ ಶೀಘ್ರ ನಿರ್ಧರಿಸುತ್ತೇವೆ' ಎಂದು ಭರವಸೆ ನೀಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಜತೆಗಿದ್ದರು.

ವಿ.ಸೋಮಣ್ಣ ಅವರು ನವದೆಹಲಿಯಲ್ಲಿ ಸೋಮವಾರ ಜೆ.ಪಿ.ನಡ್ಡಾ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಮುಖಂಡ ಪ್ರಲ್ಹಾದ ಜೋಶಿ ಇದ್ದರು

ನಿವೇಶನ ಮಂಜೂರಾತಿ ಭರವಸೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಸರ್ಕಾರದ ಮಟ್ಟದಲ್ಲಿ ಶಿಫಾರಸು ಮಾಡಿ ಇಲ್ಲಿನ ಉತ್ತರ ಕರ್ನಾಟಕ ಸಾಂಸ್ಕೃತಿಕ ವೇದಿಕೆಗೆ ನಿವೇಶನ ಮಂಜೂರು ಮಾಡಿಸುತ್ತೇನೆ ಮತ್ತು ಕಟ್ಟಡ ನಿರ್ಮಾಣಕ್ಕೆ ವೈಯಕ್ತಿಕವಾಗಿಯೂ ಸಹಕಾರ ನೀಡುತ್ತೇನೆ' ಎಂದು ಶಾಸಕ ಎನ್.ಶ್ರೀನಿವಾಸ್ ಭರವಸೆ ನೀಡಿದರು.

ಉತ್ತರ ಕರ್ನಾಟಕ ಸಾಂಸ್ಕೃತಿಕ ವೇದಿಕೆ ಹಮ್ಮಿಕೊಂಡಿದ್ದ 'ರೊಟ್ಟಿ ಪಂಚಮಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, '1992ರಲ್ಲಿ ಸ್ಥಾಪನೆಯಾದ ಸಂಘಕ್ಕೆ ನಿವೇಶನ ಮಂಜೂರು ಮಾಡಿಸುವುದು ನನ್ನ ಜವಾಬ್ದಾರಿ' ಎಂದರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿದರು. 'ಮುಂದಿನ ವರ್ಷದ ವೇಳೆ, ವೇದಿಕೆಯು ಸ್ವಂತ ಕಚೇರಿಯನ್ನು ನಿರ್ಮಿಸುವಂತಾಗಲಿ' ಎಂದು ಹಾರೈಸಿದರು.

ಸದಸ್ಯರೆಲ್ಲರೂ ಉತ್ತರ ಕರ್ನಾಟಕದ ವಿವಿಧ ವೇಷಭೂಷಣಗಳೊಂದಿಗೆ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಖಡಕ್ ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಗೋಧಿ ಹುಗ್ಗಿ, ಪುಂಡಿ, ಕಾಳು ಪಲ್ಯ, ಎಣ್ಣೆಗಾಯಿ, ಶೇಂಗಾ, ಹುಚ್ಚೆಳ್ಳು ಚಟ್ನಿ, ಗಟ್ಟಿ ಮೊಸರು, ಮೆಂತ್ಯಸೊಪ್ಪು ಮಿಶ್ರಿತ ಪಚಡಿಯ ಊಟದ ವ್ಯವಸ್ಥೆ ಮಾಡಲಾಗಿತ್ತು.

ಉತ್ತರ ಕರ್ನಾಟಕ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಬಿ.ಟಿ.ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.

20 ಕ್ಷೇತ್ರಗಳಲ್ಲಿ ಗೆಲ್ಲುವ ಉಮೇದು • 12 ಕ್ಷೇತ್ರಗಳಿಗೆ ಒಬ್ಬರ ಹೆಸರು ಅಂತಿಮ • ಕೆಲವು ಸಚಿವರ ಹೆಸರು ಮುನ್ನೆಲೆಗೆ

ತಿಂಗಳ ಕೊನೆಗೆ ಕಾಂಗ್ರೆಸ್ ಮೊದಲ ಪಟ್ಟಿ?

ಪ್ರಜಾವಾಣಿ ವಾರ್ತೆ

ಎಚ್.ಸಿ. ಮಹದೇವಪ್ಪ

ಕೆ.ಎಚ್. ಮುನಿಯಪ್ಪ

ಮಧು ಬಂಗಾರಪ್ಪ

ಗೀತಾ ಶಿವರಾಜ್‌ಕುಮಾರ್

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಕೈವಶ ಮಾಡಿಕೊಳ್ಳಬೇಕೆಂಬ ಉಮೇದಿನಲ್ಲಿರುವ ರಾಜ್ಯ ಕಾಂಗ್ರೆಸ್ ನಾಯಕರು, ಈ ತಿಂಗಳ ಅಂತ್ಯದೊಳಗೆ ಸುಮಾರು 15 ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಅಂತಿಮಗೊಳಿಸಲು ಮುಂದಾಗಿದ್ದಾರೆ. 12 ಕ್ಷೇತ್ರಗಳಿಗೆ ಈಗಾಗಲೇ ಒಬ್ಬರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕ್ಷೇತ್ರ ಗೆಲ್ಲುವ ಕಲಿಗಳನ್ನು ಗುರುತಿಸಿ ಉಸ್ತುವಾರಿ ಸಚಿವರು ನೀಡಿದ್ದ ಅಭ್ಯರ್ಥಿಗಳ ಕುರಿತಂತೆ ಇತ್ತೀಚೆಗೆ ನಡೆದ ಕೆಪಿಸಿಸಿ ಚುನಾವಣಾ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. 28 ಕ್ಷೇತ್ರಗಳ ಪೈಕಿ ಅರ್ಧಕ್ಕೂ ಹೆಚ್ಚು ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳ ಹೆಸರು ಬಹುತೇಕ ಅಂತಿಮಗೊಂಡಿದ್ದು, ವರಿಷ್ಠರ ಗಮನಕ್ಕೂ ತರಲಾಗಿದೆ ಎಂದು ಮೂಲಗಳು ಹೇಳಿವೆ.

ಕೆಲವು ಕ್ಷೇತ್ರಗಳಲ್ಲಿ ಸಚಿವರನ್ನು ಕಣಕ್ಕಿಳಿಸಲು ವರಿಷ್ಠರು ಉತ್ಸುಕರಾಗಿದ್ದಾರೆ. ಅನಿವಾರ್ಯವಾದರೆ ಚುನಾವಣೆಗೆ ಸ್ಪರ್ಧಿಸಬೇಕೆಂಬ ಸೂಚನೆಯನ್ನು ಈಗಾಗಲೇ ವರಿಷ್ಠರು ನೀಡಿದ್ದಾರೆ. ಕೆಲವು ಅಭ್ಯರ್ಥಿಗಳಿಗೆ ಟಿಕೆಟ್ ಖಚಿತಪಡಿಸಿರುವ ಪಕ್ಷದ ನಾಯಕರು, ಈಗಿನಿಂದಲೇ ತಯಾರಿ ನಡೆಸುವಂತೆ ಸಲಹೆ ನೀಡಿದ್ದಾರೆ ಎಂದೂ ಮೂಲಗಳು ಹೇಳಿವೆ.

ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ಪೈಪೋಟಿ ನೀಡಲು ಕೆಲವು ಕ್ಷೇತ್ರಗಳಲ್ಲಿ ಸಚಿವರೇ ಸೂಕ್ತ ಎಂಬ ನಿರ್ಧಾರಕ್ಕೆ ವರಿಷ್ಠರು ಬಂದಿದ್ದಾರೆ. ಈ ಪೈಕಿ, ಚಾಮರಾಜನಗರ ಕ್ಷೇತ್ರದಿಂದ ಎಚ್.ಸಿ.ಮಹದೇವಪ್ಪ, ಕೋಲಾರದಿಂದ ಕೆ.ಎಚ್. ಮುನಿಯಪ್ಪ, ಬಳ್ಳಾರಿಯಿಂದ ಬಿ. ನಾಗೇಂದ್ರ, ಶಿವಮೊಗ್ಗ ಕ್ಷೇತ್ರದಿಂದ ಮಧು ಬಂಗಾರಪ್ಪ ಅವರ ಹೆಸರು ಮುಂಚೂಣಿಯಲ್ಲಿದೆ. ಆದರೆ, ಪುತ್ರ ಸುನಿಲ್ ಬೋಸ್‌ಗೆ ಚಾಮರಾಜನಗರ ಕ್ಷೇತ್ರದ ಟಿಕೆಟ್ ನೀಡುವಂತೆ ಪಕ್ಷದ ನಾಯಕರಲ್ಲಿ ಮಹದೇವಪ್ಪ ಮನವಿ ಮಾಡಿದ್ದಾರೆ. ಬಳ್ಳಾರಿಯಲ್ಲಿ ಬಿ. ನಾಗೇಂದ್ರ ಅಥವಾ ಶಾಸಕ ಇ. ತುಕಾರಾಂ ಅವರ ಪುತ್ರಿ ಸೌಪರ್ಣಿಕಾ, ಶಿವಮೊಗ್ಗದಲ್ಲಿ ಗೀತಾ ಶಿವರಾಜ್‌ಕುಮಾರ್ ಹೆಸರು ನಾಯಕರ ಪರಿಗಣನೆಯಲ್ಲಿದೆ ಎಂದು ಗೊತ್ತಾಗಿದೆ.

ಮಂಡ್ಯದಿಂದ ಉದ್ಯಮಿ ಸ್ಟಾರ್ ಚಂದ್ರು ಕಣಕ್ಕೆ?

ಸ್ಟಾರ್ ಚಂದ್ರು

ಇಡೀ ರಾಜ್ಯದಲ್ಲಿ ಅತ್ಯಂತ ಕುತೂಹಲದ ಕ್ಷೇತ್ರಗಳಲ್ಲಿ ಒಂದಾದ ಮಂಡ್ಯದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಗಮಂಗಲದವರಾದ ಉದ್ಯಮಿ ಸ್ಟಾರ್ ಚಂದ್ರು (ವೆಂಕಟ ರಮಣೇಗೌಡ) ಹೆಸರು ಬಹುತೇಕ ಅಂತಿಮಗೊಂಡಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವ ಎನ್. ಚಲುವರಾಯಸ್ವಾಮಿ ಸೇರಿದಂತೆ ಕ್ಷೇತ್ರದ ಎಲ್ಲ ಶಾಸಕರೂ ಚಂದ್ರು ಅವರಿಗೆ ಟಿಕೆಟ್ ನೀಡುವ ವಿಚಾರದಲ್ಲಿ ಒಮ್ಮತಕ್ಕೆ ಬಂದಿದ್ದಾರೆ. ಕಣಕ್ಕಿಳಿಯಲು ಅವರು ಈಗಾಗಲೇ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಎಂದೂ ಮೂಲಗಳು ಹೇಳಿವೆ.

ಸ್ಟಾರ್ ಚಂದ್ರು ಅವರು ಗೌರಿಬಿದನೂರು ಕ್ಷೇತ್ರದ ಪಕ್ಷೇತರ ಶಾಸಕ, ಈಗಾಗಲೇ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿರುವ ಪುಟ್ಟಸ್ವಾಮಿ ಗೌಡ ಅವರ ಸಹೋದರ. 'ಮಂಡ್ಯದಿಂದ ನನ್ನ ಸಹೋದರನಿಗೆ ಟಿಕೆಟ್ ಖಚಿತ ಆಗಿದೆ' ಎಂದು ಪುಟ್ಟಸ್ವಾಮಿಗೌಡ ಹೇಳಿರುವ ವಿಡಿಯೊ ತುಣುಕೊಂದು ಹರಿದಾಡುತ್ತಿದೆ. ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯ ಐದು ಕ್ಷೇತ್ರಗಳನ್ನು ಬಗಲಿಗೆ ಹಾಕಿಕೊಂಡಿರುವ ಕಾಂಗ್ರೆಸ್, ಲೋಕಸಭೆ ಕ್ಷೇತ್ರವನ್ನೂ ಗೆಲ್ಲುವ ಉಮೇದಿನಲ್ಲಿದೆ.

ಇನ್ನು ಹಾಸನದಿಂದ ಶ್ರೇಯಸ್ ಪಟೇಲ್ (ಹೊಳೆನರಸೀಪುರ ಕ್ಷೇತ್ರದ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ), ಚಿಕ್ಕೋಡಿಯಿಂದ ವಿಧಾನ ಪರಿಷತ್ ಸದಸ್ಯ ಪ್ರಕಾಶ್ ಹುಕ್ಕೇರಿ, ಬೆಂಗಳೂರು ಉತ್ತರದಿಂದ ಕುಸುಮಾ ಹನುಮಂತರಾಯಪ್ಪ, ಬೆಂಗಳೂರು ಗ್ರಾಮಾಂತರದಿಂದ ಡಿ.ಕೆ. ಸುರೇಶ್, ಬೀದರ್‌ನಿಂದ ರಾಜಶೇಖರ ಪಾಟೀಲ ಹುಮ್ನಾಬಾದ್, ಚಿತ್ರದುರ್ಗದಿಂದ ಬಿ.ಎನ್. ಚಂದ್ರಪ್ಪ, ತುಮಕೂರಿನಿಂದ ಎಸ್.ಪಿ. ಮುದ್ದಹನುಮೇಗೌಡ, ದಾವಣಗೆರೆಯಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ, ರಾಯಚೂರಿನಿಂದ ಕುಮಾರ ನಾಯಕ್ (ನಿವೃತ್ತ ಐಎಎಸ್ ಅಧಿಕಾರಿ), ವಿಜಯಪುರದಿಂದ ರಾಜು ಅಲಗೂರ, ಬಾಗಲಕೋಟೆಯಿಂದ ಆನಂದ್ ನ್ಯಾಮಗೌಡ ಅಥವಾ ವೀಣಾ ಕಾಶಪ್ಪನವರ ಹೆಸರು ಪಟ್ಟಿಯಲ್ಲಿದೆ. ಚಿಕ್ಕಬಳ್ಳಾಪುರದಿಂದ ರಕ್ಷಾ ರಾಮಯ್ಯ, ಎಂ. ವೀರಪ್ಪ ಮೊಯಿಲಿ, ಮೈಸೂರು- ಕೊಡಗು ಕ್ಷೇತ್ರದಿಂದ ಎಂ. ಲಕ್ಷ್ಮಣ್, ಶುಶ್ರುತ್ ಗೌಡ, ಉಡುಪಿ- ಚಿಕ್ಕಮಗಳೂರು ಕ್ಷೇತ್ರದಿಂದ ಕೆ. ಜಯಪ್ರಕಾಶ ಹೆಗ್ಡೆ ಹೆಸರು ಚರ್ಚೆಯಲ್ಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೆಲವು ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಯಾಗಿ ಒಬ್ಬರ ಹೆಸರನ್ನು ಮಾತ್ರ ಶಿಫಾರಸು ಮಾಡಿ ವರಿಷ್ಠರ ಒಪ್ಪಿಗೆ ಪಡೆಯಲು ರಾಜ್ಯ ನಾಯಕರು ಮುಂದಾಗಿದ್ದಾರೆ ಎಂದೂ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ತುಮಕೂರು: ಸೋಮಣ್ಣ ಸ್ಪರ್ಧೆಗೆ ಜೆ.ಸಿ. ಮಾಧುಸ್ವಾಮಿ ವಿರೋಧ

ತುಮಕೂರು: 'ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಹೊರಗಿನಿಂದ ಬಂದವರು ಗೆದ್ದಿರುವ ಉದಾಹರಣೆ ಇಲ್ಲ' ಎಂದು ಹೇಳುವ ಮೂಲಕ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು, ಕ್ಷೇತ್ರದಿಂದ ವಿ.ಸೋಮಣ್ಣ ಸ್ಪರ್ಧೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಸೋಮವಾರ ಇಲ್ಲಿ ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಅವರು, 'ಹೊರಗಿನಿಂದ ಬಂದ ಹಲವರು ಸೋತಿರುವ ಉದಾಹರಣೆ ನಮ್ಮ ಕಣ್ಣ ಮುಂದೆಯೇ ಇದೆ' ಎಂದರು.

'ಲೋಕಸಭೆಗೆ ಸ್ಪರ್ಧಿಸಲು ನಾನೂ ತಯಾರಿ ನಡೆಸಿದ್ದೇನೆ. ಟಿಕೆಟ್ ನೀಡುವಂತೆ ವರಿಷ್ಠರನ್ನು ಕೇಳಿದ್ದೇನೆ. ವಿ.ಸೋಮಣ್ಣ ಸ್ಪರ್ಧೆ ಬಗ್ಗೆ ಗೊತ್ತಿಲ್ಲ. ಗೆಲ್ಲುವ ಮಾನದಂಡದ ಮೇಲೆ ಅಭ್ಯರ್ಥಿಯ ಆಯ್ಕೆ ನಡೆಯಲಿದೆ' ಎಂದರು.

'ಈ ಕ್ಷೇತ್ರದಿಂದ ಹಿಂದೆ ಕೋದಂಡರಾಮಯ್ಯ, ಎ.ಕೃಷ್ಣಪ್ಪ, ಎಚ್.ಡಿ.ದೇವೇಗೌಡ ಸ್ಪರ್ಧಿಸಿ ಸೋತಿದ್ದಾರೆ. ಕಳೆದ ಬಾರಿ ಕಾಂಗ್ರೆಸ್- ಜೆಡಿಎಸ್ ಮೈತ್ರಿಯಿಂದ ಫಲಿತಾಂಶ ಏನಾಯಿತು ಎಂಬುದು ಗೊತ್ತಿದೆ. ಈಗ ಬಿಜೆಪಿ- ಜೆಡಿಎಸ್ ಒಪ್ಪಂದವಾಗಿದೆ. ಏನಾಗುವುದೋ ನೋಡಬೇಕು. ನಾಯಕರು ಒಂದಾದ ತಕ್ಷಣ ಕಾರ್ಯಕರ್ತರು ಒಟ್ಟಾಗುವುದಿಲ್ಲ. ಈ ಬಗ್ಗೆ ಎಚ್ಚರ ವಹಿಸಬೇಕು' ಎಂದು ಹೇಳಿದರು.

'ಲೋಕಸಭೆ ಚುನಾವಣೆಗೆ ಮಾಧುಸ್ವಾಮಿ ಸ್ಪರ್ಧಿಸಿದರೆ ಗೆಲ್ಲುವುದು ಕಷ್ಟಕರ. ಸೋಮಣ್ಣ ಅವರು ಸ್ಪರ್ಧಿಸಿದರೆ ಪಕ್ಷಕ್ಕೆ ಅನುಕೂಲವಾಗಬಹುದು' ಎಂದು ಬಿಜೆಪಿ ಸಂಸದ ಜಿ.ಎಸ್. ಬಸವರಾಜು ಬಹಿರಂಗವಾಗಿ ಹೇಳಿಕೆ ನೀಡಿದ್ದರು. ಆದರೆ ಈಗ ಮಾಧುಸ್ವಾಮಿ ಅವರು ಸೋಮಣ್ಣ ಸ್ಪರ್ಧೆಗೆ ವಿರೋಧ ವ್ಯಕ್ತಪಡಿಸಿರುವುದು ಪಕ್ಷದ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಜೆಡಿಎಸ್: ಐವರು ಕಾರ್ಯಾಧ್ಯಕ್ಷರ ನೇಮಕ

ಬೆಂಗಳೂರು: ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ ಸೇರಿದಂತೆ ಐವರನ್ನು ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸೋಮವಾರ ಆದೇಶ ಹೊರಡಿಸಿದ್ದಾರೆ.

ಶಾಸಕರಾದ ಸಿ.ಬಿ. ಸುರೇಶ್ ಬಾಬು, ಭೀಮಗೌಡ ಬಸನಗೌಡ ಪಾಟೀಲ, ಮಾಜಿ ಸಚಿವ ಸಾ.ರಾ. ಮಹೇಶ್ ಮತ್ತು ಮಾಜಿ ಶಾಸಕ ದೊಡ್ಡಪ್ಪಗೌಡ ಶಿವಲಿಂಗಪ್ಪ ನರಬೋಳ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ ಮತ್ತು ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರನ್ನು ಮಹಾ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಸೋಮವಾರವಷ್ಟೇ ಪಕ್ಷ ಸೇರಿದ ನಿವೃತ್ತ ಐಪಿಎಸ್ ಅಧಿಕಾರಿ ಜ್ಯೋತಿ ಪ್ರಕಾಶ್ ಮಿರ್ಜಿ ಸೇರಿದಂತೆ ನಾಲ್ವರು ಹಿರಿಯ ಉಪಾಧ್ಯಕ್ಷರು, ಏಳು ಮಂದಿ ಉಪಾಧ್ಯಕ್ಷರು, ವಕೀಲ ಎ.ಪಿ. ರಂಗನಾಥ್ ಸೇರಿದಂತೆ ಹತ್ತು ಮಂದಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಹತ್ತು ಮಂದಿ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗಿದೆ. ಖಜಾಂಚಿಯಾಗಿ ಶಾಸಕ ಬಿ.ಎನ್. ರವಿಕುಮಾರ್ ಅವರನ್ನು ನೇಮಿಸಲಾಗಿದೆ.

ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರಾಗಿ ಮಾಜಿ ಶಾಸಕ ಕೆ. ಅನ್ನದಾನಿ, ಮಹಿಳಾ ವಿಭಾಗದ ಅಧ್ಯಕ್ಷರಾಗಿ ಮಾಲೂರಿನ ರಶ್ಮಿ ರಾಮೇಗೌಡ ಮತ್ತು ಯುವ ಜನತಾದಳದ ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ಕಂಪ್ಲಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ರಾಜು ನಾಯಕ ಅವರನ್ನು ನೇಮಕ ಮಾಡಲಾಗಿದೆ.

ರಾಮನ ಹೆಸರಲ್ಲಿ ಮತ ಕೇಳಲು ಬರುತ್ತಾರೆ ಎಚ್ಚರ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ/ವಿಜಯಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯವರು ರಾಮನ ಹೆಸರಿನಲ್ಲಿ ಮತಕೇಳಲು ಬರಲಿದ್ದು, ಮತದಾರರು ಎಚ್ಚರವಾಗಿರಬೇಕು ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

ರಾಜಕೀಯಕ್ಕಾಗಿ ರಾಮ ಮತ್ತು ಧರ್ಮದ ಹೆಸರು ಬಳಸಿಕೊಳ್ಳುವ ಬಿಜೆಪಿಯವರಿಗೆ ಜನರು ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ಸೋಮವಾರ ಮನವಿ ಮಾಡಿದರು.

ಸೋಮವಾರ ಐದು ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನ ಜನ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ವಿಷಯ ಬಿಟ್ಟು ದೇವರು, ಧರ್ಮದ ಹೆಸರಿನಲ್ಲಿ ರಾಜಕಾರಣ, ಕೋಮುಗಲಭೆ ಮಾಡುವುದು ಸರಿಯಲ್ಲ. ಅಧಿಕಾರ ಮತ್ತು ಮತಕ್ಕಾಗಿ ಧರ್ಮ ಒಡೆಯುವ ಬದಲು ಜನಪರ ಕೆಲಸಗಳ ಹೆಸರಿನಲ್ಲಿ ಮತ ಕೇಳಲಿ ಎಂದು ಮುನಿಯಪ್ಪ ಅವರು ಬಿಜೆಪಿಗೆ ಸವಾಲು ಎಸೆದರು.

ಹೈನುಗಾರರ ₹716 ಕೋಟಿ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ನೈಜ ಕಾಳಜಿ ಇದ್ದರೆ ಬಾಕಿ ಉಳಿಸಿಕೊಂಡಿರುವ ಹೈನುಗಾರರ ₹716 ಕೋಟಿ ಪ್ರೋತ್ಸಾಹಧನವನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಧೋರಣೆಯಿಂದ ಜನರು ಮಾತ್ರವಲ್ಲ, ಜಾನುವಾರುಗಳೂ ಈ ಸರ್ಕಾರಕ್ಕೆ ಶಾಪ ಹಾಕುತ್ತಿವೆ ಎಂದು ಕಿಡಿಕಾರಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನವನ್ನು ನೀಡುತ್ತಿದ್ದರು. ಅದರ ಪರಿಣಾಮವಾಗಿ ಬಿಜೆಪಿ ಆಡಳಿತದಲ್ಲಿದ್ದಾಗ 26 ಲಕ್ಷ ಗ್ರಾಮೀಣ ರೈತರಿಂದ ಪ್ರತಿ ದಿನ 80–85 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿತ್ತು. ಈಗ ಹಾಲು ಪೂರೈಕೆ ಇಳಿಕೆಯಾಗಿದೆ ಎಂದರು.

'ಈ ಸರ್ಕಾರವು ಹಾಲು ಉತ್ಪಾದಕರಿಗೆ ₹716 ಕೋಟಿ ಪ್ರೋತ್ಸಾಹ ಧನ ಉಳಿಸಿಕೊಂಡಿದೆ. ಇದರ ಪರಿಣಾಮವಾಗಿ 10 ಲಕ್ಷ ಲೀಟರ್‌ಗಳಷ್ಟು ಹಾಲು ಸಂಗ್ರಹಣೆ ಕಡಿಮೆ ಆಗಿದೆ. ಕಾಂಗ್ರೆಸ್ ಪಕ್ಷದ ಕೆಲವು ನಾಯಕರು ಬಿಜೆಪಿ ಬಗ್ಗೆ ಟೀಕಿಸುವಾಗ ಮಾನ ಮರ್ಯಾದೆ ಇದ್ದರೆ ಎಂಬ ಪದ ಬಳಸುತ್ತಾರೆ. ನಾನು ಆ ಭಾಷೆ ಬಳಸುವುದಿಲ್ಲ. ರೈತರ ಬಗ್ಗೆ ಕಾಳಜಿ ಇದ್ದರೆ ಗೌರವದಿಂದ ಕೂಡಲೇ ಬಿಡುಗಡೆ ಮಾಡಬೇಕು' ಎಂದು ವಿಜಯೇಂದ್ರ ಆಗ್ರಹಿಸಿದರು.

ಇದೇ 10 ರಂದು ಪ್ರಮುಖ ನಾಯಕರ ಸಭೆ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ 10 ರಂದು ಬೆಂಗಳೂರಿಗೆ ಬರಲಿದ್ದಾರೆ. ಅಂದು ಲೋಕಸಭಾ ಕ್ಷೇತ್ರಗಳ ಕ್ಲಸ್ಟರ್ ಸಭೆಯಲ್ಲಿ ಭಾಗವಹಿಸಲಿದ್ದಾರೆ. ನಂತರ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಭಾಗವಹಿಸಿ ಸಮಾಲೋಚನೆ ನಡೆಸಲಿದ್ದಾರೆ. ಅಂದು ಸಂಜೆ 5 ಗಂಟೆಗೆ ಸುತ್ತೂರು ಜಾತ್ರೆಯಲ್ಲೂ ಭಾಗವಹಿಸಲಿದ್ದಾರೆ ಎಂದರು.

'ಯಾವ ಕ್ಷೇತ್ರದಿಂದ ಯಾರು ಸ್ಪರ್ಧಿಸಬೇಕು ಎಂಬುದನ್ನು ನಮ್ಮ ಪಕ್ಷದ ವರಿಷ್ಠರು ತೀರ್ಮಾನಿಸಲಿದ್ದಾರೆ. 28 ಕ್ಷೇತ್ರಗಳ ಅಭ್ಯರ್ಥಿಗಳು ಯಾರು ಯಾರೆಂಬುದನ್ನು ವರಿಷ್ಠರೇ ನಿರ್ಧರಿಸುತ್ತಾರೆ. ಕಾರ್ಯಕರ್ತರ ಅಭಿಪ್ರಾಯದ ಮೇರೆಗೆ ಸೂಕ್ತ ಅಭ್ಯರ್ಥಿಗಳನ್ನು ಘೋಷಿಸಲಿದ್ದಾರೆ' ಎಂದು ಹೇಳಿದರು.

ಮೂವರು ತಹಶೀಲ್ದಾರ್‌ಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಬಳ್ಳಾವರದಲ್ಲಿ ಅರಣ್ಯ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡಿದ ಆರೋಪದಲ್ಲಿ ಇಬ್ಬರು ನಿವೃತ್ತ ತಹಶೀಲ್ದಾರ್ ಮತ್ತು ಒಬ್ಬರು ಹಾಲಿ ತಹಶೀಲ್ದಾರ್ ವಿರುದ್ಧ ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿದೆ.

ಬಳ್ಳಾವರ ಗ್ರಾಮದ ಸರ್ವೆ ನಂಬರ್ 22ರಲ್ಲಿ 353 ಎಕರೆ ಭೂಮಿಯನ್ನು 1930ರಲ್ಲೇ ಅರಣ್ಯ ಭೂಮಿ ಎಂದು ಅಧಿಸೂಚಿಸಲಾಗಿದೆ. ಇದೇ ಜಾಗದಲ್ಲಿ 1999, 2005, 2022ರಲ್ಲಿ ಖಾಸಗಿ ವ್ಯಕ್ತಿಗಳಿಗೆ ಭೂಮಿ ಮಂಜೂರು ಮಾಡಲಾಗಿದೆ. ಈ ಸಂದರ್ಭದಲ್ಲಿ ಕರ್ತವ್ಯದಲ್ಲಿದ್ದ ತಹಶೀಲ್ದಾರ್‌ಗಳಾದ ಕೆ.ಎನ್. ನಾರಾಯಣಪ್ಪ, ಜಿ.ಎಸ್.ನಾಗರಾಜ್ ಮತ್ತು ಪೂರ್ಣಿಮಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಮೂವರಲ್ಲಿ ಪೂರ್ಣಿಮಾ ಅವರು ಸದ್ಯ ಮೈಸೂರು ಜಿಲ್ಲೆಯ ಕೆ.ಆರ್.ನಗರದಲ್ಲಿ ತಹಶೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದಾರೆ. ಉಳಿದ ಇಬ್ಬರು ನಿವೃತ್ತಿ ಹೊಂದಿದ್ದಾರೆ. ತರೀಕೆರೆ ಜೆಎಂಎಫ್‌ಸಿ ನ್ಯಾಯಾಲಯದ ಅನುಮತಿ ಪಡೆದು ಈ ಮೂವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅವರು ವಿವರಿಸಿದರು.

ಜಿಲ್ಲಾಡಳಿತದ ಮನವಿ: ಮಂಡ್ಯ ಬಂದ್ ವಾಪಸ್

ಪ್ರಜಾವಾಣಿ ವಾರ್ತೆ

ಮಂಡ್ಯ: ಪ್ರಗತಿಪರ ಸಂಘಟನೆಗಳು ಫೆ.7 ರಂದು ಕರೆ ನೀಡಿದ್ದ ಮಂಡ್ಯ ಬಂದ್ ಅನ್ನು ಜಿಲ್ಲಾಡಳಿತದ ಮನವಿ ಮೇರೆಗೆ ತಾತ್ಕಾಲಿಕವಾಗಿ ಹಿಂಪಡೆದಿವೆ.

ಕೆರಗೋಡು ಘಟನೆ ಮುಂದಿಟ್ಟುಕೊಂಡು ಸೌಹಾರ್ದತೆಗೆ ಭಂಗ ತಂದ ಶಕ್ತಿಗಳ ವಿರುದ್ಧ ಕ್ರಮಕ್ಕೆಗೊಳ್ಳಲು ಈ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸಿಫ್, ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮುಖಂಡರು ಒಮ್ಮತದಿಂದ ಬಂದ್ ಕರೆ ಹಿಂಪಡೆದರು.

ಜಿಲ್ಲಾಧಿಕಾರಿ ಕುಮಾರ ಮಾತನಾಡಿ, 'ಶಾಂತಿ ಕಾಪಾಡಲು ಜಿಲ್ಲಾಡಳಿತ ಬದ್ಧವಾಗಿದೆ. ಶಾಂತಿ, ಸೌಹಾರ್ದತೆ ಕಾಪಾಡಲು ಬಂದ್ ಕರೆ ಕೈಬಿಡಬೇಕು' ಎಂದು ಕೋರಿದರು. ಅದಕ್ಕೆ ಮುಖಂಡರು ಸಮ್ಮತಿಸಿದರು.

'ಜಿಲ್ಲೆಯ ಶಾಂತಿ ಕದಡಲು ಫೆ.9 ರಂದು ಬಂದ್‌ಗೆ ಕರೆ ನೀಡಿರುವ ಶಕ್ತಿಗಳ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು. ಸುನಂದಾ ಜಯರಾಂ ಅವರು, 'ಫೆ.9 ರಂದೂ ಬಂದ್‌ಗೆ ಜಿಲ್ಲಾಡಳಿತ ಅವಕಾಶ ನೀಡಬಾರದು' ಎಂದು ಆಗ್ರಹಿಸಿದರು.

ಮಂಡ್ಯದಲ್ಲಿ ಸೋಮವಾರ ಪ್ರಗತಿಪರ ಸಂಘಟನೆಗಳ ಮುಖಂಡರೊಂದಿಗೆ ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್, ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಸಭೆ ನಡೆಸಿದರು –ಪ್ರಜಾವಾಣಿ ಚಿತ್ರ

ಕೆರಗೋಡು: ಜೆಡಿಎಸ್ ಫ್ಲೆಕ್ಸ್ ತೆರವು

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದ ವಿವಾದಿತ ಧ್ವಜಸ್ತಂಭದ ಸ್ಥಳದಲ್ಲಿದ್ದ ಜೆಡಿಎಸ್ ನಾಯಕರ ಫ್ಲೆಕ್ಸ್‌ಗಳನ್ನು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಸೂಚನೆ ಮೇರೆಗೆ ಸೋಮವಾರ ತೆರವುಗೊಳಿಸಲಾಗಿದೆ.

ಗ್ರಾಮ ಪಂಚಾಯಿತಿ ಸಿಬ್ಬಂದಿ ಪೊಲೀಸರ ಭದ್ರತೆಯಲ್ಲಿ ತೆರವುಗೊಳಿಸಿದರು. ಧ್ವಜಸ್ಥಂಭ ಉದ್ಘಾಟನೆ ನಿಮಿತ್ತ ಎಚ್.ಡಿ. ಕುಮಾರಸ್ವಾಮಿ ಹಾಗೂ ಸ್ಥಳೀಯ ನಾಯಕರ ಭಾವಚಿತ್ರಗಳಿದ್ದ ಫ್ಲೆಕ್ಸ್‌ಗಳನ್ನು ಹಾಕಿದ್ದು, ವಿವಾದದ ನಂತರವೂ ತೆರವಾಗಿರಲಿಲ್ಲ.

ಹನುಮಧ್ವಜ ಅಭಿಯಾನ: ಮಂಡ್ಯ ನಗರದ ಶಂಕರನಗರದಲ್ಲಿ ಬಿಜೆಪಿಯವರು ಅಭಿಯಾನ ನಡೆಸಿ, ಮನೆಗಳಿಗೆ ಹನುಮ ಧ್ವಜ ವಿತರಿಸಿದರು. ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಭಾಗವಹಿಸಿದ್ದರು.

ಮುಖ್ಯಶಿಕ್ಷಕಿ ವಿರುದ್ಧ ಡಿಡಿಪಿಐಗೆ ದೂರು

ಮಂಡ್ಯ: 'ಕೆರಗೋಡು ಗ್ರಾಮದ, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಸುಶೀಲಮ್ಮ ಅವರು ಗಣರಾಜ್ಯೋತ್ಸವದ ದಿನ ಎಸ್‌ಡಿಎಂಸಿ ಅಧ್ಯಕ್ಷರ ಬದಲು, ಆರ್‌ಎಸ್‌ಎಸ್ ಮುಖಂಡ ಹಾಗೂ ಗ್ರಾಮ ಪಂಚಾಯ್ತಿ ಸದಸ್ಯ ಕೆ.ಜಿ. ಮಹೇಶ್ ಅವರಿಂದ ಧ್ವಜಾರೋಹಣ ಮಾಡಿಸಿದ್ದಾರೆ' ಎಂದು ಕೆಲ ಪೋಷಕರು ಡಿಡಿಪಿಐ ಅವರಿಗೆ ದೂರು ನೀಡಿದ್ದಾರೆ.

> ಪೋಷಕರ ದೂರಿನ ಬಗ್ಗೆ ಪರಿಶೀಲಿಸಲಾಗುವುದು. ಉತ್ತರ ವಲಯ ಬಿಇಒ ಸ್ಥಳಕ್ಕೆ ಭೇಟಿ ನೀಡಲಿದ್ದಾರೆ
> **ಎಚ್.ಶಿವರಾಮೇಗೌಡ**
> ಡಿಡಿಪಿಐ, ಮಂಡ್ಯ

ಅಲ್ಲದೆ, ಅಯೋಧ್ಯೆ ಬಾಲರಾಮ ಪ್ರತಿಷ್ಠಾಪನೆಯ ವೇಳೆ ತಯಾರಿಸಿದ್ದ ಲಾಡುಗಳನ್ನು 'ಜೈ ಶ್ರೀರಾಮ್' ಹೆಸರಿನ ಕವರಿನಲ್ಲಿ ಮಕ್ಕಳಿಗೆ ಹಂಚಿದ್ದಾರೆ' ಎಂದು ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಶಿವರಾಮೇಗೌಡ ಅವರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಸರ್ಕಾರಿ ಶಾಲೆಯಲ್ಲಿ ವಿವಿಧ ಧರ್ಮದ ವಿದ್ಯಾರ್ಥಿಗಳಿದ್ದರೂ ವಿವಾದಿತ ಧ್ವಜ ಸ್ತಂಭದ ಬಳಿಗೆಕರೆದೊಯ್ದು, ನಾವೆಲ್ಲ ಹಿಂದೂ ಘೋಷಣೆ ಕೂಗಿಸಿದ್ದಾರೆ. ಆ ಬಗ್ಗೆ ಎಸ್‌ಡಿಎಂಸಿ ಸಭೆಯಲ್ಲಿ ಚರ್ಚಿಸಿಲ್ಲ, ಪೋಷಕರ ಒಪ್ಪಿಗೆ ಪಡೆದಿಲ್ಲ' ಎಂದು ಪೋಷಕರಾದ ಕೆ.ಎಂ.ಸಂತೋಷ್ ಕುಮಾರ್, ಲೋಕೇಶ್, ಕೆ.ಸಿ.ಉಮಾಶಂಕರ್, ಸ್ವಾಮಿ, ದೇವರಾಜು, ಮಂಗಳಗೌರಮ್ಮ ಅವರು ಆಗ್ರಹಿಸಿದರು.

'ಗೌರಿಶಂಕರ ಸೇವಾ ಟ್ರಸ್ಟ್ ಸ್ಥಾಪಿಸಿದ್ದ, ವಿವಾದಿತ ಧ್ವಜಸ್ತಂಭದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿಸಿದ್ದಾರೆ' ಎಂದು ದೂರಿದರು.

'ಗಣರಾಜ್ಯೋತ್ಸವಕ್ಕೆ ಮುಖ್ಯಶಿಕ್ಷಕಿ ಆಹ್ವಾನಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರ ಗೈರು ಕುರಿತು ಕೇಳಿದಾಗ, ಆಹ್ವಾನಿಸಿದ್ದರೂ ಬಂದಿಲ್ಲವೆಂದು ತಿಳಿಸಿದರು. ನಂತರ ನಾನೇ ಧ್ವಜಾರೋಹಣ ಮಾಡಿದೆ. ಆರ್‌ಎಸ್‌ಎಸ್‌ನಲ್ಲಿ ಕಾರ್ಯಕರ್ತನಾದ ಮಾತ್ರಕ್ಕೆ ಧ್ವಜಾರೋಹಣ ಮಾಡಬಾರದೆ?' ಎಂದು ಸದಸ್ಯ ಕೆ.ಜಿ.ಮಹೇಶ್ ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪಣೋಲಿಬೈಲ್ ಕ್ಷೇತ್ರದಲ್ಲಿ ಕಲ್ಕುಡ–ಕಲ್ಲುರ್ಟಿ ಕೋಲ ಸೇವೆಯು ಯು.ಟಿ.ಖಾದರ್ ಉಪಸ್ಥಿತಿಯಲ್ಲಿ ನೆರವೇರಿತು

ಹರಕೆ ಕೋಲದಲ್ಲಿ ಖಾದರ್ ಭಾಗಿ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ವಿಧಾನಸಭೆ ಚುನಾವಣೆಯಲ್ಲಿ ಯು.ಟಿ. ಖಾದರ್ ಗೆಲುವಿಗಾಗಿ ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹೊತ್ತಿದ್ದ ಹರಕೆ ತೀರಿಸುವ ಸಲುವಾಗಿ ತಾಲ್ಲೂಕಿನ ಪಣೋಲಿಬೈಲ್‌ನ ಕಲ್ಕುಡ–ಕಲ್ಲುರ್ಟಿ ಕ್ಷೇತ್ರದಲ್ಲಿ ಭಾನುವಾರ ರಾತ್ರಿ ಕೋಲ ಸೇವೆ ಸಮರ್ಪಿಸಲಾಯಿತು.

ಈ ಕೋಲದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಭಾಗವಹಿಸಿ ಕಲ್ಕುಡ– ಕಲ್ಲುರ್ಟಿ ದೈವಗಳ ಆಶೀರ್ವಾದ ಪಡೆದರು.

'ಯು.ಟಿ.ಖಾದರ್ ಅವರು ಗೆದ್ದರೆ ತುಳುನಾಡಿನ ಪ್ರಸಿದ್ಧ ಕಾರಣಿಕ ಕ್ಷೇತ್ರವಾದ ಪಣೋಲಿಬೈಲಿನಲ್ಲಿ ಕಲ್ಕುಡ–ಕಲ್ಲುರ್ಟಿ ಕೋಲ ಸೇವೆ ನೀಡುವುದಾಗಿ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ವೈಯಕ್ತಿಕ ನೆಲೆಯಲ್ಲಿ ಹರಕೆ ಹೊತ್ತಿದ್ದೆ. ಖಾದರ್ ಗೆದ್ದಿದ್ದಾರೆ. ಹಾಗಾಗಿ ಅವರ ಉಪಸ್ಥಿತಿಯಲ್ಲಿ ಹರಕೆ ತೀರಿಸಿದ್ದೇನೆ' ಎಂದು ಮುಡಿಪು ಘಟಕದ ಅಧ್ಯಕ್ಷ ಪ್ರಶಾಂತ್ ಕಾಜವ 'ಪ್ರಜಾವಾಣಿ'ಗೆ ತಿಳಿಸಿದರು.

ಫೆ.26ರಿಂದ ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಪರೀಕ್ಷೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಫೆ.26ರಿಂದ ಮಾರ್ಚ್ 2ರವರೆಗೆ ಪೂರ್ವಭಾವಿ ಪರೀಕ್ಷೆಗಳು ನಡೆಯಲಿವೆ.

ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆಗಳು, ಗಣಿತ ಹಾಗೂ ಸಮಾಜ ವಿಜ್ಞಾನ ವಿಷಯಗಳು ಬೆಳಗಿನ ಅವಧಿಯಲ್ಲಿ ಹಾಗೂ ವಿಜ್ಞಾನ ವಿಷಯದ ಪರೀಕ್ಷೆ ಮಧ್ಯಾಹ್ನ 2ರ ನಂತರ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಸೂಚಿಸಿದೆ.

ಮಾರ್ಚ್ 25ರಿಂದ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗಳು ಆರಂಭವಾಗಲಿದ್ದು, ಮಾಹಿತಿಗೆ http://kseab.karnataka.gov.in ವೀಕ್ಷಿಸಬಹುದು.

ಹಸಿರು ಹೈಡ್ರೋಜನ್ ನೀತಿ ಶೀಘ್ರ: ಜಾರ್ಜ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ಹಸಿರು ಹೈಡ್ರೋಜನ್ ಇಂಧನ ಉತ್ಪಾದನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಶೀಘ್ರವೇ ಹೊಸ ನೀತಿಯನ್ನು ರೂಪಿಸಲಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸೋಮವಾರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಹಸಿರು ಹೈಡ್ರೋಜನ್ ಉತ್ಪಾದನೆಗೆ ಪ್ರಾಯೋಗಿಕವಾಗಿ 300 ಕಿಲೊ ವಾಟ್ ಸಾಮರ್ಥ್ಯದ ಘಟಕವನ್ನು ಮಂಗಳೂರಿನಲ್ಲಿ ಸ್ಥಾಪಿಸಲಾಗುವುದು' ಎಂದರು.

'ಬೆಂಗಳೂರಿನಲ್ಲಿ ಈಚೆಗೆ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಅನೇಕ ಅಂತರರಾಷ್ಟ್ರೀಯ ಕಂಪನಿಗಳು ಈ ಕ್ಷೇತ್ರದಲ್ಲಿ ಹೂಡಿಕೆಗೆ ಆಸಕ್ತಿ ತೋರಿಸಿವೆ. ದಾವೋಸ್‌ನಲ್ಲಿ ಈಚೆಗೆ ನಡೆದ ಜಾಗತಿಕ ಆರ್ಥಿಕ ವೇದಿಕೆಯ ಶೃಂಗದಲ್ಲೂ ಚರ್ಚೆಯಾಗಿದೆ. ಇದರ ಉತ್ಪಾದನೆಗೆ ಸಂಬಂಧಿಸಿ ಗುಜರಾತ್ ಹಾಗೂ ರಾಜಸ್ಥಾನಗಳು ಈಗಾಗಲೇ ನೀತಿ ರೂಪಿಸಿವೆ' ಎಂದರು.

'ಈ ಬೇಸಿಗೆಯಲ್ಲಿ ವಿದ್ಯುತ್ ಕೊರತೆಯಾಗುವುದಿಲ್ಲ. ಕೂಡಗಿ ಉಷ್ಣ ವಿದ್ಯುತ್ ಸ್ಥಾವರದಿಂದ ನವದೆಹಲಿಗೆ ಹಂಚಿಕೆಯಾಗಿದ್ದ 100 ಮೆಗಾ ವಾಟ್ ವಿದ್ಯುತ್ ಶೀಘ್ರವೇ ರಾಜ್ಯದ ಬಳಕೆಗೆ ಲಭ್ಯವಾಗಲಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸುವ ಖಾಸಗಿ ಸಂಸ್ಥೆಗಳೂ ಆದ್ಯತೆ ಮೇರೆಗೆ ನಮಗೇ ವಿದ್ಯುತ್ ಪೂರೈಸುವುದಕ್ಕೆ ಕ್ರಮಕೈಗೊಂಡಿದ್ದೇವೆ. ಯಲಹಂಕದ ಅನಿಲ ವಿದ್ಯುತ್ ಸ್ಥಾವರದಿಂದಲೂ ಎರಡು ತಿಂಗಳಲ್ಲಿ 380 ಮೆಗಾ ವಾಟ್ ವಿದ್ಯುತ್ ಲಭ್ಯವಾಗಲಿದೆ. ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಿಂದ ವಿದ್ಯುತ್ ಖರೀದಿಗೆ ಕ್ರಮ ಕೈಗೊಂಡಿದ್ದೇವೆ. ನಮ್ಮಲ್ಲಿ ಮಿಗತೆ ಇದ್ದಾಗ ಅವರಿಗೆ ವಿದ್ಯುತ್ ನೀಡಲಿದ್ದೇವೆ' ಎಂದರು.

'ರಾಜ್ಯದಲ್ಲಿ 6 ಸಾವಿರ ಲೈನ್‌ಮ್ಯಾನ್‌ಗಳ ಹುದ್ದೆಗಳು ಖಾಲಿ ಇವೆ. 3 ಸಾವಿರ ಲೈನ್‌ಮ್ಯಾನ್‌ಗಳ ನೇಮಕಾತಿಗೆ ಕ್ರಮವಹಿಸಿದ್ದೇವೆ. ಶೀಘ್ರವೇ ರಾಜ್ಯದಾದ್ಯಂತ ಏಕಕಾಲದಲ್ಲಿ ಅರ್ಹತಾ ಪರೀಕ್ಷೆ ನಡೆಯಲಿದೆ' ಎಂದು ವಿವರಿಸಿದರು.

ಸಾಹಿತ್ಯ ಪ್ರಶಸ್ತಿಗೆ ಕಾದಂಬರಿ ಆಹ್ವಾನ

ಮೈಸೂರು: ಇಲ್ಲಿನ ಸಮತಾ ಅಧ್ಯಯನ ಕೇಂದ್ರವು ಸಂಸ್ಥಾಪಕ ಅಧ್ಯಕ್ಷೆ ಹಾಗೂ ಲೇಖಕಿ ವಿಜಯಾ ದಬ್ಬೆ ಅವರ ಹೆಸರಿನಲ್ಲಿ 2022ರಲ್ಲಿ ಸ್ಥಾಪಿಸಿರುವ 'ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ -2024'ಕ್ಕೆ ಮಹಿಳೆಯರು ಪ್ರಕಟಿಸಿದ ಕಾದಂಬರಿಗಳನ್ನು ಆಹ್ವಾನಿಸಿದೆ.

ಪ್ರವೇಶಗಳನ್ನು ಕಳುಹಿಸಲು ಮಾರ್ಚ್ 15 ಕಡೆಯ ದಿನ. ಆಸಕ್ತ ಪ್ರಕಾಶಕರು ಅಥವಾ ಲೇಖಕಿಯರು ವಿವರಗಳಿಗೆ ಮೊ. ಸಂಖ್ಯೆ: 9845422855 ಸಂಪರ್ಕಿಸಿ.

ಆಕಳ ಕರುವಿಗೆ ಕೃತಕ ಕಾಲು

ಹುಬ್ಬಳ್ಳಿ: ಮಹಾವೀರ ಲಿಂಬ್ ಸೆಂಟರ್‌ನಿಂದ ಯಶಸ್ವಿ ಕಾರ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರೈಲು ಅಪಘಾತದಲ್ಲಿ ಕಾಲು ಕಳೆದುಕೊಂಡಿದ್ದ ಆಕಳ ಕರುವಿಗೆ ಇಲ್ಲಿನ ಆಲ್ ಇಂಡಿಯಾ ಜೈನ್ ಯೂಥ್ ಫೆಡರೇಷನ್‌ನ ಮಹಾವೀರ ಲಿಂಬ್ ಸೆಂಟರ್ ವತಿಯಿಂದ ಕೃತಕ ಕಾಲು ಜೋಡಿಸಲಾಗಿದೆ.

'ಆರು ತಿಂಗಳ ಹಿಂದೆ ಧಾರವಾಡದಲ್ಲಿ ಆಕಳು ಮತ್ತು ಕರು ರೈಲು ಹಳಿಯ ಮೇಲೆ ಹೋಗುತ್ತಿದ್ದಾಗ ಅಪಘಾತವಾಗಿತ್ತು. ಆಕಳು ಸತ್ತಿದ್ದರೆ, ಕರುವಿನ ಹಿಂದಿನ ಎಡಗಾಲು ತುಂಡಾಗಿತ್ತು. ಸೋಮಶೇಖರ ಎಂಬವರು ಕರುವನ್ನು ರಕ್ಷಿಸಿ, ಧಾರವಾಡದ ಸಂಜೀವಿನಿ ಆಸ್ಪತ್ರೆಯ ಬಳಿ ಇಟ್ಟು ಚಿಕಿತ್ಸೆ ಕೊಡಿಸಿದ್ದರು. ತಿಂಗಳ ಈಚೆಗೆ ಕರುವನ್ನು ಅಭಿನವನಗರದ ವಿಶ್ವ ಹಿಂದೂ ಪರಿಷತ್‌ನ ಗೋಶಾಲೆಗೆ ಕರತಂದು ಆರೈಕೆ ಮಾಡಲಾಗುತ್ತಿತ್ತು. ವಿಷಯ ತಿಳಿದು ನಾವು, ಅದಕ್ಕೆ ಉಚಿತವಾಗಿ ಕೃತಕ ಕಾಲು ಜೋಡಿಸಿದ್ದೇವೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಹಾವೀರ ಲಿಂಬ್ ಸೆಂಟರ್ ಸಂಸ್ಥಾಪಕ ಮಹೇಂದ್ರ ಸಿಂಘಿ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಕರುವಿಗೆ ಕೃತಕ ಕಾಲು ಜೋಡಿಸಲಾಯಿತು –ಪ್ರಜಾವಾಣಿ ಚಿತ್ರ

'ಎರಡು ವರ್ಷದ ಹಿಂದೆ ನಮ್ಮ ಸಂಸ್ಥೆಯಿಂದ ಕುದುರೆಗೆ ಕೃತಕ ಕಾಲು ಜೋಡಿಸಲಾಗಿತ್ತು. ಈಗ ಕರುವಿಗೆ ಕೃತಕ ಕಾಲು ಜೋಡಿಸಿದ್ದು ಸಾರ್ಥಕ ಭಾವ ಮೂಡಿಸಿದೆ. ದತ್ತು ಪಡೆದು ಪೋಷಿಸಲಾಗುವುದು' ಎಂದು ತಿಳಿಸಿದರು.

ಲಿಂಬ್ ಸೆಂಟರ್ ತಂತ್ರಜ್ಞ ಎಂ.ಎಚ್. ನಾಯ್ಕರ್ ಅವರು, 'ಫೈಬರ್‌ನಿಂದ ತಯಾರಿಸಿರುವ ಕೃತಕ ಕಾಲಿನ ತಳಭಾಗದಲ್ಲಿ ರಬ್ಬರ್ ಅಳವಡಿಸಿದೆ. ಮಣ್ಣಿನಲ್ಲಿ ಕಾಲು ಸಿಲುಕಿದರೂ, ಸುಲಭವಾಗಿ ಮೇಲೆದ್ದು ಬರುತ್ತದೆ. ಕೃತಕ ಕಾಲಿನ ಬಾಳಿಕೆ ಅವಧಿ ಒಂದು ವರ್ಷವಾಗಿದ್ದು, ಕರುವಿನ ಬೆಳವಣಿಗೆ ಆಧರಿಸಿ ಕೃತಕ ಕಾಲು ಬದಲಿಸಲಾಗುವುದು' ಎಂದು ತಿಳಿಸಿದರು.

ಮಹಾವೀರ ಲಿಂಬ್ ಸೆಂಟರ್ ಅಧ್ಯಕ್ಷ ಗೌತಮ್ ಗುಲೇಚ್ಛಾ, ಪ್ರಕಾಶ ಕಟಾರಿಯಾ, ಆನಂದ ಸಂಗಮ, ಗಣೇಶ ಕದಂ, ಸುಭಾಸ ಡಂಕ, ಸುನೀಲ ಬರೋಟ್ ಇದ್ದರು.

ಮಹದೇಶ್ವರ ಬೆಟ್ಟ: ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಬತ್ತಿವೆ ಜಲಮೂಲಗಳು

ಕಾಡಂಚಿನ ಗ್ರಾಮಗಳಲ್ಲಿ ನೀರಿಗೆ ಹಾಹಾಕಾರ

• ಬಿ.ಬಸವರಾಜು

ಹನೂರು (ಚಾಮರಾಜನಗರ): ತಾಲ್ಲೂಕಿನ ಕಾಡಂಚಿನ ಪ್ರದೇಶಗಳಲ್ಲಿ ಬೇಸಿಗೆಗೂ ಮುನ್ನವೇ ಕುಡಿಯುವ ನೀರಿನ ಅಭಾವ ತಲೆದೋರಿದೆ. ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್‌ನಲ್ಲಿ ಸಮಸ್ಯೆ ಕಂಡುಬರುತ್ತಿತ್ತು.

ಮಹದೇಶ್ವರ ಬೆಟ್ಟ ವ್ಯಾಪ್ತಿಯ ತೋಕೆರೆ, ದೊಡ್ಡಾಣೆ, ಕೊಕ್ಬರೆ, ಇಂಡಿಗನತ್ತ, ಪಡಸಲನತ್ತ, ತುಳಸಿಕೆರೆ ಹಾಗೂ ಮೀಣ್ಯಂ ಗ್ರಾಮಪಂಚಾಯಿತಿಯ ನಕ್ಕಂದಿ ಗ್ರಾಮದಲ್ಲಿ ಈಗಾಗಲೇ ಸಮಸ್ಯೆ ಉಂಟಾಗಿದೆ. ಕೆರೆಗಳು, ತೋಡುಬಾವಿಗಳಲ್ಲಿ ನೀರು ಬತ್ತುತ್ತಿದೆ. ಕೈಪಂಪುಗಳಲ್ಲಿ ನೀರು ಕಡಿಮೆಯಾಗುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿದೆ.

ಬೆಟ್ಟ ವ್ಯಾಪ್ತಿಯ 18 ಗ್ರಾಮಗಳಿಗೆ ಕೆರೆಕಟ್ಟೆಗಳು, ತೋಡುಬಾವಿಗಳೇ ನೀರಿನ ಮೂಲ. ಕೈ ಪಂಪುಗಳಲ್ಲಿ ನೀರು ಬರುವುದು ನಿಂತರೆ, ಕೆರೆ, ತೋಡುಬಾವಿ ನೀರನ್ನೇ ಶುದ್ಧೀಕರಿಸಿ ಕುಡಿಯಬೇಕು. ಸದ್ಯ, ನಕ್ಕುಂದಿಯಲ್ಲಿ ಜನ 1.5 ಕಿ.ಮೀ ದೂರದ ಖಾಸಗಿ ಜಮೀನಿಗೆ ಹೋಗಿ ಕುಡಿಯುವ ನೀರು ತರಬೇಕಾಗಿದೆ.

ಮಹದೇಶ್ವರ ಬೆಟ್ಟ ವ್ಯಾಪ್ತಿ ಕೊಕ್ಬರೆ ಗ್ರಾಮದ ಕಟ್ಟೆಯಲ್ಲಿ ನೀರಿನ ಮಟ್ಟ ಕುಸಿದಿದೆ

'ತುಳಸಿಕೆರೆಯಲ್ಲಿ ನೀರು ಬತ್ತತೊಡಗಿದೆ. ಕೈಪಂಪಿನಲ್ಲೂ ನೀರಿಲ್ಲ. ತೋಡುಬಾವಿಗಳಲ್ಲೂ ನೀರು ಕಡಿಮೆಯಾಗುತ್ತಿದೆ. ಗ್ರಾಮ ಪಂಚಾಯಿತಿಯು ಹೂಳೆತ್ತಿದರೆ ಮಾತ್ರ ನೀರು ಹೆಚ್ಚಿ ಅನುಕೂಲವಾಗುತ್ತದೆ' ಎಂದು ಗ್ರಾಮಸ್ಥ ಜಗದೀಶ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಮಹದೇಶ್ವರ ಬೆಟ್ಟ ಪಂಚಾಯಿತಿಯ ಪಿಡಿಒ ಕಿರಣ್, 'ಕೊಕ್ಬರೆಯಲ್ಲಿ ಕೈಪಂಪು ಕೆಟ್ಟಿರುವ ದೂರುಗಳಿದ್ದು, ಶೀಘ್ರದಲ್ಲೇ ದುರಸ್ತಿಪಡಿಸಲಾಗುವುದು. ಉಳಿದ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕುರಿತು ದೂರುಗಳು ಬಂದಿಲ್ಲ' ಎಂದರು.

ತಾಲ್ಲೂಕನ್ನು ಸಾಮಾನ್ಯ ಬರಪೀಡಿತ ಪ್ರದೇಶ ಎಂದು ಘೋಷಿಸಿದ ಕೆಲವೇ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆದಿತ್ತು. 'ಮಾರ್ಚ್ ಬಳಿಕ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದು' ಎಂದು ಅಂದಾಜಿಸಿ, ಜನವರಿಯಿಂದಲೇ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು.

'ನೀರು ಪೂರೈಕೆಗೆ ₹25 ಲಕ್ಷ ಅನುದಾನ'

'ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಮಸ್ಯೆ ಉಂಟಾದರೆ ನಿವಾರಿಸಲು ಕ್ರಿಯಾಯೋಜನೆ ರೂಪಿಸಿದ್ದು, ಅದರಂತೆಯೇ ಕೆಲಸ ನಡೆದಿದೆ. ಈ ಉದ್ದೇಶಕ್ಕಾಗಿ ₹25 ಲಕ್ಷ ಅನುದಾನವು ಬಂದಿದೆ. ಅಧಿಕಾರಿಗಳಿಂದ ಮಾಹಿತಿ ಪಡೆದು, ಸಮಸ್ಯೆ ಬಗೆಹರಿಸಲಾಗುವುದು' ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ತಿಳಿಸಿದರು.

ಪಂಚಾಯತ್ ರಾಜ್ ಇಲಾಖೆ ಸುತ್ತೋಲೆಗೆ ಗ್ರಾ.ಪಂ ಅಧ್ಯಕ್ಷರು, ಸದಸ್ಯರ ವಿರೋಧ

ಗ್ರಂಥಾಲಯ ಕರದಲ್ಲೇ ವೇತನ!

• ಚಂದ್ರಹಾಸ ಹಿರೇಮಳಲಿ



ಬೆಂಗಳೂರು: ಗ್ರಂಥಾಲಯ ಮೇಲ್ವಿಚಾರಕರ ಹೆಚ್ಚುವರಿ ವೇತನವನ್ನು ಗ್ರಾಮ ಪಂಚಾಯಿತಿಗಳೇ ಭರಿಸಬೇಕು ಎಂದು ಪಂಚಾಯತ್ ರಾಜ್ ಇಲಾಖೆ ಸೂಚಿಸಿದೆ.

ಈ ಕುರಿತು ಇಲಾಖೆ ಹೊರಡಿಸಿರುವ ಸುತ್ತೋಲೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ವಿರೋಧ ವ್ಯಕ್ತ ಪಡಿಸಿದ್ದಾರೆ.

₹12 ಸಾವಿರ ಇದ್ದ ಗ್ರಾಮ ಪಂಚಾಯಿತಿಗಳ ಗ್ರಂಥಾಲಯ ಮೇಲ್ವಿಚಾರಕರ ಕನಿಷ್ಠ ವೇತನವನ್ನು 2023 ಸೆ.1ರಿಂದ ಅನ್ವಯವಾಗುವಂತೆ ₹15,196ಕ್ಕೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿತ್ತು. ವೇತನ ಹೆಚ್ಚಳವಾದರೂ ಸರ್ಕಾರ ಇಲ್ಲಿಯವರೆಗೂ ₹12 ಸಾವಿರ ವನ್ನಷ್ಟೇ ಪಾವತಿಸುತ್ತಿದೆ. ಹೆಚ್ಚಳದ ವೇತನ ಬಾಕಿ ₹3,196 ನೀಡುವಂತೆ ಮೇಲ್ವಿಚಾರಕರು ನಿರಂತರವಾಗಿ ಒತ್ತಾಯಿಸಿದ್ದರು. ನಾಲ್ಕು ತಿಂಗಳ ನಂತರ ಸುತ್ತೋಲೆ ಹೊರಡಿಸಿರುವ ಪಂಚಾಯತ್ ರಾಜ್ ಇಲಾಖೆ, ಸರ್ಕಾರ ಹಿಂದೆ ನೀಡುತ್ತಿದ್ದಂತೆ ₹12 ಸಾವಿರ ನೀಡುತ್ತದೆ. ಹೆಚ್ಚುವರಿ ವೇತನದ ಮೊತ್ತವನ್ನು ಆಯಾ ಗ್ರಾಮ ಪಂಚಾಯಿತಿಗಳೇ ನೀಡಬೇಕು. ಪಂಚಾಯಿತಿಗಳಲ್ಲಿ ಸಂಗ್ರಹಿಸುವ ಗ್ರಂಥಾಲಯ ಕರದಲ್ಲೇ ವೆಚ್ಚ ಸರಿದೂಗಿಸಬೇಕು ಎಂದು ಸೂಚಿಸಿದೆ.

ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಭೂಮಿ, ಮನೆ, ನಿವೇಶನ, ಕಟ್ಟಡ ಮತ್ತಿತರ ಸ್ವತ್ತುಗಳಿಂದ ತೆರಿಗೆ ಸಂಗ್ರಹ ಮಾಡುತ್ತವೆ. ನಿಯಮದಂತೆ ವಿವಿಧ ಸ್ವತ್ತುಗಳ ಮೇಲೆ ನಿಗದಿಪಡಿಸುವ ಕರದಲ್ಲಿ ಶೇ 6ರಷ್ಟು ಗ್ರಂಥಾಲಯದ ಉಪ ಕರವಾಗಿ ಸಂಗ್ರಹಿಸ ಲಾಗುತ್ತದೆ. ಇದೇ ಹಣದಲ್ಲಿ ಗ್ರಂಥಾಲಯ ಮೇಲ್ವಿಚಾರಕರ ಹೆಚ್ಚುವರಿ ವೇತನ ಭರಿಸಬೇಕು ಎಂದು ಪಂಚಾಯತ್ ರಾಜ್ ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

'ಜಮೀನು ಮತ್ತು ನಿವೇಶನಗಳ ಮೌಲ್ಯ ಹೆಚ್ಚಳವಾಗಿದ್ದರಿಂದಾಗಿ ನಗರ ಪ್ರದೇಶಗಳಿಗೆ ಅಂಟಿಕೊಂಡ ಪಂಚಾಯಿತಿಗಳಿಗೆ ಉತ್ತಮ ಆದಾಯವಿದೆ. ಗ್ರಾಮೀಣ ಪ್ರದೇಶವನ್ನೇ ಒಳಗೊಂಡಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಪೈಕಿ ಶೇ 90ರಷ್ಟರ ತೆರಿಗೆ ಸಂಗ್ರಹ ಅತ್ಯಂತ ಕಡಿಮೆ ಇದೆ. ಸಂಗ್ರಹಿತ ತೆರಿಗೆ ಮೊತ್ತದಲ್ಲಿನ ಶೇ 6ರಷ್ಟು ಗ್ರಂಥಾಲಯ ಕರವು, ಗ್ರಂಥಾಲಯದ ಕಸ ಗುಡಿಸಲೂ ಸಾಲುತ್ತಿಲ್ಲ. ಇನ್ನು ಹೆಚ್ಚುವರಿ ವೇತನ ಭರಿಸಲು ಹೇಗೆ ಸಾಧ್ಯ?. ಇಂತಹ ಸುತ್ತೋಲೆಗಳಿಂದ ಗ್ರಾಮ ಪಂಚಾಯಿತಿಗಳು ಇನ್ನಷ್ಟು ದುರ್ಬಲವಾಗುತ್ತವೆ' ಎನ್ನುತ್ತಾರೆ ಆಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹಾಲಮ್ಮ.

ಗ್ರಂಥಾಲಯ ಕರವನ್ನು ಜಿಲ್ಲಾ ಪಂಚಾಯಿತಿ ಖಾತೆಗೆ ಜಮೆ ಮಾಡಬೇಕು ಎನ್ನುವುದು ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ವಿರುದ್ಧವಾದದ್ದು

ಕಾಡಶೆಟ್ಟಿಹಳ್ಳಿ ಸತೀಶ್, ಅಧ್ಯಕ್ಷ,
ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ಸಂಗ್ರಹಿಸಿದ ಕರ ಜಿಲ್ಲಾ ಪಂಚಾಯಿತಿಗೆ ಜಮೆ

ಗ್ರಾಮ ಪಂಚಾಯಿತಿಗಳು ಸಂಗ್ರಹಿಸಿದ ಶೇ 6ರಷ್ಟು ಗ್ರಂಥಾಲಯ ಕರವನ್ನು ಜಿಲ್ಲಾ ಪಂಚಾಯಿತಿಯ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಈ ಹಣವನ್ನು ಹೆಚ್ಚುವರಿ ವೇತನಕ್ಕೆ ಬಳಸಿಕೊಳ್ಳುವ ಜತೆಗೆ, ಕಾರ್ಮಿಕ ಇಲಾಖೆ ಕಾಲಕಾಲಕ್ಕೆ ನಿಗದಿ ಮಾಡುವ ತುಟ್ಟಿಭತ್ಯೆಯನ್ನೂ ಭರಿಸಬೇಕು. ಗ್ರಂಥಾಲಯ ಮೂಲ ಸೌಕರ್ಯ ಅಭಿವೃದ್ಧಿ, ಸ್ವಚ್ಛತೆ, ಪುಸ್ತಕ ಖರೀದಿ, ಡಿಜಿಟಲೀಕರಣ, ಪತ್ರಿಕೆಗಳು, ಕ್ರೀಡಾ ಉಪಕರಣಗಳ ಖರೀದಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ನಿ ಶಾಮಕ ಸೇವೆ, ಬೇಸಿಗೆ ಶಿಬಿರಗಳ ಆಯೋಜನೆಗೆ ಬಳಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಕಾನೂನು ಸಲಹೆ: ಆಯೋಗಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ರೂಪಿಸಿರುವ ನಿಯಮಗಳಡಿ ಕೆಪಿಎಸ್‌ಸಿ ಮತ್ತು ಆಯೋಗದ ಕಾರ್ಯದರ್ಶಿಗೆ ಇರುವ ಅಧಿಕಾರಗಳ ಕುರಿತು ಕಾನೂನು ಸಲಹೆ ನೀಡುವಂತೆ ರಾಜ್ಯ ಕಾನೂನು ಆಯೋಗದ ಅಧ್ಯಕ್ಷ ಎಸ್. ಆರ್. ಬನ್ನೂರುಮಠ ಅವರಿಗೆ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಅವರು ಪತ್ರ ಬರೆದಿದ್ದಾರೆ.

'ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಸಂವಿಧಾನದ ವಿಧಿ 315ರಿಂದ 320ರವರೆಗೆ ಆಯೋಗದ ರಚನೆ ಮತ್ತು ಕಾರ್ಯನಿರ್ವಹಣೆ ಕುರಿತು ವಿವರಿಸಲಾಗಿದೆ. ಎಲ್ಲ ನೇಮಕಾತಿ ಮತ್ತು ಇಲಾಖಾ ಪರೀಕ್ಷೆಗಳ ಪ್ರಕ್ರಿಯೆಗಳು ಆಯೋಗದ ಆದೇಶ, ನಿರ್ದೇಶನದ ಅನುಸಾರ ನಡೆಯಬೇಕಿದೆ. ಆದರೆ, ಆಯೋಗಕ್ಕೆ ಕಾರ್ಯದರ್ಶಿಗಳಾಗಿ ನಿಯೋಜನೆಗೊಳ್ಳುವ ಕೆಲವು ಐಎಎಸ್ ಅಧಿಕಾರಿಗಳು ತಾವೇ ಆಯೋಗ ಎಂಬಂತೆ ವರ್ತಿಸಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಪತ್ರದಲ್ಲಿ ಅವರು ದೂರಿದ್ದಾರೆ.

'ಆಯೋಗದ ಹಿಂದಿನ ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಮತ್ತು ಹಾಲಿ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರು ಆಯೋಗದ ಅನುಮೋದನೆ ಪಡೆಯದೆ ಮತ್ತು ಗಮನಕ್ಕೆ ತಾರದೆ ಕಾರ್ಯನಿರ್ವಹಿಸಿದ್ದಾರೆ. ಆಯೋಗದ ಅಧ್ಯಕ್ಷರ ಜೊತೆ ಸಮಾಲೋಚನೆ ನಡೆಸದೆ ವಿಶೇಷ ಸಭೆಗಳನ್ನು ನಿಗದಿ ಪಡಿಸಿದ್ದಾರೆ. ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲ ಅಭ್ಯರ್ಥಿಗಳು ಗಳಿಸಿರುವ ಅಂಕಗಳನ್ನು ಅರ್ಹತಾ ಪಟ್ಟಿಯ ಜೊತೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ' ಎಂದು ಅವರು ಪತ್ರದಲ್ಲಿ ದೂರಿದ್ದಾರೆ.

'ಹಿಂದಿನ ಕಾರ್ಯದರ್ಶಿಯ ವಿರುದ್ಧ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ನ್ಯಾಯಾಂಗ ನಿಂದನಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಎಸ್‌ಎಲ್‌ಪಿ ಸಲ್ಲಿಸಲು ವಕೀಲರ ನೇಮಕಕ್ಕೆ ಮತ್ತು ಶುಲ್ಕ ಪಾವತಿಗೆ ಹಾಲಿ ಕಾರ್ಯದರ್ಶಿ ಆಯೋಗದ ಅನುಮೋದನೆ ಪಡೆದಿಲ್ಲ. ರಾಜ್ಯೇತರ ಸಿವಿಲ್ ಸರ್ವೀಸ್‌ಗೆ ಸಂಬಂಧಿಸಿದ ಪರೀಕ್ಷೆ ನಡೆಸುವ ಸಂಬಂಧ ಆಯೋಗದ ನಿರ್ಣಯವನ್ನು ಪಾಲಿಸದೆ ಮತ್ತು ಆಯೋಗದ ಅನುಮೋದನೆ ಪಡೆಯದೆ ಪರೀಕ್ಷೆ ನಡೆಸಿದ್ದಾರೆ. ಪೂರ್ಣ ಆಯೋಗದ ಅನುಮೋದನೆ ಪಡೆಯದೆ ಒಂಬತ್ತು ಅಂತಿಮ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಿದ್ದಾರೆ. ಶಿಷ್ಟಾಚಾರದ ನಿಯಮಗಳನ್ನು ಮೀರಿ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನಿಯಮ ಮತ್ತು ಆಯೋಗದ ನಿರ್ಣಯಗಳ ವಿರುದ್ಧ ಕಾರ್ಯದರ್ಶಿಗಳು ಕಾರ್ಯನಿರ್ವಹಿಸುತ್ತಿರುವುದು ಕಾನೂನಾತ್ಮಕವಾಗಿದೆಯೇ ಎಂಬ ಬಗ್ಗೆ ಕಾನೂನು ಸಲಹೆ ನೀಡಬೇಕು' ಎಂದೂ ಅವರು ಕೋರಿದ್ದಾರೆ.

ಸೇತುವೆ ಕಾಮಗಾರಿ: ರೈಲು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್ ಫೀಲ್ಡ್ ಪ್ಯಾನಲ್ ಕ್ಯಾಬಿನ್ ಮತ್ತು ಕೃಷ್ಣರಾಜಪುರಂ ನಿಲ್ದಾಣಗಳ ನಡುವಿನ ಸೇತುವೆ ಕಾಮಗಾರಿ ಕೈಗೊಂಡಿರುವು ದರಿಂದ ಬಂಗಾರಪೇಟೆ ಮೆಮು ವಿಶೇಷ ರೈಲು ಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

ಸೇತುವೆ ಸಂಖ್ಯೆ 831ರಲ್ಲಿ ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಬಂಗಾರಪೇಟೆ–ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ರೈಲುಗಳ ಸಂಚಾರ ಫೆ.8 ಮತ್ತು 15ರಂದು ಇರುವುದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್–ಬಂಗಾರಪೇಟೆ ರೈಲುಗಳ ಸಂಚಾರವನ್ನು ಫೆ.9 ಮತ್ತು 16ರಂದು ರದ್ದುಗೊಳಿಸಲಾಗಿದೆ.

ಭಾಗಶಃ ರದ್ದು: ಅಮರಾವತಿ ಕಾಲೊನಿ ಮತ್ತು ತೋಳಹುಣಸೆ ಯಾರ್ಡ್‌ಗಳಲ್ಲಿ ಹಳಿ ನಿರ್ವಹಣಾ ಕಾಮಗಾರಿಯನ್ನು ನೈರುತ್ಯ ರೈಲ್ವೆ ಹಮ್ಮಿಕೊಂಡಿದೆ. ಈ ಮಾರ್ಗದಲ್ಲಿ ಫೆ.11ರಂದು ಹುಬ್ಬಳ್ಳಿ-ಚಿತ್ರದುರ್ಗ ಎಕ್ಸ್‌ಪ್ರೆಸ್ ಮತ್ತು ಚಿತ್ರದುರ್ಗ-ಹುಬ್ಬಳ್ಳಿ ಎಕ್ಸ್‌ಪ್ರೆಸ್ ರೈಲು ಹರಿಹರ ಮತ್ತು ಚಿತ್ರದುರ್ಗ ನಿಲ್ದಾಣಗಳ ನಡುವೆ ಭಾಗಶಃ ರದ್ದಾಗಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮಾರ್ಗ ಬದಲಾವಣೆ: ಫೆ.14 ಮತ್ತು 18ರಂದು ಹೊಸಪೇಟೆ ನಿಲ್ದಾಣದಿಂದ ಹೊರಡುವ ಹೊಸಪೇಟೆ-ಹರಿಹರ ಪ್ಯಾಸೆಂಜರ್ ವಿಶೇಷ ರೈಲು ದಾವಣಗೆರೆ ಮತ್ತು ತೋಳಹುಣಸೆ ನಿಲ್ದಾಣಗಳಿಗೆ ತೆರಳದೇ ತೆಲಗಿ, ಅಮರಾವತಿ ಕಾಲೊನಿ, ಹರಿಹರ ಮಾರ್ಗದ ಮೂಲಕ ಸಂಚರಿಸಲಿದೆ.

ಬೆಳಗಾವಿ -ಮೈಸೂರು ವಿಶ್ವಮಾನವ ಎಕ್ಸ್‌ಪ್ರೆಸ್ ರೈಲನ್ನು ಫೆ.11ರಂದು ಮಾರ್ಗ ಮಧ್ಯದಲ್ಲಿ 55 ನಿಮಿಷಗಳ ಕಾಲ ನಿಯಂತ್ರಿಸಲಾಗುತ್ತಿದೆ. ಹುಬ್ಬಳ್ಳಿಯಿಂದ ಹೊರಡುವ ಹುಬ್ಬಳ್ಳಿ-ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಫೆ.14ರಂದು ಮಾರ್ಗ ಮಧ್ಯೆ 60 ನಿಮಿಷ ನಿಲ್ಲಿಸಲಾಗುವುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿಯಲ್ಲಿ ಗಂಡಸರಿದ್ದರೆ ದನಿ ಎತ್ತಲಿ: ಬಾಲಕೃಷ್ಣ

ಪ್ರಜಾವಾಣಿ ವಾರ್ತೆ

ಎಚ್.ಸಿ. ಬಾಲಕೃಷ್ಣ

ರಾಮನಗರ: 'ಬಿಜೆಪಿಯಲ್ಲಿ ಯಾರಾದರೂ ಗಂಡಸರಿದ್ದರೆ ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಲಿ. ಟಿ.ಎ, ಡಿ.ಎ ಪಡೆಯಲು ದೆಹಲಿಗೆ ಹೋಗಿ, ಬಂದರೆ ಸಾಲದು' ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದ್ದಾರೆ.

ರಾಜ್ಯದ ಪಾಲಿನ ಅನುದಾನಕ್ಕಾಗಿ ಕಾಂಗ್ರೆಸ್ ಪಕ್ಷದ ಹೋರಾಟ ನೋಡಿಯಾದರೂ ರಾಜ್ಯದ ಬಿಜೆಪಿ ಸಂಸದರು, ಸಚಿವರು ಧ್ವನಿ ಎತ್ತಲಿ. ತಮಿಳುನಾಡು ಸಂಸದರು ಹೇಗೆ ದನಿ ಎತ್ತುತ್ತಾರೆ ಎಂದು ನೋಡಿ ಕಲಿಯಲಿ ಎಂದು ಸೋಮವಾರ ಹೇಳಿದರು.

ತಾಲ್ಲೂಕಿನ ನಾಗರಕಲ್ಲುದೊಡ್ಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಬಿಜೆಪಿ ಸಂಸದರು ಷೋಪೀಸ್‌ಗಳು. ವೈಯಕ್ತಿಕ ವರ್ಚಸ್ಸಿಲ್ಲದೇ ಮೋದಿ ಹೆಸರಲ್ಲಿ ಗೆದ್ದು ಬರುತ್ತಾರೆ ಅವರಿಗೆ ಪ್ರಧಾನಿ ಮುಂದೆ ನಿಲ್ಲುವುದಕ್ಕೂ ಆಗುವುದಿಲ್ಲ' ಎಂದರು.

'ಕೇಂದ್ರಕ್ಕೆ ಹೆಚ್ಚು ತೆರಿಗೆ ಪಾವತಿಸುವ ಎರಡನೇ ರಾಜ್ಯವಾದರೂ ಕೊಡಬೇಕಾದ ಅನುದಾನ ಕೊಡುತ್ತಿಲ್ಲ. ಬಿಜೆಪಿಯವರಿಗೆ ದನಿ ಇಲ್ಲ. ಇದರ ಅರ್ಥ ಬಿಜೆಪಿಯಲ್ಲಿ ಗಂಡಸರಿಲ್ಲ ಎಂದಲ್ಲವೇ? ಈ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ' ಎಂದು ಸವಾಲು ಹಾಕಿದರು.

ಚಿಂಚೋಳಿ: ತಾಯಿ ಕೊಂದ ಮಗ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಮದುವೆ ಮಾಡಿಸಲಿಲ್ಲವೆಂದು ಮಗನೊಬ್ಬ, ತಾಲ್ಲೂಕಿನ ಪೋಚಾವರಂ ಗ್ರಾಮದಲ್ಲಿ ಭಾನುವಾರ ರಾತ್ರಿ ಜಗಳ ತೆಗೆದು ಮದ್ಯದ ನಶೆಯಲ್ಲಿ ತಾಯಿಯನ್ನು ಕೊಲೆ ಮಾಡಿದ್ದಾನೆ.

ಪೋಚಾವರಂ ನಿವಾಸಿ ಶೋಭಾ ಅಂಜಪ್ಪ ಬ್ಯಾಗೇರಿ (45) ಕೊಲೆ ಯಾಗಿದ್ದು, ಆಕೆಯ ಮಗ ಅನಿಲ್‌ಕುಮಾರ್ ಅಂಜಪ್ಪನನ್ನು ಕುಂಚಾವರಂ ಠಾಣೆಯ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಪತಿಯಿಂದ ದೂರಾಗಿದ್ದ ಶೋಭಾ ಅವರು ಮಗನ ಜೊತೆ ವಾಸವಿದ್ದರು. ಮಗನಿಗೆ ಕುಡಿತದ ದುಶ್ಚಟವಿತ್ತು. ಖರ್ಚಿಗೆ ಹಣ ಕೊಡುವಂತೆ ಆಗಾಗ ತಾಯಿ ಜೊತೆ ಜಗಳ ತೆಗೆಯುತ್ತಿದ್ದ. ಭಾನುವಾರ ತಡರಾತ್ರಿಯೂ ಮದ್ಯದ ನಶೆಯಲ್ಲಿ ಜಗಳ ಮಾಡಿದ್ದ. ಖರ್ಚಿಗೆ ಹಣ ಕೊಡುತ್ತಿಲ್ಲ, ಮದುವೆಯೂ ಮಾಡಿಸಲಿಲ್ಲ ಎಂದು ಕಟ್ಟಿಗೆಯಿಂದ ಬಲವಾಗಿ ಹೊಡೆದಿದ್ದಾನೆ. ಇದರಿಂದ ತೀವ್ರ ಗಾಯಗೊಂಡ ಶೋಭಾ ಅವರು ಮನೆಯಲ್ಲಿಯೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಹುದ್ದೆ ವಹಿಸಿಕೊಳ್ಳಲು ಐಎಎಸ್ ಅಧಿಕಾರಿಗಳ ಹಿಂದೇಟು

ಒಂದನೇ ಪುಟದಿಂದ

'ನೂರಾರು ಹುದ್ದೆಗಳ ಭರ್ತಿಗೆ ಇತ್ತೀಚೆಗೆ ಆಯೋಗ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪೂರ್ಣಗೊಳಿಸಿದ್ದು, ಪರೀಕ್ಷೋತ್ತರ ಕಾರ್ಯಗಳು ಬಾಕಿ ಇವೆ. ಆದರೆ, ಅತ್ಯಂತ ಜವಾಬ್ದಾರಿಯುತ ಪರೀಕ್ಷಾ ನಿಯಂತ್ರಕ ಹುದ್ದೆ ಖಾಲಿ ಇರುವುದರಿಂದ ಎಲ್ಲ ಪರೀಕ್ಷಾ ಪೂರ್ವ ಮತ್ತು ಪರೀಕ್ಷೋತ್ತರ ಕಾರ್ಯಗಳು ಬಹುತೇಕ ಸ್ಥಗಿತಗೊಂಡಿದೆ' ಎಂದಿವೆ.

'ಆಯೋಗದಲ್ಲಿ ಹೆಚ್ಚಿನ ಕಾರ್ಯದ ಒತ್ತಡವಿದೆ. ಹೀಗಾಗಿ, ಪರೀಕ್ಷಾ ನಿಯಂತ್ರಕ ಹುದ್ದೆಯನ್ನು ಐಎಎಸ್ ಅಧಿಕಾರಿಗಳಿಗೆ ಇತರ ಹುದ್ದೆಗಳ ಜೊತೆಗೆ ಹೆಚ್ಚುವರಿಯಾಗಿ ನೀಡುವ ಬದಲು ಕೂಡಲೇ ಪೂರ್ಣಕಾಲಿಕವಾಗಿ ಒಬ್ಬರನ್ನು ನೇಮಿಸಬೇಕು' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗೆ ಕೆಪಿಎಸ್‌ಸಿ ಕಾರ್ಯದರ್ಶಿ ಲತಾಕುಮಾರಿ ಪತ್ರ ಬರೆದು ಮನವಿ ಮಾಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ

(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಎಂಎಸ್‌ಐಎಲ್ ಹೌಸ್, 7ನೇ ಮಹಡಿ, #36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–52. ದೂ: 080–22370581, 080–23120582, +91 9945152469
ಇ–ಮೇಲ್: ceohmrdc@gmail.com CIN: U45203KA2003SGC032183
ಸಂಖ್ಯೆ: ಹೆಚ್‌ಎಂಆರ್‌ಡಿಸಿ/ಅಕೌಂಟ್ಸ್/14/ಇನ್‌ಶೂರೆನ್ಸ್ ಪಾಲಿಸಿ/2024 ದಿನಾಂಕ: 06.02.2024

ಇ–ಟೆಂಡರ್ ಸೂಚನೆ

ಕಾಮಗಾರಿಯ ಹೆಸರು: ಎಚ್‌ಎಂಆರ್‌ಡಿಸಿ 2023–24 ವರ್ಷಕ್ಕೆ ಈ ಕೆಳಗಿನ ವಿಮಾ ಪಾಲಿಸಿಗಳನ್ನು ನೀಡಲು ಹೆಸರಾಂತ ಮತ್ತು ಅನುಭವಿ ವಿಮಾ ಕಂಪನಿಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.
(1) ಸ್ಟ್ಯಾಂಡರ್ಡ್ ಫೈರ್ ಮತ್ತು ಸ್ಪೆಷಲ್ ಪೆರಿಲ್ಸ್ ಪಾಲಿಸಿ. (2) ಫೈರ್ ಅಂಡ್ ಲಾಸ್ ಆಫ್ ಪ್ರಾಫಿಟ್ (FLOP). (3) ಮೆಷಿನರಿ ಬ್ರೇಕ್–ಡೌನ್ ಪಾಲಿಸಿ (4) ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ.
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ **27.02.2024** ರಂದು ಮಧ್ಯಾಹ್ನ **2.30** ಗಂಟೆಗೆ.
ವಿವರಗಳಿಗಾಗಿ https://kppp.karnataka.gov.in ಮತ್ತು www.hmrdc.com ಗೆ ಭೇಟಿ ನೀಡಿ.
ವಾಸಾಸಂಇ/ಉನಿ-ಸಿ.ಪಿ/3424/ಕೆಎಸ್‌ಎಂಸಿಎ/2023-24 ಸಹಿ/- ಸಿಎಫ್‌ಒ/ ಎಚ್‌ಎಂಆರ್‌ಡಿಸಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸುಸಜ್ಜಿತ ವಿಶ್ಲೇಷನಾ ಉಪಕರಣಗಳ ಕೇಂದ್ರ
ಪಾವಟೆನಗರ, ಧಾರವಾಡ -580003. (ಕರ್ನಾಟಕ ರಾಜ್ಯ)
NAAC Accredited with 'A' Grade
"UNIVERSITY WITH POTENTIAL FOR EXCELLENCE"

ನಂ.ಕೆಯು/ಸೈಫ್/2023–24 ದಿನಾಂಕ:–03–02–2024

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ ಮೂಲಕ ಮಾತ್ರ)

ಹೆಸರಾಂತ ಉತ್ಪಾದನಾ ಕಂಪನಿಗಳು/ವಿತರಕರು/ಸರಬುರಾಜುದಾರರಿಂದ ಡಿಫರನ್ಸಿಯಲ್ ಸ್ಕ್ಯಾನಿಂಗ ಕ್ಯಾಲೊರಿಮೀಟರ (ಡಿ.ಎಸ್.ಸಿ) ಪೂರೈಸಲು 2023–24 ನೇ ಸಾಲಿಗೆ ಟೆಂಡರ್ ಅಹ್ವಾನಿಸಲಾಗಿದೆ ವಿಶ್ವವಿದ್ಯಾಲಯವು ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಟೆಂಡರ್ ಪೋರ್ಟಲಿನಲ್ಲಿ http://www.eproc.karnataka.gov.in ಪಡೆದುಕೊಳ್ಳಬಹುದು.

1	ಕವಿವಿಯಿಂದ ಇ–ಟೆಂಡರ್‌ಅನ್ನು ಅಪ್‌ಲೋಡ್ ಮಾಡಿದ ದಿನಾಂಕ.	05–02–2024
2	ಕಂಪನಿಗಳು/ವಿತರಕರು/ಸರಬುರಾಜುದಾರರಿಂದ ಇ–ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ.	19–02–2024 ಸಂಜೆ 05:00 ಗಂಟೆ
3	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ.	21–02–2024 ಸಂಜೆ 05:05 ಗಂಟೆ
4	ಹಣಕಾಸಿನ ಬಿಡ್ ತೆರೆಯುವ ದಿನಾಂಕ.	22–02–2024 ಮಧ್ಯಾಹ್ನ 12:00 ಗಂಟೆ

ಸಹಿ/– ಕುಲಸಚಿವರು

ಕರ್ನಾಟಕ ಸರ್ಕಾರ (ಜಲ ಸಂಪನ್ಮೂಲ ಇಲಾಖೆ)

ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ ನಂ. 1, ನೀರಾವರಿ ತನಿಖಾ ವಿಭಾಗ
ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮೈಸೂರು–20
ದೂ. : 0821-2411420

ಟೆಂಡರ್ ಪ್ರಕಟಣೆ ಸಂಖ್ಯೆ : 09/2023–24; ದಿ: 01–02–2024

ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಕಚೇರಿಗೆ 2024–25ನೇ ಸಾಲಿಗೆ ಮ್ಯಾನ್ ಪವರ್ ಏಜೆನ್ಸಿ ಮೂಲಕ 13 ವಾಹನ ಚಾಲಕರ ಸೇವೆಯನ್ನು ಪಡೆಯಲು (12 ತಿಂಗಳ ಅವಧಿ) ನೋಂದಾಯಿಸಿದ ಅರ್ಹಏಜೆನ್ಸಿದಾರರು / ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಶೇಕಡವಾರು (ಸೇವಾಶುಲ್ಕ ಬಾಬ್ತು) ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ. 3530741.64 ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ : 02–02–2024 ರಂದು ಸಂಜೆ 4.00 ಗಂಟೆಯ ನಂತರ ಪಡೆಯಬಹುದಾಗಿದೆ. ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 16–02–2024 ರ ಸಂಜೆ 4.00 ಗಂಟೆಯವರೆಗೆ ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ : 17–02–2024 ರಂದು ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ : http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ನಂ. 1, ನೀರಾವರಿ ತನಿಖಾ ವಿಭಾಗ, ಮೈಸೂರು

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರು, ಬೆಳಗಾವಿ ವಿಭಾಗ, ಬೆಳಗಾವಿ

ಸಂಖ್ಯೆ: ಲೋ.ಇ/ಬೆವಿ/ತಾಂಶಾ/ಗುತ್ತಿಗೆ/2023–24/6324 ದಿನಾಂಕ: 02–02–2024

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **ಕೆಡಬ್ಲ್ಯೂ–1, 2, 3 ಮತ್ತು 4 ರಲ್ಲಿ ಲೆಕ್ಕ ಶೀರ್ಷಿಕೆ: 4059 – ಇಲಾಖಾ ಕಟ್ಟಡಗಳು, 5054 – ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 5054 – ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆಗಳು, 3054 – ರಾಜ್ಯ ಹೆದ್ದಾರಿ ನಿರ್ವಹಣೆ, 3054 – ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ, 5054 – ಜಿಲ್ಲಾ ಮುಖ್ಯ ಸೇತುವೆಗಳು, 5054 – ರಾಜ್ಯ ಹೆದ್ದಾರಿ ರಸ್ತೆಗಳ ನವೀಕರಣ, 2059 – ಇಲಾಖಾ ಕಟ್ಟಡಗಳ ನಿರ್ವಹಣೆ ಅಡಿಯಲ್ಲಿ ಒಟ್ಟು 31 ಕಾಮಗಾರಿಗಳಿಗೆ** ಗುತ್ತಿಗೆಯನ್ನು ಕರೆಯಲಾಗಿದ್ದು, ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ **ರೂ. 623.47 ಲಕ್ಷಗಳು ಹಾಗೂ ರೂ. 5.04 ಲಕ್ಷಗಳು** ಇದ್ದು, ಮುಂಗಡ ಮೊತ್ತವು ಅನುಕ್ರಮವಾಗಿ **ರೂ. 9,35,300/– ಹಾಗೂ ರೂ. 12,600/–** ಇರುತ್ತದೆ. **ಭಾಗ–1:** ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: **12–02–2024 ರಂದು ಸಂಜೆ 4.30 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13–02–2024 ರಂದು ಸಂಜೆ 4.45 ಘಂಟೆ ನಂತರ, ಭಾಗ–2:** ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: **15–02–2024 ರಂದು ಸಂಜೆ 4.30 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **16–02–2024 ರಂದು ಸಂಜೆ 4.45 ಘಂಟೆ ನಂತರ** ಮತ್ತು **ಭಾಗ–3:** ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: **20–02–2024 ರಂದು ಸಂಜೆ 4.30 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21–02–2024 ರಂದು ಸಂಜೆ 4.45 ಘಂಟೆ ನಂತರ.**

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ದಿನಾಂಕ: **02–02–2024** ರ ನಂತರ ಪಡೆಯಬಹುದು. (ಒಂದು ವೇಳೆ ಬಿಡ್ ಸ್ವೀಕೃತವಾಗದಿದ್ದಲ್ಲಿ 3 ದಿನಗಳ ಸ್ವಯಂ ಚಾಲಿತ ಸಕ್ರೀಯಗೊಳಿಸಲಾಗಿದೆ).

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ,
ಬೆಳಗಾವಿ.
ವಾಸಾಸಂಇ/ಬೆಳಗಾವಿ/1060/ಅಡ್ವರ್ಟೋರ್/2023–24

ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆ

(ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ)
ಸಂ:ಕಾ.ಇಂ/ಭ.ಕಾ/ವಿ–2/ರಾಬೆ/4705/ಟೆಂ.ಪ್ರ/2023–24/592
ದಿನಾಂಕ:03.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ IFT-04
(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ–2, ಭದ್ರಾಕಾಡಾ, ರಾಣೇಬೆನ್ನೂರು ಇವರಿಂದ ಕರ್ನಾಟಕ ಜಲಸಂಪನ್ಮೂಲ ಇಲಾಖೆ/ ಲೋಕೋಪಯೋಗಿ ಇಲಾಖೆ/ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತರಾದ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 4705–132ಲೆಕ್ಕ ಶೀರ್ಷಿಕೆಯಡಿಯಲ್ಲಿ 07 (ಅಚ್ಚುಕಟ್ಟು ರಸ್ತೆ/ ಬಸಿಗಾಲುವೆ) ಕಾಮಗಾರಿಗಳ ಒಟ್ಟು ಮೊತ್ತ ರೂ.89.37 ಲಕ್ಷಗಳ ಟೆಂಡರ್‌ನ್ನು KW-1 ದಾಖಲಾತಿಯನ್ವಯ ಏಕ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ದಿನಾಂಕ:03.02.2024 ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಭಾಗವಹಿಸಬಹುದಾಗಿದೆ. ವಿಚಾರಣೆಗೆ ಕೊನೆಯ ದಿನಾಂಕ:09.02.2024 ಅಪರಾಹ್ನ 4:30ರ ವರೆಗೆ, ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ:12.02.2024 ಅಪರಾಹ್ನ 4:30ರ ವರೆಗೆ. ಟೆಂಡರ್ ತೆರೆಯುವ ದಿನಾಂಕ:13.02.2024 ಅಪರಾಹ್ನ 5.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ (http://kppp.Karnataka.gov.in) ಮತ್ತು ದೂರವಾಣಿ ಸಂಖ್ಯೆ:08373–297346 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಇಂಜಿನೀಯರಿಂಗ್ ವಿಭಾಗ–2,
ಭದ್ರಾಕಾಡಾ ರಾಣೇಬೆನ್ನೂರು–581115
1192

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬ್ಯಾಡಗಿ

ಕಚೇರಿ: (08375) 228443 । ಫ್ಯಾಕ್ಸ್: (08375) 226617
email : apmcbyadgi@gmail.com
ಸಂ: ಕೃಮಾಇ/ಕೃಉಮಾಸ/ಬ್ಯಾ/ಅಭಿವಿ/2023–24/635 ದಿನಾಂಕ:05/02/2024

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

2023–24 ನೇ ಸಾಲಿನ ಆರ್.ಐ.ಡಿ.ಎಫ್–29 ರ ಯೋಜನೆಯಡಿ ಮಂಜೂರಾಗಿರುವ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಚಿಕ್ಕಬಾಸೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಿಣ ಕಾಮಗಾರಿಗೆ **(APMC/2023-24/BD/WORK_INDENT273)** ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು **KW-4** ರನ್ವಯ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.985.45 ಲಕ್ಷ (18% ಜಿ.ಎಸ್.ಟಿ ಸೇರಿ) ಮತ್ತು ಇ.ಎಂ.ಡಿ. ಮೊತ್ತ ರೂ.14,79,000.00 ಗಳಿದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಬಿಡ್ ಪೂರ್ವಭಾವಿ ಸಭೆ & ಟೆಂಡರ್ ತಕರಾರು ಸಮಜಾಯಿಷಿ ನೀಡುವ ದಿನಾಂಕ:13–02–2024 ರ ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:20–02–2024 ರ ಸಂಜೆ 05.00 ಗಂಟೆಯ ವರೆಗೆ ಹಾಗೂ ದಿನಾಂಕ:22–02–2024 ರ ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್ಡನ್ನು ತೆರೆದು ಸಾಧ್ಯವಾದಲ್ಲಿ ದಿನಾಂಕ:04–03–2024 ರ ಸಂಜೆ 05.00 ಗಂಟೆಗೆ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– (ಹೆಚ್.ವೈ ಸತೀಶ) ಕಾರ್ಯದರ್ಶಿ ಕೃ.ಉ.ಮಾ.ಸ.ಬ್ಯಾಡಗಿ
ಸಹಿ/– (ಪಿರೋಜಷಾ ಸೋಮನಕಟ್ಟಿ) ಅಧ್ಯಕ್ಷರು/ಆಡಳಿತಾಧಿಕಾರಿಗಳು ಕೃ.ಉ.ಮಾ.ಸ.ಬ್ಯಾಡಗಿ

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ

ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು - 560 042. ದೂರವಾಣಿ : 080-25365053.
ಇ-ಮೇಲ್ : kvmegbangalore@gmail.com, ವೆಬ್‌ಸೈಟ್ : megcentre.kvs.ac.in

ವಾಕ್ – ಇನ್ – ಇಂಟರ್ವ್ಯೂ

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ MEG & CENTER ಇಲ್ಲಿಗೆ ಪೂರ್ಣ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿಯನ್ನು 2024-25 (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ದಿನಾಂಕ : 24-02-2024, ಶನಿವಾರದಂದು ನಡೆಸಲಾಗುವುದು. ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ MEG & CENTER ದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣಪತ್ರಗಳ ಮೂಲ ಮತ್ತು ಜೆರಾಕ್ಸ್ ಕಾಪಿಗಳು ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಹಾಜರಾಗಬೇಕು. ಎಲ್ಲಾ ಹುದ್ದೆಗಳ ನೋಂದಣಿಯನ್ನು ಅದೇ ದಿನ ಬೆಳಗ್ಗೆ 8.00 ರಿಂದ 10.00 ರವರೆಗೆ ಮಾಡಲಾಗುತ್ತದೆ.

ದಿನಾಂಕ : ಶನಿವಾರ, 24-02-2024

ಪಿ.ಜಿ.ಟಿ. : ಇಂಗ್ಲೀಷ್, ಹಿಂದಿ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಅಕೌಂಟೆನ್ಸಿ, ಅರ್ಥಶಾಸ್ತ್ರ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ.
ಟಿ.ಜಿ.ಟಿ. : ಇಂಗ್ಲೀಷ್, ಹಿಂದಿ, ಸಂಸ್ಕೃತ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ.
ಪಿ.ಆರ್.ಟಿ. : ಪ್ರಾಥಮಿಕ ಶಿಕ್ಷಕರು, ಬಾಲವಾಟಿಕ ಶಿಕ್ಷಕರು.

ಇತರೆ : ಕನ್ನಡ ಶಿಕ್ಷಕರು, ಯೋಗ ಶಿಕ್ಷಕರು, ನೃತ್ಯ ತರಬೇತುದಾರರು, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ವೈದ್ಯರು, ನರ್ಸ್, ಸಂಗೀತ ಪ್ರಶಿಕ್ಷಕರು, ವಿಶೇಷ ಶಿಕ್ಷಕರು ಮತ್ತು ಸಲಹೆಗಾರರು.

ಗಮನಿಸಿ : ವಿದ್ಯಾರ್ಹತೆ ಮತ್ತು ಇತರೆ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್ : www.megcentre.kvs.ac.in. ಗೆ ಭೇಟಿ ನೀಡಿ
ಸಹಿ/- ಪ್ರಾಂಶುಪಾಲರು
ಪಿ.ಎಂ.ಶ್ರೀ ಕೆ.ವಿ. ಎಂ.ಇ.ಜಿ. ಮತ್ತು ಕೇಂದ್ರ, ಬೆಂಗಳೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ. ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ–591116 ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ
ಸಂಖ್ಯೆ:ಕಾ–ಯಾಂ–ವಿ/ಪಿಬಿ–1/ಇ–ಟೆಂಡರ/2023–24/757 ದಿನಾಂಕ:31/01/2024

ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ)
(Tender No- KNNL/2023-24/SE0040)
(ದ್ವಿ ಲಕೋಟೆ ಪದ್ದತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾದಡಿಯಲ್ಲಿ ಈ ಕಳಕಂಡ ಕಾಮಗಾರಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: Consultancy services for Preliminary Survey, investigation,preparation of Preliminary design, drawings, estimates, Detailed Project Report,Package estimate & DTP for Rejuvenation of existing Lift irrigation Schemes of Kenganur,Hosur-Vakkund, Budihal, Jalikoppa, Mallur-matolli, Jakanur, Hebballi, Cholachagudda Yenagi-Hittanagi, Sunnal, Badli-Katral In Saudatti Taluk, Belagvi District

ಟೆಂಡರಿಗಿಟ್ಟ ಮೊತ್ತ : 67.61 ಲಕ್ಷಗಳು

1.ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:16–02–2024 ರಂದು ಸಂಜೆ 4.00 ಘಂಟೆವರೆಗೆ. 2.ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19–02–2024 ರಂದು ಪೂರ್ವಾಹ್ನ 11.00 ಘಂಟೆಗೆ, 3.ಆರ್ಥಿಕ ಬಿಡ್ ತೆರೆಯುವ ದಿನಾಂಕ:21–02–2024 ರಂದು ಪೂರ್ವಾಹ್ನ 11.00 ಘಂಟೆಗೆ.

ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ https//kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330–224511 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ.ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.
DIPR/BGM/RO-NO-1058/KSMCA/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ,
ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ ಕಟ್ಟಡ, ಸಿಎ ನಂ.3, 1ನೇ ಮುಖ್ಯರಸ್ತೆ, ಹೊರ ವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560060.
ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/20/2023–24 ದಿನಾಂಕ: 05–02–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
	ದ್ವಿ–ಲಕೋಟೆ ಪದ್ಧತಿ – (1ನೇ ಕರೆ)		
1	ವಾರ್ಡ್ ಸಂಖ್ಯೆ. 28, ಹೇರೋಹಳ್ಳಿಯ ಡಯಾಲಿಸಿಸ್ ಕೇಂದ್ರಕ್ಕೆ ಯಂತ್ರೋಪಕರಣಗಳು ಅಳವಡಿಸುವುದು ಮತ್ತು ಹೆಚ್ಚುವರಿ ಸಿವಿಲ್ ಕಾಮಗಾರಿಗಳನ್ನು ಒದಗಿಸುವುದು.	159.63	2.40 (ರೂ. 1.00 ಲಕ್ಷ ಆನ್‌ಲೈನ್ ಹಾಗೂ ಉಳಿದ ಬಾಕಿ ಬಿಜಿ / ಎಫ್‌ಡಿಆರ್ ಮೂಲಕ ಪಾವತಿ)
2	ವಾರ್ಡ್ ಸಂಖ್ಯೆ. 33, ಹೆಮ್ಮಿಗೆಪುರದ 110 ಗ್ರಾಮಗಳ ವ್ಯಾಪ್ತಿಯಲ್ಲಿರುವ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿ.	238.90	3.60 (ರೂ. 1.00 ಲಕ್ಷ ಆನ್‌ಲೈನ್ ಹಾಗೂ ಉಳಿದ ಬಾಕಿ ಬಿಜಿ / ಎಫ್‌ಡಿಆರ್ ಮೂಲಕ ಪಾವತಿ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **09–02–2024 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **13–02–2024 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ವಲಯ, ಬೆಂಗಳೂರು – 560098 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **17–02–2024 ರಂದು ಸಂಜೆ 4.00 ಗಂಟೆಯವರೆಗೆ.** 4) ಬಿಡ್‌ಗಳನ್ನು ತೆರೆಯುವ ದಿನಾಂಕ: **19–02–2024 ರಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131–33, ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: http://ksiidc.karnataka.gov.in

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಅಗತ್ಯವಿರುವ ಮಾನವಸಂಪನ್ಮೂಲದ (26 ಸಂಖ್ಯೆ) ಜೊತೆಗೆ ಯಂತ್ರೋಪಕರಣಗಳು ಮತ್ತು ಉಪಭೋಗ್ಯ ಸಾಮಾಗ್ರಿಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಸಲುವಾಗಿ ಏಜೆನ್ಸಿಯ ಆಯ್ಕೆಗಾಗಿ ಇ–ಟೆಂಡರ್ ಪ್ರಕಟಣೆ.

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ, ಶಿವಮೊಗ್ಗ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ನಿರ್ವಹಿಸುತ್ತಿದೆ. ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಅವಶ್ಯವಿರುವ ಮಾನವ ಸಂಪನ್ಮೂಲದ (26 ಸಂಖ್ಯೆ) ಜೊತೆಗೆ ಯಂತ್ರೋಪಕರಣಗಳು ಮತ್ತು ಉಪಭೋಗ್ಯ ಸಾಮಾಗ್ರಿಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಸಲುವಾಗಿ ಏಜೆನ್ಸಿಯ ಆಯ್ಕೆಗಾಗಿ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಅಧಿಸೂಚನೆ ಆಹ್ವಾನಿಸಿದೆ.

ಇ.ಎಂ.ಡಿ: **ರೂ.1,50,000/–** (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ).

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **06.02.2024**ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ **13.02.2024 ರಂದು 11.30 ಗಂಟೆಗೆ.** ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ **26.02.2024 ರಂದು 17.30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ http://ksiidc.karnataka.gov.in ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಪ್ರ), ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ,
ಮಹದೇವಪುರ ವಿಭಾಗ, ಬೆಂಗಳೂರು–560 048
ಸಂಖ್ಯೆ: ಕಾಪಾಅ/ಮಪು/ಟೆಂಡರ್/13/2023–24 ದಿನಾಂಕ: 05.02.2024

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ ರಾಜ್ಯ ಅಥವಾ ಕೇಂದ್ರ ಸರ್ಕಾರದ ಇನ್ಯಾವುದೇ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ **ಐಟಂ ದರದ** ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
	ದ್ವಿಲಕೋಟೆ ಪದ್ಧತಿ		
1.	ವಾರ್ಡ್ ಸಂಖ್ಯೆ–115 (ಹೊಸ ವಾರ್ಡ್ ಸಂಖ್ಯೆ–107 ಬೆಳ್ಳಂದೂರು) ಬೆಳ್ಳಂದೂರಿನ ದೇವರಬೀಸನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಕೊಳವೆಬಾವಿ ಮತ್ತು ಸಂಬಂಧಿತ ಕಾಮಗಾರಿಗಳನ್ನು ಒದಗಿಸುವುದು. (5ನೇ ಕರೆ)	55.00	1,10,000/-
	ಏಕಲಕೋಟೆ ಪದ್ಧತಿ		
2.	ವಾರ್ಡ್ ಸಂಖ್ಯೆ–116 (ಹೊಸ ವಾರ್ಡ್ ಸಂಖ್ಯೆ–107 ಬೆಳ್ಳಂದೂರು)ದೊಡ್ಡಕನ್ನಲ್ಲಿಯ ಕಸವನಹಳ್ಳಿ ಭೋವಿ ಕಾಲೋನಿಯಲ್ಲಿ ಕುಡಿಯುವ ನೀರಿಗಾಗಿ ಕೊಳವೆಬಾವಿ ಮತ್ತು ಸಂಬಂಧಿತ ಕಾಮಗಾರಿಗಳನ್ನು ಒದಗಿಸುವುದು. (5ನೇ ಕರೆ)	22.00	50,000/-
3.	ವಾರ್ಡ್ ಸಂಖ್ಯೆ–113 (ಹೊಸ ವಾರ್ಡ್ ಸಂಖ್ಯೆ–105 ಮುನ್ನೇಕೋಳಾಲ) ಮುನ್ನೇ–ಕೋಳಾಲದ ಕಾಡುಬೀಸನಹಳ್ಳಿಯಲ್ಲಿ ಕುಡಿಯುವ ನೀರಿಗಾಗಿ ಕೊಳವೆಬಾವಿ ಮತ್ತು ಸಂಬಂಧಿತ ಕಾಮಗಾರಿಗಳನ್ನು ಒದಗಿಸುವುದು. (5ನೇ ಕರೆ)	33.00	66,000/-
4.	ವಾರ್ಡ್ ಸಂಖ್ಯೆ–116 (ಹೊಸ ವಾರ್ಡ್ ಸಂಖ್ಯೆ –107 ಬೆಳ್ಳಂದೂರು) ದೊಡ್ಡಕನ್ನಲ್ಲಿಯ ಹರಳೂರು ಗ್ರಾಮಗಳಿಗೆ ನೀರಿನ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವುದು. (5ನೇ ಕರೆ)	5.00	12,500/-

ಟೆಂಡರ್ ವೇಳಾಪಟ್ಟಿ: (1) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.02.2024**ರ ಮಧ್ಯಾಹ್ನ **3:00** ಗಂಟೆಯವರೆಗೆ (2) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ **12.02.2024**ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **14.02.2024**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ/ಆರ್ಥಿಕ ಬಿಡ್‌ಗಳನ್ನು ದಿನಾಂಕ **15.02.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹದೇವಪುರ ವಿಭಾಗ

ಕ್ಷೇಮ ಕುಶಲ

ಮಧುಮೇಹಿಗಳಲ್ಲಿ ಹೃದ್ರೋಗ

ಕೊಲೆಸ್ಟ್ರಾಲ್ ಮಟ್ಟ ಮಧುಮೇಹಿಗಳಲ್ಲಿ ಮೂರೂವರೆ ಪಟ್ಟು ಅಧಿಕವಾಗಿರುತ್ತದೆ.

ಡಾ. ಕಿರಣ್ ವಿ. ಎಸ್.

ನಮ್ಮ ದೇಶದ ಆರೋಗ್ಯ ಸಮಸ್ಯೆಗಳಲ್ಲಿ ಮಧುಮೇಹ ಮತ್ತು ಹೃದ್ರೋಗ ಪ್ರಮುಖವಾದುವು. ಇವೆರಡಕ್ಕೂ ಪರಸ್ಪರ ಸಂಬಂಧವೂ ಇದೆ. ಮಧುಮೇಹಿಗಳಲ್ಲಿ ಹೃದ್ರೋಗದ ಸಾಧ್ಯತೆ ಸಾಮಾನ್ಯ ಜನರಿಗಿಂತಲೂ ಸಾಕಷ್ಟು ಹೆಚ್ಚು. ಹೃದ್ರೋಗ ಎಂದರೆ ಅಧಿಕ ರಕ್ತದೊತ್ತಡ, ಹೃದಯಾಘಾತ, ಹೃದಯದ ಕಾರ್ಯವೈಫಲ್ಯ ಮೊದಲಾದುವು. ಮಧುಮೇಹಿಗಳಲ್ಲಿ ಈ ಎಲ್ಲ ಸಮಸ್ಯೆಗಳೂ ಸಾಮಾನ್ಯ ಜನರಿಗಿಂತ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತವೆ. ಮಧುಮೇಹಿಗಳಲ್ಲಿ ರಕ್ತದೊತ್ತಡದ ಸಾಧ್ಯತೆ ನಾಲ್ಕು ಪಟ್ಟು ಹೆಚ್ಚು; ಹೃದಯಾಘಾತದ ಪ್ರಮಾಣ ಶೇ. 58 ಅಧಿಕ; ಹೃದಯದ ಕಾರ್ಯವೈಫಲ್ಯ ಶೇ 12 ಹೆಚ್ಚು; ಅನಾರೋಗ್ಯಕರ ಕೊಲೆಸ್ಟ್ರಾಲ್ ಮಟ್ಟ ಹತ್ತು ಪಟ್ಟು ಹೆಚ್ಚಾಗಿರುತ್ತದೆ ಎಂದು ಕಂಡುಬಂದಿದೆ. ಅಂತೆಯೇ, ಒಟ್ಟಾರೆ ಕೊಲೆಸ್ಟ್ರಾಲ್ ಮಟ್ಟ ಮಧುಮೇಹಿಗಳಲ್ಲಿ ಮೂರೂವರೆ ಪಟ್ಟು ಅಧಿಕವಾಗಿರುತ್ತದೆ.

ಮಧುಮೇಹಿಗಳು ತಮ್ಮ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಕಟ್ಟುನಿಟ್ಟಾಗಿ ನಿರ್ವಹಿಸಬೇಕು. ಸಕ್ಕರೆಯ ಮಟ್ಟ ಏರಿದಂತೆಲ್ಲ ರಕ್ತನಾಳಗಳಿಗೆ ಹಾನಿಯಾಗುತ್ತದೆ; ನಾಜೂಕಾದ ನರತಂತುಗಳು ಹಾಳಾಗುತ್ತವೆ; ರಕ್ತನಾಳಗಳಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಸಂಚಯವಾಗಿ, ನಾಳದ ಆಂತರಿಕ ವ್ಯಾಸ ಕಿರಿದಾಗುತ್ತದೆ. ಇದರಿಂದ ರಕ್ತಸಂಚಾರಕ್ಕೆ ಅಡ್ಡಿಯಾಗುತ್ತದೆ. ದೇಹದಲ್ಲಿ ರಕ್ತವನ್ನು ಎಲ್ಲ ಅಂಗಗಳಿಗೂ ತಲುಪಿಸುವ ಹೊಣೆ ಹೃದಯದ್ದು. ಘಾಸಿಯಾದ ರಕ್ತನಾಳಗಳಲ್ಲಿ ರಕ್ತವು ಸರಾಗವಾಗಿ ಹರಿಯುವುದಿಲ್ಲ; ಅದನ್ನು ಅಧಿಕ ಒತ್ತಡದ ಮೂಲಕ ಮುಂದಕ್ಕೆ ಸಾಗಿಸಬೇಕಾಗುತ್ತದೆ. ಇದರಿಂದ ಹೃದಯದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಹೀಗೆಯೇ ಮುಂದುವರೆದು ರಕ್ತನಾಳಗಳು ಶಿಥಿಲವಾದರೆ ಆಯಾ ಅಂಗಗಳಿಗೆ ರಕ್ತಸಂಚಾರ ಕಡಿಮೆಯಾಗುತ್ತದೆ. ಹೃದಯದ ಕೆಲಸಕ್ಕೆ ಬೇಕಾದ ರಕ್ತವನ್ನು ಸರಬರಾಜು ಮಾಡುವ ಕರೋನರಿ ರಕ್ತನಾಳಗಳು ಕೂಡ ಮಧುಮೇಹದ ಈ ಪರಿಣಾಮವನ್ನು ಅನುಭವಿಸುತ್ತವೆ. ಹೀಗೆ, ಒಂದೆಡೆ ಇತರ ರಕ್ತನಾಳಗಳ ಸಮಸ್ಯೆಯಿಂದ ಹೃದಯದ ಮೇಲೆ ಅಧಿಕ ಒತ್ತಡ; ಮತ್ತೊಂದೆಡೆ ಸ್ವಯಂ ಹೃದಯದ ರಕ್ತನಾಳಗಳ ಶೈಥಿಲ್ಯ – ಇವೆರಡೂ ಸೇರಿ ಹೃದಯದ ಒಟ್ಟಾರೆ ಕಾರ್ಯಕ್ಷಮತೆ ಕುಂಠಿತವಾಗುತ್ತದೆ.

ಮಧುಮೇಹಿಗಳಲ್ಲಿ ಹೃದ್ರೋಗದ ಸಮಸ್ಯೆಯನ್ನು ನಿಯಂತ್ರಣದಲ್ಲಿ ಇಡಲು ತಜ್ಞರು ಕೆಲವು ಸೂತ್ರಗಳನ್ನು ಶಿಫಾರಸ್ಸು ಮಾಡಿದ್ದಾರೆ. ಇವುಗಳ ಪಾಲನೆಯಿಂದ ಮಧುಮೇಹಿಗಳು ತಮ್ಮ ಹೃದಯವನ್ನು ಸುರಕ್ಷಿತವಾಗಿರಸಬಹುದು.



- ಹೃದಯದ ಸಮಸ್ಯೆ ಇರುವ ಹಲವಾರು ರೋಗಿಗಳಲ್ಲಿ ಮಧುಮೇಹ ಇರುವುದು ಪತ್ತೆಯಾಗದೇ ಇರಬಹುದು. ಅಂದರೆ, ಹೃದ್ರೋಗವೇ ಮಧುಮೇಹದ ಮೊದಲ ಚಿಹ್ನೆಯಾಗಿ ಕಾಣಬಹುದು. ಹೀಗಾಗಿ, ಹೃದ್ರೋಗ ಇರುವ ಪ್ರತಿಯೊಬ್ಬರೂ ಮಧುಮೇಹ ಪತ್ತೆಮಾಡುವ ಪರೀಕ್ಷೆಗಳನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು.
- ಮಧುಮೇಹದ ಪ್ರತಿಯೊಬ್ಬ ರೋಗಿಯೂ ಕಾಲಕಾಲಕ್ಕೆ ಹೃದಯದ ಕಾರ್ಯಕ್ಷಮತೆಯ ತಪಾಸಣೆ ಮಾಡಿಸುವುದು ಅಗತ್ಯ. ಹೃದ್ರೋಗದ ಚಿಹ್ನೆಗಳಿಗಾಗಿ ಕಾಯುವುದು ಸೂಕ್ತವಲ್ಲ. ಯಾವುದೇ ಕಾಯಿಲೆಯನ್ನಾದರೂ ಆರಂಭಿಕ ಹಂತದಲ್ಲಿ ಪತ್ತೆ ಮಾಡಿದರೆ ಚಿಕಿತ್ಸೆ ಸುಲಭ, ಸೋವಿ, ಮತ್ತು ಸರಳವಾಗುತ್ತದೆ.
- ಮಧುಮೇಹ ನಿಯಂತ್ರಣದಲ್ಲಿ ಇಲ್ಲದ ಪ್ರತಿಯೊಬ್ಬ ರೋಗಿಯನ್ನೂ ಹೃದ್ರೋಗಿಯ ರೀತಿಯಲ್ಲೇ ಪರಿಗಣಿಸಬೇಕು. ಕರೋನರಿ ರಕ್ತನಾಳಗಳ ತಪಾಸಣೆ ಮತ್ತು ಹೃದಯದ ಕಾರ್ಯಕ್ಷಮತೆಯ ಪರೀಕ್ಷೆ ಅತ್ಯಗತ್ಯ.
- ಮಧುಮೇಹದಲ್ಲಿ ಘಾಸಿಗೊಳಗಾಗುವ ಮತ್ತೊಂದು ಪ್ರಮುಖ ಅಂಗ ಮೂತ್ರಪಿಂಡಗಳು. ಶರೀರದ ರಕ್ತದೊತ್ತಡವನ್ನು ನಿರ್ವಹಿಸುವಲ್ಲಿ ಮೂತ್ರಪಿಂಡಗಳ ಪಾತ್ರ ಹಿರಿದು. ಮಧುಮೇಹದ ಕಾರಣದಿಂದ ಮೂತ್ರಪಿಂಡಗಳು ಹಾಳಾದರೆ, ಅದರ ಪರೋಕ್ಷ ಪರಿಣಾಮವನ್ನು ಹೃದಯವೇ ಅನುಭವಿಸಬೇಕು.
- ಮಧುಮೇಹದ ಔಷಧಗಳ ಜೊತೆಗೆ ಹೃದಯದ ಸಮಸ್ಯೆಗಳನ್ನು ನಿರ್ವಹಿಸುವ ಔಷಧಗಳನ್ನೂ ಇಂತಹ ರೋಗಿಗಳು ಸೇವಿಸಬೇಕು. ಕೇವಲ ಮಧುಮೇಹದ ಔಷಧಗಳನ್ನು ಮಾತ್ರ ಸೇವಿಸುವುದು ಹೃದ್ರೋಗಕ್ಕೆ ಪರಿಹಾರವಲ್ಲ.
- ಬೊಜ್ಜು ಅಥವಾ ಅಧಿಕ ಮೈತೂಕ ಹೃದಯದ ಕಾಯಿಲೆಗಳಿಗೆ ಮತ್ತೊಂದು ಪ್ರಮುಖ ಕಾರಣ ಮಧುಮೇಹಿಗಳಲ್ಲಿ ಬೊಜ್ಜಿನ ಸಾಧ್ಯತೆ ಸಾಮಾನ್ಯ ಜನರಿಗೆ ಹೋಲಿಸಿದರೆ ಎರಡರಿಂದ ಮೂರು ಪಟ್ಟು ಹೆಚ್ಚು. ಬೊಜ್ಜಿನ ನಿಯಂತ್ರಣ ಮಧುಮೇಹದ ಮೇಲೆ ಮತ್ತು ಹೃದ್ರೋಗದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಹೀಗಾಗಿ, ಸರಿಯಾದ ಮೈತೂಕವನ್ನು ಹೊಂದುವ ಪ್ರತಿಯೊಂದು ಸುರಕ್ಷಿತ ವಿಧಾನವನ್ನೂ ಅನುಸರಿಸಲು ಮಧುಮೇಹಿಗಳನ್ನು ಪ್ರೋತ್ಸಾಹಿಸಬೇಕು.
- ನಿಯಮಿತ ವ್ಯಾಯಾಮ ಮಧುಮೇಹದ ನಿಯಂತ್ರಣದಲ್ಲಿ ಔಷಧ ಚಿಕಿತ್ಸೆಯಷ್ಟೇ ಪರಿಣಾಮಕಾರಿ. ಸಮಂಜಸ ಆಹಾರ, ಸರಿಯಾದ ಔಷಧ ಚಿಕಿತ್ಸೆ ಮತ್ತು ನಿಯಮಿತ ವ್ಯಾಯಾಮಗಳು ಮಧುಮೇಹ ಚಿಕಿತ್ಸೆಯ ಮೂರು ಅತ್ಯಗತ್ಯ ಅಂಗಗಳು. ಇವುಗಳಲ್ಲಿ ಒಂದು ಭಾಗ ಮುಕ್ಕಾದರೂ ಮಧುಮೇಹ ನಿಯಂತ್ರಣ ಅಪೂರ್ಣವೆಂದೇ ಅರ್ಥ.
- ಧೂಮಪಾನ ಮತ್ತು ಮದ್ಯಪಾನ ಮಧುಮೇಹದ ನಿಯಂತ್ರಣವನ್ನು ಏರುಪೇರಾಗಿಸುತ್ತವೆ. ಇವೆರಡೂ ಪ್ರತ್ಯೇಕವಾಗಿ ಹೃದ್ರೋಗಕ್ಕೆ ಕಾರಣವಾಗಬಲ್ಲವು. ಹೀಗಾಗಿ, ಮಧುಮೇಹಿಗಳು ಧೂಮಪಾನ ಮತ್ತು ಮದ್ಯಪಾನಗಳಿಂದ ದೂರ ಉಳಿಯುವುದು ತಮ್ಮ ಹೃದಯಕ್ಕೆ ನೀಡಬಹುದಾದ ಕಾಣಿಕೆ.
- ಮಾನಸಿಕ ಸಂತುಲನವನ್ನು ಕಾಯ್ದುಕೊಳ್ಳುವುದು ಮಧುಮೇಹಿ ಹೃದ್ರೋಗಿಗಳಲ್ಲಿ ಬಹಳ ಮುಖ್ಯ. ಮನಸ್ಸು ವ್ಯಗ್ರವಾದಷ್ಟೂ ಶರೀರದಲ್ಲಿ ಹಾರ್ಮೋನುಗಳ ಮಟ್ಟ ಏರುಪೇರಾಗುತ್ತದೆ. ಇದರ ಪರೋಕ್ಷ ಪರಿಣಾಮ ರಕ್ತದಲ್ಲಿನ ಸಕ್ಕರೆಯ ಅಂಶದ ಮೇಲೆ, ಹೃದಯದ ಗತಿಯ ಮೇಲೆ ಬೀಳುತ್ತದೆ; ರಕ್ತನಾಳಗಳಲ್ಲಿನ ಒತ್ತಡ ಏರುತ್ತದೆ. ಇಂತಹ ಒತ್ತಡಗಳು ಪ್ರತಿದಿನವೂ ಹಲವು ಬಾರಿ ಆಗುತ್ತಿದ್ದರೆ ಹೃದಯಕ್ಕೆ ಹಾನಿ ಖಚಿತ. ಮಧುಮೇಹಿಗಳು ನಿಯಮಿತ ವ್ಯಾಯಾಮ, ಪ್ರಾಣಾಯಾಮ, ಧ್ಯಾನಗಳ ಮೂಲಕ ತಮ್ಮ ಮನೋವ್ಯಾಪಾರಗಳನ್ನು ಹತೋಟಿಯಲ್ಲಿ ಇಡಬೇಕು.

ಮಧುಮೇಹ ಮತ್ತು ಹೃದ್ರೋಗದ ಅವಿನಾಭಾವ ಸಂಬಂಧವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಅವೆರಡನ್ನೂ ಚೆನ್ನಾಗಿ ನಿಯಂತ್ರಿಸಬಹುದು. ಇವೆರಡಕ್ಕೂ ಉತ್ತಮ ಔಷಧಗಳು ಇಂದು ಲಭ್ಯವಿವೆ. ಸೂಕ್ತ ಆಹಾರ, ಔಷಧ, ಮತ್ತು ವ್ಯಾಯಾಮಗಳ ನೆರವಿನಿಂದ ಜಗತ್ತಿನಲ್ಲಿ ಲಕ್ಷಾಂತರ ಮಧುಮೇಹಿಗಳು ತಮ್ಮ ಸಮಸ್ಯೆಯನ್ನು ಸರಾಗವಾಗಿ ನಿರ್ವಹಿಸುತ್ತಿದ್ದಾರೆ. ಇದು ಎಲ್ಲ ಮಧುಮೇಹಿಗಳೂ ತಮ್ಮ ದೈನಂದಿನ ಬದುಕಿನಲ್ಲಿ ಅನುಸರಿಸಬಹುದಾದ ಆಶಾದಾಯಕ ಸಂಗತಿ. ❖

ಮಾದಕವ್ಯಸನದ ಗೀಳು

ಡಾ. ಶ್ರೀನಿವಾಸ ಹರಪನಹಳ್ಳಿ

ಪರಿಚಯಸ್ಥರೊಬ್ಬರು ಫೋನಾಯಿಸಿ 'ಮಗನನ್ನು ಆಸ್ಪತ್ರೆಗೆ ದಾಖಲಿಸಿದ್ದೇವೆ; ಒಂದು ಬಾರಿ ವೈದ್ಯರೊಂದಿಗೆ ಮಾತಾಡುತ್ತೀರಾ' ಎಂದಾಗ ನನಗೆ ಆಶ್ಚರ್ಯವಾಯಿತು. 'ಯಾಕೆ? ಏನಾಯಿತು?' ಎಂದು ಕೇಳಿದೆ. ಆಗ ಅವರು 'ಇತ್ತೀಚಿಗೆ ಕೆಲ ತಿಂಗಳುಗಳಿಂದ ಗುಟ್ಕಾ ತಿನ್ನಲು ಪ್ರಾರಂಭಿಸಿದ್ದ. ಅದನ್ನು ಬಿಡಲು ಎಷ್ಟು ಹೇಳಿದರೂ ಕೇಳದೆ ಮೊನ್ನೆ ಅತಿಯಾಗಿ ತಿಂದು ಆಫೀಸಿನಲ್ಲಿ ತಲೆಸುತ್ತು ಬಂದು ಬಿದ್ದುಬಿಟ್ಟ. ವೈದ್ಯರ ಹತ್ತಿರ ತೋರಿಸಿದಾಗ ಅವರು ಮಾನಸಿಕ ರೋಗತಜ್ಞರ ಬಳಿ ಕರೆದುಕೊಂಡು ಹೋಗಲು ಹೇಳಿದರು. ಬಾಬು ಗುಟ್ಕಾವ್ಯಸನದಿಂದ ಬಳಲುತ್ತಿದ್ದು, ಹೆಚ್ಚಿನ ಚಿಕಿತ್ಸೆಯ ಅಗತ್ಯ ಇದೆ ಅಂತ ಆ ತಜ್ಞರು ಹೇಳಿದ್ರು. ಅದಕ್ಕೆ ಈಗ ಅಡ್ಮಿಟ್ ಮಾಡಿದ್ದೇವೆ' ಎಂದರು.

ಇಂದು ಬಾಬುನಂತಹ ಅನೇಕ ಯುವಜನರು ಮಾದಕವ್ಯಸನದ ಗೀಳಿಗೆ ಸಿಲುಕಿದ್ದಾರೆ. ಒಂದೆಡೆ ಭಾರತ ಅಭಿವೃದ್ಧಿಯತ್ತ ದಾಪುಗಾಲಿಡುತ್ತಿದ್ದರೆ, ಇನ್ನೊಂದೆಡೆ ಭಾರತದ ಯುವಶಕ್ತಿ ಮಾದಕವ್ಯಸನದ ಗೀಳಿನಿಂದ ಬಳಲುತ್ತಿದೆ. ಜನಸಂಖ್ಯೆಯ ಶೇ. 30ಕ್ಕೂ ತುಸು ಹೆಚ್ಚಿರುವ ಯುವಶಕ್ತಿ ದೇಶದ ಬಹುದೊಡ್ಡ ಆಸ್ತಿ. ಅಧಿಕೃತ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಶೇ. 1.5-2.5 ಜನರು ಮಾದಕವ್ಯಸನಿಗಳಾಗಿದ್ದಾರೆ. ಭಾರತವಷ್ಟೇ ಅಲ್ಲ ಅನೇಕ ಮುಂದುವರೆದ ರಾಷ್ಟ್ರಗಳಲ್ಲೂ ಇದೊಂದು ಬಹುದೊಡ್ಡ ಪಿಡುಗಾಗಿದೆ. ಯಾವುದೇ ದೇಶವಾಗಲಿ ಯುವಜನರು ಆ ದೇಶದ ಭವಿಷ್ಯದ, ಅಭಿವೃದ್ಧಿಯ ದ್ಯೋತಕ. ಶಿಕ್ಷಣ, ತಂತ್ರಜ್ಞಾನದ ಬಳಕೆ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಯುವಜನರ ಕೊಡುಗೆ ಮಹತ್ತರವಾದುದು. ಇಂತಹ ಸಶಕ್ತ ಯುವಕಾರ್ಯಪಡೆ ನಿಧಾನವಾಗಿ ಮಾದಕವ್ಯಸನದ ಗೀಳಿಗೆ ಸಿಲುಕುತ್ತಿರುವುದು ನಿಜಕ್ಕೂ ಕಳವಳಕಾರಿ ಸಂಗತಿ. ಅಷ್ಟೇಕೆ, ಈ ಗೀಳು ಸಿನಿಮಾ ತಾರೆಯರು, ಕ್ರೀಡಾಪಟುಗಳು, ಉದ್ಯಮಿಗಳು ಮತ್ತು ವೈದ್ಯರನ್ನೂ ಬಿಟ್ಟಿಲ್ಲ.

ಗೀಳು ಕೇವಲ ಮಾದಕವಸ್ತುಗಳದ್ದೇ ಮಾತ್ರವಲ್ಲ. ಇನ್ನೂ ಅನೇಕ ವಸ್ತುಗಳು ಈ ಪಟ್ಟಿಯಲ್ಲಿ ಸೇರುತ್ತವೆ.

ಮಾದಕವ್ಯಸನದಲ್ಲಿ ಹಲವಾರು ವಿಧಗಳಿವೆ. ಅಫೀಮು ಜಾತಿಯ ಗಾಂಜಾ ಮತ್ತು ಚರಸ್ ಒಂದು ಬಗೆಯ ಗಿಡದಿಂದ ದೊರೆತರೆ, ಹೆರಾಯಿನ್, ಎಕ್ಸ್ಟಾಸಿ ಮತ್ತು 'ಎಲ್‌ಎಸ್‌ಡಿ'ಯಂತಹ ಮಾದಕವಸ್ತುಗಳು ರಾಸಾಯನಿಕಗಳಿಂದ ತಯಾರಿಸಲ್ಪಡುತ್ತವೆ. ಈ ಮಾದಕವಸ್ತುಗಳ ಬಳಕೆ ಕಾನೂನುಬಾಹಿರ. ಇದಲ್ಲದೇ ಕೆಟಮಿನ್, ಆಂಫೆಟಾಮಿನ್, ಫೆಂಟಾನಿಲ್ ಎಂಬ ಔಷಧಗಳನ್ನು ಕೂಡ ಕೆಲವರು ನಶೆಗಾಗಿ ಬಳಸಿ ಅದರ ದಾಸರಾಗಿದ್ದಾರೆ. ಈ ವಸ್ತುಗಳು ಆರಂಭದಲ್ಲಿ ಮಿದುಳನ್ನು ಪ್ರಚೋದಿಸಿದರೂ ನಂತರ ನರದೌರ್ಬಲ್ಯಕ್ಕೆ ಕಾರಣವಾಗುತ್ತವೆ. ಮದ್ಯಪಾನ ಕೂಡ ಗೀಳಿನ ವಸ್ತುವಾಗಿದೆ. ಇತ್ತೀಚಿಗೆ ಮೊಬೈಲ್ ಫೋನಿನ ಅತಿಬಳಕೆಯೂ ಗೀಳೆಂದೇ ಪರಿಗಣಿಸಲ್ಪಟ್ಟಿದೆ. ಅಂಕಿ-ಅಂಶಗಳ ಪ್ರಕಾರ ಗುಟ್ಕಾ ಜಗತ್ತಿನ 4ನೇ ಅತಿ ಹೆಚ್ಚು ಗೀಳಿನ ವಸ್ತುವಾಗಿದೆ.

ಗೀಳೆಂದರೆ ಯಾವುದೇ ವಸ್ತುವನ್ನು ಅತಿಯಾಗಿ ಉಪಯೋಗಿಸುವುದು ಮತ್ತು ಅದು ಸಿಗದಿದ್ದಾಗ ತೀವ್ರವಾದ ದೈಹಿಕ ಮತ್ತು ಮಾನಸಿಕ ಕ್ಷೋಭೆಗೆ ಒಳಗಾಗುವುದು. ದೈನಂದಿನ ಒತ್ತಡ, ಒಂಟಿತನ, ಆನುವಂಶೀಯತೆ, ಅಂಧಾನುಕರಣೆ ಮತ್ತು ಪಾಲಕರ ಬೇಜವಾಬ್ದಾರಿತನ – ಇವೆಲ್ಲಾ ಗೀಳಿಗೆ ಬೀಳಲು ಮುಖ್ಯ ಕಾರಣಗಳು.

ಇಂಥ ವ್ಯಕ್ತಿಗಳು ನಿದ್ರಾಹೀನತೆ, ಸಿಡುಕುತನ ಮತ್ತು ಚಂಚಲತೆಯಿಂದ ಬಳಲುತ್ತಿರುತ್ತಾರೆ. ಸುಸ್ತು, ಕೈಕಾಲುಗಳಲ್ಲಿ ನವೆ, ಕೆಲಸದಲ್ಲಿ ನಿರಾಸಕ್ತಿ ಮತ್ತು ಸಮಾಜಘಾತುಕ ವರ್ತನೆ ಕೂಡ ಈ ವ್ಯಕ್ತಿಗಳಲ್ಲಿ ಕಂಡುಬರುತ್ತವೆ. ಈ ಲಕ್ಷಣಗಳು ಗೀಳಿನ ವಸ್ತುವಿನ ಮೇಲೆ ಅವಲಂಬಿತವಾಗಿರುತ್ತವೆ. ಅನೇಕಬಾರಿ ಆ ವ್ಯಕ್ತಿಗೆ ತಾನು ಗೀಳಿಗೆ ಒಳಗಾಗಿದ್ದೇನೆ ಎಂಬ ಅಂಶವೇ ಗಮನಕ್ಕೆ ಬರುವುದಿಲ್ಲ. ಸಾಮಾನ್ಯವಾಗಿ ಮನೆಯ ಮಂದಿ, ಸ್ನೇಹಿತರು ಅಥವಾ ಸಹೋದ್ಯೋಗಿಗಳೇ ವ್ಯಕ್ತಿಯ ಚರ್ಯೆಯಲ್ಲಿ ಆಗಿರುವ ಬದಲಾವಣೆಯನ್ನು ಮೊದಲು ಗಮನಿಸುತ್ತಾರೆ.

ಮಾದಕವಸ್ತುಗಳು ಆರಂಭದಲ್ಲಿ ಮಿದುಳನ್ನು ಪ್ರಚೋದಿಸಿದರೂ ನಂತರ ನರದೌರ್ಬಲ್ಯಕ್ಕೆ ಕಾರಣವಾಗುತ್ತವೆ.

ಈ ಗೀಳಿನಿಂದ ಹೊರಬರುವುದು ಹೇಗೆ? 'ನಾನು ಗೀಳಿನಿಂದ ಬಳಲುತ್ತಿದ್ದೇನೆ, ಇದರಿಂದ ಹೊರಬರಲೇಬೇಕು' ಎಂಬ ಇಚ್ಛೆಯೇ ಇದರ ಮೊದಲ ಹೆಜ್ಜೆ. ನಂತರ ತಜ್ಞರು ಚಿಕಿತ್ಸೆಯ ಹಲವು ಹಂತಗಳನ್ನು ಸೂಚಿಸುತ್ತಾರೆ. ಇದು ಕೇವಲ ಐದಾರು ದಿನಗಳಲ್ಲಿ ಮುಗಿಯುವ ಚಿಕಿತ್ಸೆಯಲ್ಲ. ಮೊದಲಿಗೆ ಗೀಳಿನ ಲಕ್ಷಣಗಳನ್ನು ಅವಲೋಕಿಸಿ ನಂತರ ಆಪ್ತಸಮಾಲೋಚನೆ, ಮಾತ್ರೆಗಳು, ವ್ಯಸನಕೇಂದ್ರದಲ್ಲಿ ದಾಖಲಾತಿ – ಹೀಗೆ ಹಂತಹಂತವಾಗಿ ಚಿಕಿತ್ಸೆ ನೀಡಬೇಕಾಗುತ್ತದೆ. ಜೊತೆಗೆ ಗೀಳಿನ ವಸ್ತುಗಳು ಮಾಡಿರುವ ಶಾರೀರಿಕ ಹಾನಿಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಗುಟ್ಕಾದಿಂದ ಬರಬಹುದಾದ ಬಾಯಿಯ ಕ್ಯಾನ್ಸರ್, ಮದ್ಯಪಾನ ಮತ್ತು ಇತರೆ ರಾಸಾಯನಿಕ ವಸ್ತುಗಳಿಂದ ಯಕೃತ್ತಿನ ಕಾಯಿಲೆ, ಚರ್ಮದ ತೊಂದರೆಗಳು, ಶ್ವಾಸಕೋಶದ ಸೋಂಕು, ಖಿನ್ನತೆ. ಸ್ಕಿಝೋಫ್ರೇನಿಯಾ ಇತ್ಯಾದಿಗಳ ಮೇಲೂ ನಿಗಾ ಇಡಬೇಕಾಗುತ್ತದೆ. ಕೊನೆಯಲ್ಲಿ ಗೀಳಿನಿಂದ ಮುಕ್ತರಾಗಿ ಈಗ ಸುಧಾರಿಸಿರುವ ವ್ಯಕ್ತಿಗಳಿಂದ ಸಲಹೆ-ಬುದ್ಧಿಮಾತುಗಳ ಆರೈಕೆಯೂ ಬೇಕಾಗುತ್ತದೆ.

ಶಾಲಾ-ಕಾಲೇಜು ಮಟ್ಟದಲ್ಲೇ ಈ ಮಾದಕವ್ಯಸನದ ಗೀಳಿನ ಬಗ್ಗೆ ತಿಳಿವಳಿಕೆ, ಔಷಧಗಳ ಸದ್ಬಳಕೆ ಮತ್ತು ದೇಶದಾದ್ಯಂತ ಜನಜಾಗೃತಿ ಅಭಿಯಾನದ ಮೂಲಕ ಇದನ್ನು ಮೂಲದಿಂದಲೇ ನಿರ್ನಾಮ ಮಾಡುವ ಪಣವನ್ನು ನಾವೆಲ್ಲ ತೊಡಬೇಕಾಗಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

8) ಸರಾಸರಿಯನ್ನು ಕಂಡುಹಿಡಿಯಿರಿ.

ಪುಸ್ತಕಗಳ ಸಂಖ್ಯೆ x	ವಿದ್ಯಾರ್ಥಿಗಳ ಸಂಖ್ಯೆ (f)
0	35
1	64
2	68
3	18
4	15
	N=200

ಪರಿಹಾರ :

ಪುಸ್ತಕಗಳ ಸಂಖ್ಯೆ x	ವಿದ್ಯಾರ್ಥಿಗಳ ಸಂಖ್ಯೆ (f)	fx
0	35	00
1	64	64
2	68	136
3	18	54
4	15	60
	N = 200	314

ಸರಾಸರಿ=

$$= \sum \frac{fx}{n}$$

$$= \frac{314}{200} = 1.5$$

ಸರಾಸರಿ = 1.5

9) ಈ ಸನ್ನಿವೇಶವನ್ನು ವರ್ಗ ಸಮೀಕರಣಗಳ ರೂಪದಲ್ಲಿ ವ್ಯಕ್ತಪಡಿಸಿ. ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಯಸುತ್ತೇವೆ.

ಪರಿಹಾರ:– ರೋಹನನ ಪ್ರಸ್ತುತ ವಯಸ್ಸು x ಆಗಿರಲಿ

ರೋಹನನ ತಾಯಿಯ ಪ್ರಸ್ತುತ ವಯಸ್ಸು $(x+26)$ ವರ್ಷಗಳು

3 ವರ್ಷಗಳ ನಂತರ ರೋಹನನ ವಯಸ್ಸು = $(x+3)$ ವರ್ಷಗಳು

3 ವರ್ಷಗಳ ನಂತರ ರೋಹನನ ತಾಯಿಯ ವಯಸ್ಸು =

$= (x + 26 + 3)$ ವರ್ಷಗಳು

3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ)

ಗುಣಲಬ್ಧವು $= (x + 26 + 3)$

$= (x + 3)(x + 29)$

ಸಮಸ್ಯೆಯ ಪ್ರಕಾರ

$$(x + 3)(x + 29) = 360$$
$$x^2 + 29x + 3x + 87 = 360$$
$$x^2 + 32x - 273 = 0$$

ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಳಸಬಹುದಾದ ವರ್ಗ ಸಮೀಕರಣ = $x^2 + 32x - 273 = 0$

10) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ

12, 16, 20, 24...............248

$$\Rightarrow a_2 - a_1 = 16 - 12 = 4$$
$$\Rightarrow a_3 - a_2 = 20 - 16 = 4$$
$$\Rightarrow a_4 - a_3 = 24 - 20 = 4$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಕೊನೆಯ ಪದ $(l) = 248$

Then nth term $= l$

$$a + (n-1)d = 248$$
$$12 + (n-1)(4) = 248$$
$$(n-1)4 = 248 - 12$$
$$(n-1)4 = 236$$
$$(n-1) = \frac{236}{4}$$
$$(n-1) = 59$$
$$n = 59 + 1 = 60$$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

11) ಚಿತ್ರದಲ್ಲಿ AB ಮತ್ತು CD ಜ್ಯಾಗಳು P ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. ಆದರೆ (i) $\Delta APC \sim \Delta DPB$

(ii) AP . PB = CP . DP ಎಂದು ಸಾಧಿಸಿ



ಪರಿಹಾರ:– ಮೊದಲು CBಅನ್ನು ಸೇರಿಸಿ

(i) In ΔAPC ಮತ್ತು ΔDPB ದಲ್ಲಿ ಲಂಬವಾಗಿ ವಿರುದ್ಧ ಕೋನಗಳು

$\angle APC = \angle DPB$ (ಲಂಬವಾಗಿ ವಿರುದ್ಧ ಕೋನಗಳು)

$\angle CAP = \angle BDP$

$\Delta APC \sim \Delta DPB$ (ಕೋ ಕೋ ಸಿದ್ಧಾಂತ)

(ii) ಮೇಲಿನ ಸಮಸ್ಯೆಯಲ್ಲಿ $\Delta APC \sim \Delta DPB$ ಎಂದು ಸಾಧಿಸಿದ್ದೇವೆ

$$\therefore \frac{AP}{DP} = \frac{PC}{PB} = \frac{CA}{BD}$$

$$\frac{AP}{DP} = \frac{PC}{PB} =$$

$\therefore$ AP. PB = PC. DP ಸಾಧಿಸಿದೆ

12) ಅವಿಭಾಜ್ಯ ಅಪವರ್ತಿಸುವಿಕೆಯ ಕ್ರಮದಿಂದ 105 ಮತ್ತು 1515ರ ಮ.ಸಾ.ಅ. ಮತ್ತು ಲ.ಸಾ.ಅ. ಕಂಡುಹಿಡಿಯಿರಿ.

ಪರಿಹಾರ:– 105 = 3 x 5 x 7

1515 = 3 x 5 x 101

ಮ.ಸಾ.ಅ. = 3 x 5 = 15

ಲ.ಸಾ.ಅ. = 3 x 5 x 7 x 101 = 10605

ಅಥವಾ ಲ.ಸಾ.ಅ = $\frac{AB}{H} = \frac{105 \times 1515}{15}$ = 10605 5.2.24

(ಮುಂದಿನ ಸಂಚಿಕೆಗೆ..........)

II PUC BIOLOGY

REVISION : MODEL QUESTIONS

32. Name the technique involved in separation and isolation of DNA fragment. Which dye is used tostain get totheDNA visible under UV light?

Ans:- (a) GelElectrophoresis
(b)Ethidium bromide

33. Plant cells are totipotent. Why?

Ans:- The capacity of a cell explant to grow into a whole plant is called totipotency.

34. What is global warming?

Ans:- The gradual continuous increase in average temperature of surface of the earth as a result of increase in concentration of greenhouse gases is termed as global warming.

35. Define mortality.

Ans:- It is the number of deaths that occurs in a population at given time. It declines the density of population.

36. Define polymerase chain reaction.

Ans:- Polymerase chain reaction is a technique of amplifying a DNA fragment into 1000s of copies within a short time in vitro.

37. What is test cross? Mention its significance.

Ans:- Test cross is a cross between an individual of unknown dominant genotype is crossed with the recessive parent to find out the homozygosity or heterozygosity. It is also used to test whether segregation of alleles takes place or not.

38. What is an allergy?

Ans:- The hypersensitive reaction of the immune system to certain antigens present in the environment is called allergy

39. Write a note on selection of plants among the progency of the hybrids with desired recombination of characters.

Ans:- a) It involves the selection of plants among the progency of the hybrids with desired recombination of characters.

b) The hybrid are superior to both the parents. This is called hybrid Vigour/heterosis.

c) They are self-pollinated for several generation till they reach a state of uniformity or homozygosity in order to avoid the segregation of characters in the future progency.

40. i) Name the method of vegetative propagation in Rose and Jasmine plant.

ii) "Vegetative propagation produces better plants with higher yield in ornamental crops." To justify the statement give four reasons.

Ans:- i) Grafting in Rose and Layering in Jasmine.

ii) a) It is cheaper, easier and more rapid method of propagation.

b) Better quality of plants can be maintained.

c) Produce seeds with prolonged period of dormancy.

d) Traits or characters of the parent plant are preserved

41. Draw a neat labelled diagram of stirred tank bioreactor .

Ans:-



42. One of the applications of biotechnology is the production of insect resistant crop plants, Justify the statement with reference to Bt. Cotton.

Ans:- Crops are made which are more tolerant to environmental stresses like cold, heat drought, salt etc.

Bt. Cotton -

a) Bacillus thuringensis produce crystal proteins called cry proteins which are toxic to larvae of insects like tobacco, budworm, army worm, beetles and mosquitoes.

b) Cry protein exist as inactive prototoxin and gets converted into active toxin when ingested by the insects, as the alkaline PH of the gut solubilises the crystals

c) The activated toxin binds to the surface of epithelial cells of midgut and creates pores.

d) This causes swelling and lysis of cells leading to the death of the insects.

e) The gene (cry genes) encoding this protein are isolated from the bacterium and incorporated into several crop plants like cotton, tomato, corn, rice, soyabean etc.

f) The proteins encoded by the following cry genes control the pest given against them.

i) Cry IAC and cry II Ab it controls cotton bollworms

ii) Cry IAb controls corn borer.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

6,760 ಟನ್ ಅಡಿಕೆ ಅಕ್ರಮ ಆಮದು ವಶ

ಪ್ರಜಾವಾಣಿ ವಾರ್ತೆ

ನವದೆಹಲಿ: 2023-24ನೇ ಹಣಕಾಸು ವರ್ಷದ ಡಿಸೆಂಬರ್ ಅಂತ್ಯದವರೆಗೆ ಅಡಿಕೆ ಅಕ್ರಮ ಆಮದಿನ 416 ಪ್ರಕರಣಗಳನ್ನು ಪತ್ತೆ ಹಚ್ಚಿ 6,760 ಟನ್ ಅಡಿಕೆ ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದರು.

ಲೋಕಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸಂಸದ ನಳಿನ್ ಕುಮಾರ್ ಕಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕೇಂದ್ರೀಯ ಪರೋಕ್ಷ ತೆರಿಗೆ ಹಾಗೂ ಸುಂಕ ಮಂಡಳಿಯ ತನಿಖಾ ತಂಡವು 2020–21ರಲ್ಲಿ 278 ಪ್ರಕರಣಗಳನ್ನು ಪತ್ತೆ ಹಚ್ಚಿ 3,449 ಟನ್ ವಶಪಡಿಸಿಕೊಂಡಿತ್ತು. 2021–22ರಲ್ಲಿ 260 ಪ್ರಕರಣಗಳಲ್ಲಿ 3,388 ಟನ್ ಹಾಗೂ 2022–23ರಲ್ಲಿ 454 ಪ್ರಕರಣಗಳಲ್ಲಿ 3,400 ಟನ್ ಅಡಿಕೆ ಸ್ವಾಧೀನ ಪಡಿಸಿಕೊಂಡಿತ್ತು' ಎಂದರು.

'ತನಿಖಾ ತಂಡವು ಅಡಿಕೆಯ ಅಕ್ರಮ ಸಾಗಣೆ ಮೇಲೆ ನಿಗಾ ಇಟ್ಟಿದೆ. ದೇಶದ ರೈತರ ಹಿತ ರಕ್ಷಿಸಲು ಬದ್ಧವಾಗಿದೆ' ಎಂದು ಅವರು ತಿಳಿಸಿದರು.

'ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಆಮದು ಪ್ರಮಾಣ ಹೆಚ್ಚಳ ಗಮನಿಸಿದ ಸಚಿವಾಲಯವು, ಅಡಿಕೆಯ ಆಮದಿನ ಕನಿಷ್ಠ ದರವನ್ನು ಪ್ರತಿ ಕೆ.ಜಿ.ಗೆ ₹251ಯಿಂದ ₹351ಕ್ಕೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಿದೆ. ನಮ್ಮ ರೈತರ ಹಿತರಕ್ಷಣೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಜತೆಗೆ, ಸುಪಾರಿಯ ಆಮದು ನೀತಿಯನ್ನು ಉಚಿತದಿಂದ ನಿಷೇಧಿತ ಎಂದೂ ಪರಿಷ್ಕರಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಜಾರ್ಖಂಡ್: 47–29ರಿಂದ ವಿಶ್ವಾಸಮತ ಗೆದ್ದ ಜೆಎಂಎಂ ಮೈತ್ರಿಕೂಟ ಸರ್ಕಾರ

ಬಹುಮತ ಸಾಬೀತುಪಡಿಸಿದ ಚಂಪೈ

ರಾಂಚಿ (ಪಿಟಿಐ): ಮುಖ್ಯಮಂತ್ರಿ ಚಂಪೈ ಸೊರೇನ್ ನೇತೃತ್ವದ ಜಾರ್ಖಂಡ್‌ನ ಸಮ್ಮಿಶ್ರ ಸರ್ಕಾರವು ವಿಧಾನಸಭೆಯಲ್ಲಿ ಸೋಮವಾರ ಬಹುಮತ ಸಾಬೀತುಪಡಿಸಿದೆ.

81 ಸದಸ್ಯ ಬಲದ ವಿಧಾನಸಭೆಯಲ್ಲಿ ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ಮೈತ್ರಿಕೂಟದ 47 ಶಾಸಕರು ಚಂಪೈ ಸರ್ಕಾರಕ್ಕೆ ಬೆಂಬಲ ನೀಡಿದರು. 29 ಶಾಸಕರು ವಿಶ್ವಾಸಮತದ ವಿರುದ್ಧವಾಗಿ ಮತ ಚಲಾಯಿಸಿದರು. ಪಕ್ಷೇತರ ಶಾಸಕ ಸರಯೂ ರಾಯ್ ಅವರು ಮತದಾನದಿಂದ ದೂರವುಳಿದರು. ವಿಶ್ವಾಸಮತಯಾಚನೆ ವೇಳೆ ವಿಧಾನಸಭೆಯಲ್ಲಿ 77 ಶಾಸಕರು ಹಾಜರಿದ್ದರು.

ಜಾರಿ ನಿರ್ದೇಶನಾಲಯವು ಹೇಮಂತ್ ಸೊರೇನ್ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜನವರಿ 31ರಂದು ಬಂಧಿಸಿತ್ತು. ಅದಕ್ಕೂ ಮುನ್ನ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಚಂಪೈ, ಫೆಬ್ರುವರಿ 2ರಂದು ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ವಿಶ್ವಾಸ ಮತಯಾಚನೆ ಪ್ರಕ್ರಿಯೆಯಲ್ಲಿ ಹೇಮಂತ್ ಸೊರೇನ್ ಅವರೂ ಭಾಗವಹಿಸಿದ್ದರು. ಇ.ಡಿ ಬಂಧನದಲ್ಲಿರುವ ಅವರಿಗೆ ರಾಂಚಿಯ ವಿಶೇಷ ನ್ಯಾಯಾಲಯವು ಅನುಮತಿ ನೀಡಿತ್ತು.

ಬಿಜೆಪಿಯವರು ಶಾಸಕರನ್ನು ಖರೀದಿಸಬಹುದು ಎಂಬ ಆತಂಕದಿಂದ ಫೆಬ್ರುವರಿ 2ರಂದು ಹೈದರಾಬಾದ್‌ಗೆ ತೆರಳಿದ್ದ ಮೈತ್ರಿಕೂಟದ 38 ಶಾಸಕರು, ಭಾನುವಾರ ಸಂಜೆ ರಾಂಚಿಗೆ ವಾಪಸಾಗಿದ್ದರು.

ಕಾಂಗ್ರೆಸ್ ಅಭಿನಂದನೆ: ವಿಶ್ವಾಸಮತ ಗೆದ್ದ ಚಂಪೈ ಸರ್ಕಾರವನ್ನು ಕಾಂಗ್ರೆಸ್ ಅಭಿನಂದಿಸಿದೆ. 'ನಾವು ನಿರಾಯಾಸವಾಗಿ ಬಹುಮತ ಸಾಬೀತು ಪಡಿಸಿದ್ದೇವೆ. ಬಿಜೆಪಿಯ ಆಪರೇಷನ್ ಕಮಲ ಯತ್ನ ವಿಫಲಗೊಂಡಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಪ್ರತಿಕ್ರಿಯಿಸಿದ್ದಾರೆ.

'ಬಿಜೆಪಿಯವರು ಮೊದಲು ಇ.ಡಿ ಮೂಲಕ ಹೇಮಂತ್ ಅವರನ್ನು ಬಂಧಿಸಿ, ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಮಾಡಿದರು. ಆ ಬಳಿಕ ಚಂಪೈ ಸೊರೇನ್ ಪ್ರಮಾಣವಚನ ಸ್ವೀಕರಿಸುವುದನ್ನು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಿದರು' ಎಂದು ಆರೋಪಿಸಿದರು.

ಜಾರ್ಖಂಡ್‌ನ ನೂತನ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು (ಎಡ). ವಿಧಾನಸಭೆಗೆ ಬಂದಾಗ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹಾಗೂ ಇತರರು ಜೊತೆಗಿದ್ದರು –ಪಿಟಿಐ ಚಿತ್ರ

ಆರೋಪ ಸಾಬೀತುಪಡಿಸಿ: ಬಿಜೆಪಿಗೆ ಸವಾಲು

'ನನ್ನ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಆರೋಪಗಳನ್ನು ಸಾಬೀತುಪಡಿಸಿ' ಎಂದು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಬಿಜೆಪಿಗೆ ಸವಾಲು ಹಾಕಿದ್ದಾರೆ. 'ಒಂದು ವೇಳೆ ಆರೋಪಗಳು ಸಾಬೀತಾದರೆ, ರಾಜಕೀಯದಿಂದಲೇ ನಿವೃತ್ತಿಯಾಗುವೆ' ಎಂದಿದ್ದಾರೆ.

'ಕೇಂದ್ರ ಸರ್ಕಾರ ನಡೆಸಿದ ಪಿತೂರಿಯಿಂದ ನನ್ನನ್ನು ಬಂಧಿಸಲಾಗಿದೆ. ರಾಜಭವನದ ಪಾತ್ರವೂ ಇದರ ಹಿಂದಿದೆ' ಎಂದು ಆರೋಪಿಸಿದ ಅವರು, 'ಜಾರ್ಖಂಡ್‌ನಲ್ಲಿ ಬುಡಕಟ್ಟು ಸಮುದಾಯದ ಮುಖ್ಯಮಂತ್ರಿಯೊಬ್ಬರು ಐದು ವರ್ಷ ಆಡಳಿತ ನಡೆಸುವುದನ್ನು ಬಿಜೆಪಿ ಬಯಸುವುದಿಲ್ಲ. ಬಿಜೆಪಿಯ ಆಡಳಿತದಲ್ಲೂ ಅದಕ್ಕೆ ಅವಕಾಶ ನೀಡಿಲ್ಲ' ಎಂದು ಕಿಡಿಕಾರಿದರು.

'ನಾನು ಈಗ ಕಣ್ಣೀರು ಹಾಕುತ್ತಾ ಕೂರುವುದಿಲ್ಲ. ಊಳಿಗಮಾನ್ಯ ಮನಃಸ್ಥಿತಿಯ ಶಕ್ತಿಗಳಿಗೆ ಸೂಕ್ತ ಸಮಯದಲ್ಲಿ ತಕ್ಕ ಪ್ರತ್ಯುತ್ತರ ನೀಡುತ್ತೇನೆ' ಎಂದು ಎಚ್ಚರಿಸಿದರು.

12 ರಂದು ವಿಚಾರಣೆ: ಇ.ಡಿ ಕ್ರಮವನ್ನು ಪ್ರಶ್ನಿಸಿ ಹೇಮಂತ್ ಸೊರೇನ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಜಾರ್ಖಂಡ್ ಹೈಕೋರ್ಟ್ ಫೆಬ್ರುವರಿ 12 ರಂದು ನಡೆಸಲಿದೆ ಎಂದು ಸೊರೇನ್ ಪರ ವಕೀಲ, ರಾಜ್ಯದ ಅಡ್ವೊಕೇಟ್ ಜನರಲ್ ರಾಜೀವ್ ರಂಜನ್ ತಿಳಿಸಿದರು.

ಸರ್ವಾಧಿಕಾರಿಯ ದುರಹಂಕಾರವನ್ನು ಜಾರ್ಖಂಡ್ ನುಚ್ಚುನೂರು ಮಾಡಿದೆ. ಈ ದೇಶ ಹಾಗೂ ಇಲ್ಲಿನ ಜನರಿಗೆ ಒಲಿದ ಗೆಲುವು ಇದು
ಕಾಂಗ್ರೆಸ್

ನನ್ನ ಸರ್ಕಾರವು ಹೇಮಂತ್ ಸೊರೇನ್ ಆಡಳಿತದ 'ಭಾಗ–2' ಎಂದು ಹೇಳಲು ಹೆಮ್ಮೆಪಡುತ್ತೇನೆ. ಹೇಮಂತ್ ಹೈ ತೊ ಹಿಮ್ಮತ್ ಹೈ (ಹೇಮಂತ್ ಇದ್ದಲ್ಲಿ ಶಕ್ತಿ ಇದೆ)
ಚಂಪೈ ಸೊರೇನ್
ಜಾರ್ಖಂಡ್ ಮುಖ್ಯಮಂತ್ರಿ

2024ರ ಜ. 31 ಭಾರತದ ಇತಿಹಾಸದಲ್ಲಿ ಕರಾಳ ಅಧ್ಯಾಯ. ರಾಜ್ಯಪಾಲರ ಆಣತಿಯಂತೆ ಒಬ್ಬ ಮುಖ್ಯಮಂತ್ರಿಯನ್ನು ಬಂಧಿಸಲಾಯಿತು.
ಹೇಮಂತ್ ಸೊರೇನ್
ಜಾರ್ಖಂಡ್ ಮಾಜಿ ಮುಖ್ಯಮಂತ್ರಿ

ಪ್ರಮುಖಾಂಶಗಳು

- ವಿಶ್ವಾಸಮತಯಾಚನೆ ಪ್ರಕ್ರಿಯೆಯಲ್ಲಿ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಭಾಗಿ
- 181 ಸದಸ್ಯಬಲದ ಜಾರ್ಖಂಡ್ ವಿಧಾನಸಭೆ
- ಒಬ್ಬ ಶಾಸಕ ಕಳೆದ ತಿಂಗಳು ರಾಜೀನಾಮೆ ನೀಡಿದ್ದರಿಂದ ಬಹುಮತಕ್ಕೆ 41 ಮತಗಳು ಬೇಕಿದ್ದವು
- ಜೆಎಂಎಂನ 29, ಕಾಂಗ್ರೆಸ್‌ನ 17, ಆರ್‌ಜೆಡಿಯ ಒಬ್ಬ ಶಾಸಕನ ಬೆಂಬಲ

'ಪ್ರಚಾರದಲ್ಲಿ ಮಕ್ಕಳ ಬಳಕೆ ಬೇಡ'

ನವದೆಹಲಿ (ಪಿಟಿಐ): 'ಚುನಾವಣಾ ಪ್ರಚಾರ ಕಾರ್ಯದಲ್ಲಿ ಯಾವುದೇ ರೀತಿಯಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು' ಎಂದು ಭಾರತೀಯ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಸೋಮವಾರ ಸೂಚನೆ ನೀಡಿದೆ.

ಲೋಕಸಭಾ ಚುನಾವಣೆ ಸನಿಹವಾಗುತ್ತಿರುವಂತೆ ಈ ಸಲಹೆ ನೀಡಿರುವ ಆಯೋಗವು, 'ಪೋಸ್ಟರ್‌ಗಳು ಮತ್ತು ಕರಪತ್ರಗಳ ವಿತರಣೆ ಹಾಗೂ ಘೋಷಣೆ ಕೂಗುವುದು, ವಾಹನದಲ್ಲಿ ಅಥವಾ ರ‍್ಯಾಲಿಗಳಲ್ಲಿ ಕರೆದೊಯ್ಯುವುದೂ ಸೇರಿದಂತೆ ಇತರ ಕಾರ್ಯದಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು' ಎಂದು ನಿರ್ದೇಶನ ನೀಡಿದೆ.

'ಒಂದು ವೇಳೆ ಚುನಾವಣಾ ಪ್ರಚಾರ ಕಾರ್ಯದಲ್ಲಿ ಯಾವುದೇ ಅಭ್ಯರ್ಥಿ ಅಥವಾ ರಾಜಕೀಯ ಪಕ್ಷ, ಯಾವುದೇ ರೂಪದಲ್ಲಾದರೂ ಮಕ್ಕಳನ್ನು ಬಳಸಿಕೊಂಡರೆ ಅವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುವುದು' ಎಂದು ಆಯೋಗ ಹೇಳಿದೆ.

'ಚುನಾವಣೆಗೆ ಸಂಬಂಧಿಸಿದ ಯಾವುದೇ ಕೆಲಸದಿಂದ ಯಾವುದೇ ವಯಸ್ಸಿನ ಮಕ್ಕಳನ್ನು ದೂರ ಇಡಬೇಕು' ಎಂದು ಆಯೋಗವು ಪ್ರತ್ಯೇಕವಾಗಿ ಎಲ್ಲ ಚುನಾವಣಾ ಅಧಿಕಾರಿಗಳಿಗೆ ಆಯೋಗ ನಿರ್ದೇಶನ ನೀಡಿದೆ.

ದ್ವೇಷ ಭಾಷಣ ಪ್ರಕರಣ ಧರ್ಮ ಬೋಧಕ ಬಂಧನ

ಜುನಾಗಢ (ಪಿಟಿಐ): ದ್ವೇಷ ಭಾಷಣ ಆರೋಪದ ಮೇಲೆ ಮುಸ್ಲಿಂ ಧರ್ಮ ಬೋಧಕ ಮುಫ್ತಿ ಸಲ್ಮಾನ್ ಅಝರಿ ಅವರನ್ನು ಮುಂಬೈನಲ್ಲಿ ಬಂಧಿಸಲಾಗಿದ್ದು, ಗುಜರಾತ್‌ಗೆ ಕರೆದೊಯ್ಯಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಜುನಾಗಢ ನಗರದ 'ಬಿ' ಡಿವಿಷನ್ ಪೊಲೀಸ್ ಠಾಣೆಯ ಸನಿಹದ ಮೈದಾನದಲ್ಲಿ ಜ.31ರಂದು ನಡೆದ ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಮುಫ್ತಿ ಸಲ್ಮಾನ್ ಅಝರಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಧರ್ಮ ಬೋಧನೆ ಮತ್ತು ವ್ಯಸನ ಮುಕ್ತತೆಯ ಬಗ್ಗೆ ಪ್ರಚಾರ ಮಾಡಲಾಗುತ್ತದೆ ಎಂದು ಕಾರ್ಯಕ್ರಮದ ಆಯೋಜಕರು ಅನುಮತಿ ಪಡೆದಿದ್ದರು. ಆದರೆ, ಕಾರ್ಯಕ್ರಮದಲ್ಲಿ ಅಝರಿ ದ್ವೇಷ ಭಾಷಣ ಮಾಡಿದ್ದರು ಎಂದು ಆರೋಪಿಸಲಾಗಿತ್ತು. ಭಾಷಣದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ ಎಫ್‌ಐಆರ್ ದಾಖಲಾಗಿತ್ತು. ಕಾರ್ಯಕ್ರಮ ಆಯೋಜಕರಾದ ಮೊಹಮದ್ ಯೂಸುಫ್ ಮಾಲೇಕ್, ಅಜೀಂ ಹಬೀಬ್ ಒಡೇಡರ ಅವರನ್ನು ಐಪಿಸಿ 153ಬಿ (ವಿವಿಧ ಧಾರ್ಮಿಕ ಗುಂಪುಗಳ ನಡುವೆ ದ್ವೇಷ ಪ್ರಚೋದನೆ), 505 (2) (ಸಾರ್ವಜನಿಕ ಹಾನಿಗೆ ಕಾರಣವಾಗುವ ಹೇಳಿಕೆ ನೀಡುವುದು) ಅಡಿ ಪ್ರಕರಣ ದಾಖಲಾಗಿತ್ತು.

ಗುಜರಾತ್ ಪೊಲೀಸರು ಮುಂಬೈನಲ್ಲಿ ಅಝರಿ ಅವರನ್ನು ವಶಕ್ಕೆ ಪಡೆದ ನಂತರ ಅವರ ನೂರಾರು ಬೆಂಬಲಿಗರು ಘಟ್ಕೋಪರ್ ಠಾಣೆಯ ಮುಂದೆ ಜಮಾಯಿಸಿ ಅವರನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಒತ್ತಾಯಿಸಿದ್ದರು. ಗುಂಪನ್ನು ಚದುರಿಸಲು ಲಘು ಲಾಠಿ ಪ್ರಹಾರ ನಡೆಸಲಾಯಿತು .

ಬಿಜೆಪಿಯೇತರ ಸರ್ಕಾರಗಳಿರುವ ರಾಜ್ಯಗಳಿಗೆ ಜಿಎಸ್‌ಟಿ ಪಾಲಿನಲ್ಲಿ ಮೋಸ; ಆರೋಪ

ಅಧೀರ್– ನಿರ್ಮಲಾ ಏಟು–ಎದಿರೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಡುವೆ ಸೋಮವಾರ ನಡೆದ ಜಟಾಪಟಿಯ ವಿವರ ಇಲ್ಲಿದೆ.

ಅಧೀರ್: ಸಂವಿಧಾನದ ಪ್ರಕಾರವೇ ಜಿಎಸ್‌ಟಿ ಸೇರಿದಂತೆ ಎಲ್ಲ ತೆರಿಗೆ ಪಾಲುಗಳನ್ನು ಹಂಚಬೇಕಿದೆ. ನೀವು ಸಾಂವಿಧಾನಿಕ ಆದೇಶಕ್ಕೆ ಬದ್ಧವಾಗಿರಬೇಕು. ಬಿಜೆಪಿಯೇತರ ರಾಜ್ಯಗಳು ತಮ್ಮ ನ್ಯಾಯಬದ್ಧ ಪಾಲಿನಿಂದ ವಂಚಿತವಾಗುತ್ತಿವೆ ಎಂಬ ಭಾವನೆ ರಾಷ್ಟ್ರದಾದ್ಯಂತ ಹೆಚ್ಚುತ್ತಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಕರ್ನಾಟಕ ಸರ್ಕಾರವೇ ದೆಹಲಿಯಲ್ಲಿ ಧರಣಿ ನಡೆಸಲು ತೀರ್ಮಾನಿಸಿದೆ. ಕೇಂದ್ರ ಸರ್ಕಾರವು ತಾರತಮ್ಯದಿಂದ ಕಾರ್ಯನಿರ್ವಹಿಸುತ್ತಿದೆ ಎಂಬುದು ಕರ್ನಾಟಕದ ಆರೋಪ. ಇದಕ್ಕೆ ಕಾರಣವೇನು?

ನಿರ್ಮಲಾ: ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಗಳಿಗೆ ತೆರಿಗೆ ಪಾಲನ್ನು ಬಿಡುಗಡೆ ಮಾಡಲಾಗುತ್ತದೆ. ಸರಕು ಮತ್ತು ಸೇವಾ ತೆರಿಗೆಯಲ್ಲಿ ಎಸ್‌ಜಿಎಸ್‌ಟಿಯು ಸಂಪೂರ್ಣವಾಗಿ ರಾಜ್ಯಗಳಿಗೆ ಹೋಗುತ್ತದೆ. ಐಜಿಎಸ್‌ಟಿ ಕೇಂದ್ರಕ್ಕೆ ಸೇರುತ್ತದೆ. ಇದರಲ್ಲಿ ಬಹಳಷ್ಟು ಅಂತರರಾಜ್ಯ ಪಾವತಿ ಇರುತ್ತದೆ. ಇದನ್ನು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಿಯಮಿತವಾಗಿ ಪರಾಮರ್ಶೆ ನಡೆಸಲಾಗುತ್ತದೆ. ಹಣಕಾಸು ಆಯೋಗದ ಸಲಹೆಯಂತೆ ಸಿಜಿಎಸ್‌ಟಿಯನ್ನು ವಿಂಗಡಿಸಲಾಗಿದೆ. ರಾಜ್ಯಗಳಿಗೆ ತೆರಿಗೆ ಪಾಲು ಹಾಗೂ ಅನುದಾನ ಹಂಚಿಕೆಯೂ ಕೇಂದ್ರ ಸರ್ಕಾರಕ್ಕೂ ಸಂಬಂಧ ಇಲ್ಲ. ರಾಜ್ಯಗಳ ಪಾಲನ್ನು ಹಣಕಾಸು ಆಯೋಗ ನಿಗದಿ ಮಾಡಿದೆ. ಆಯೋಗವು ಎಲ್ಲ ರಾಜ್ಯಗಳಿಗೆ ಭೇಟಿ ನೀಡಿ ರಾಜ್ಯ ಸರ್ಕಾರಗಳ ಜತೆಗೆ ಸಮಾಲೋಚನೆ ನಡೆಸಿದ ನಂತರವೇ ವರದಿ ಸಲ್ಲಿಸಿದೆ. ಆ ಪ್ರಕಾರವೇ, ಅನುದಾನ ಬಿಡುಗಡೆಯಾಗುತ್ತಿದೆ.

ನಿರ್ದಿಷ್ಟ ರಾಜ್ಯವೊಂದನ್ನು ಇಷ್ಟಪಡುತ್ತೇನೆ ಅಥವಾ ರಾಜ್ಯವೊಂದರಲ್ಲಿ ರಾಜಕೀಯ ವಿರೋಧಿ ಪಕ್ಷವೊಂದು ಅಧಿಕಾರದಲ್ಲಿದೆ ಎಂಬ ಕಾರಣಕ್ಕೆ ನನ್ನ ಇಚ್ಛೆಗೆ ಅನುಸಾರ ತೀರ್ಮಾನ ತೆಗೆದುಕೊಳ್ಳಲು ಆಗದು. ನಾನು ಈ ಕೆಲಸವನ್ನು ಮಾಡಿಯೂ ಇಲ್ಲ. ಆ ಹಕ್ಕು ನನಗೆ ಇಲ್ಲ. ಹಣಕಾಸು ಆಯೋಗದ ಶಿಫಾರಸುಗಳನ್ನು ಶೇ 100ರಷ್ಟು ಅನುಸರಿಸಲೇಬೇಕು. ಎಲ್ಲ ಹಣಕಾಸು ಸಚಿವರು ಇದನ್ನೇ ಮಾಡಿದ್ದಾರೆ. ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ಆರೋಪ ರಾಜಕೀಯ ಪ್ರೇರಿತ. ಇದನ್ನು ವಿಷಾದದಿಂದಲೇ ಹೇಳುತ್ತಿದ್ದೇನೆ. ಯಾವುದೇ ಹಣಕಾಸು ಸಚಿವರು ಮಧ್ಯಪ್ರವೇಶಿಸಿ 'ನನಗೆ ಈ ರಾಜ್ಯ ಇಷ್ಟವಿಲ್ಲ. ಹಣ ಪಾವತಿ ಸ್ಥಗಿತಗೊಳಿಸಿ' ಎಂದು ನಿರ್ದೇಶನ ನೀಡಲು ಸಾಧ್ಯವಿಲ್ಲ.

ಅಧೀರ್: ನೀವ್ಯಾಕೆ ರಾಜ್ಯ ಸರ್ಕಾರಗಳೊಂದಿಗೆ ನೇರವಾಗಿ ಮಾತನಾಡಬಾರದು?

ನಿರ್ಮಲಾ: ಕರ್ನಾಟಕದ ವಿಷಯದಲ್ಲಿ ಆರು ತಿಂಗಳ ಹಿಂದಿನವರೆಗೆ ಎಲ್ಲವೂ ಚೆನ್ನಾಗಿತ್ತು ಹಾಗೂ ಈಗ ಸಮಸ್ಯೆಯಾಗಿದೆ ಎಂದು ಅಧೀರ್ ಪ್ರಸ್ತಾಪಿಸಿದ್ದಾರೆ. ಎಲ್ಲಿ ತಪ್ಪಾಗಿದೆ ಎಂಬುದರ ಕುರಿತು ನೀವೇ ಪರಾಮರ್ಶೆ ನಡೆಸಿ. ಖರ್ಚು ಮಾಡಬಾರದ ವಸ್ತುಗಳ ಮೇಲೆಲ್ಲ ಖರ್ಚು ಮಾಡಲು ಆರಂಭಿಸಿದ್ದೀರಾ. ಇದನ್ನು ನಾನು ಪ್ರಶ್ನಿಸುವುದಿಲ್ಲ. ಖರ್ಚು ಮಾಡಿ. ಆದರೆ, ನಮ್ಮ ಮೇಲೆ ಆರೋಪ ಮಾಡಬೇಡಿ. ನಿಯಮದ ಪ್ರಕಾರವೇ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ನಿಮ್ಮ ಬಜೆಟ್‌ನ ಹಣವನ್ನು ಸಮರ್ಥನೀಯವಲ್ಲದ ಕ್ಷೇತ್ರಗಳಿಗೆ ಖರ್ಚು ಮಾಡುತ್ತಿದ್ದರೆ, ಅದಕ್ಕೆ ನಾನು ಜವಾಬ್ದಾರಳಲ್ಲ. ಆತ್ಮಾವಲೋಕನ ಮಾಡಿಕೊಳ್ಳಿ.

ಹಣಕಾಸು ಆಯೋಗದವರು ರಾಜ್ಯಕ್ಕೆ ಬಂದಾಗ ನಿಮ್ಮ ಅವಶ್ಯಕತೆಗಳನ್ನು ಹಾಗೂ ಬೇಡಿಕೆಗಳನ್ನು ತಿಳಿಸಿ. ನಿಮ್ಮ ಸ್ಥಿತಿಯನ್ನು ಮನವರಿಕೆ ಮಾಡಿಕೊಡಿ. ಹಣಕಾಸು ಆಯೋಗವೇ ಅದನ್ನು ಸರಿಪಡಿಸಲಿ. ಅದು ಸಾಂವಿಧಾನಿಕ ಸಂಸ್ಥೆ.

ಅಧೀರ್: ನೀವ್ಯಾಕೆ ಸಭೆ ಕರೆಯಬಾರದು?

ನಿರ್ಮಲಾ: ಕರ್ನಾಟಕದ ಸಚಿವರೊಂದಿಗೆ ಕುಳಿತು ಸಮಾಲೋಚನೆ ನಡೆಸಿದ್ದೇನೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನನ್ನನ್ನು ಭೇಟಿ ಮಾಡಿ ಕಷ್ಟಗಳನ್ನು ಹೇಳಿಕೊಂಡರು. ಅವರಿಗೆ ವಾಸ್ತವಿಕ ಉತ್ತರ ನೀಡಿದ್ದೇನೆ.

ಅಧೀರ್: ನೀವು ಕಷ್ಟಗಳನ್ನು ಕೇಳುತ್ತೀರಿ. ಆದರೆ, ಏನೂ ಮಾಡುತ್ತಿಲ್ಲ. ಇದೇ ಸಮಸ್ಯೆ.

ನಿರ್ಮಲಾ: ಹಣಕಾಸು ಆಯೋಗ ಶಿಫಾರಸು ಮಾಡದೆ ನಾನು ಏನನ್ನೂ ಮಾಡಲು ಸಾಧ್ಯವಿಲ್ಲ. ನನಗೆ ವಿವೇಚನಾಧಿಕಾರ ಇಲ್ಲ. ಆಯೋಗದ ಶಿಫಾರಸಿನಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಇಲ್ಲ. ದಯವಿಟ್ಟು ಹಣಕಾಸು ಆಯೋಗದೊಂದಿಗೆ ಚರ್ಚಿಸಿ.

ಅಧೀರ್: ನೀವು ಔದಾರ್ಯ ತೋರಿ ಎಂದು ನಾವು ಕೇಳುತ್ತಿಲ್ಲ.

ನಿರ್ಮಲಾ: ನಾನು ಔದಾರ್ಯದ ಕುರಿತು ಮಾತನಾಡುತ್ತಿಲ್ಲ. ಹಣಕಾಸು ಆಯೋಗದ ಶಿಫಾರಸಿನ ಬಗ್ಗೆಯಷ್ಟೇ ಮಾತನಾಡಿದ್ದೇನೆ. ಆಯೋಗದ ಶಿಫಾರಸಿನ ಪ್ರಕಾರವೇ ನಡೆದುಕೊಳ್ಳುತ್ತಿದ್ದೇನೆ. ರಾಜ್ಯಗಳಿಗೆ ಭೇಟಿ ನೀಡಿ ಎಂದು ಅಧೀರ್ ಸಲಹೆ ನೀಡಿದ್ದಾರೆ. ನಾನು ರಾಜ್ಯಗಳಿಗೆ ಭೇಟಿ ಕೊಟ್ಟಿದ್ದೇನೆ. ನಾನೇನೂ ಮಾಡಿಲ್ಲ ಎಂಬುದು ಅವರ ಆರೋಪ. ನಾನು ಏನೂ ಮಾಡಲು ಸಾಧ್ಯವಿಲ್ಲ.

₹1.17 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಕರ್ನಾಟಕದಲ್ಲಿ 2023–24ನೇ ಆರ್ಥಿಕ ವರ್ಷದಲ್ಲಿ ಜನವರಿ ಅಂತ್ಯದ ವರೆಗೆ 1.17 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ಹಣಕಾಸು ಸಚಿವರು ತಿಳಿಸಿದರು.

2020–21ರಲ್ಲಿ ₹75,660 ಕೋಟಿ, 2021–22ರಲ್ಲಿ ₹95,926 ಕೋಟಿ ಹಾಗೂ 2022–23ರಲ್ಲಿ ₹1,22,822 ಕೋಟಿ ಸಂಗ್ರಹವಾಗಿತ್ತು ಎಂದು ಅವರು ಮಾಹಿತಿ ನೀಡಿದರು.

ಜಿಎಸ್‌ಟಿ ವಂಚನೆ ಪ್ರಕರಣ ಹೆಚ್ಚಳ: ರಾಜ್ಯದಲ್ಲಿ ಜಿಎಸ್‌ಟಿ ವಂಚನೆಯ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗಿವೆ. 2020–21ರಲ್ಲಿ 529, 2021–22ರಲ್ಲಿ 735, 2022–23ರಲ್ಲಿ 959 ಪ್ರಕರಣಗಳು ದಾಖಲಾಗಿದ್ದವು. ಈ ವರ್ಷ ಡಿಸೆಂಬರ್ ಅಂತ್ಯದ ವರೆಗೆ 673 ಪ್ರಕರಣಗಳು ಪತ್ತೆಯಾಗಿವೆ ಎಂದು ಅವರು ಹೇಳಿದರು.

ರಾಜ್ಯದ ಸಾಲ ₹5.97 ಲಕ್ಷ ಕೋಟಿ

2023–24ನೇ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರ ಪಡೆದ ಸಾಲ ₹5.97 ಲಕ್ಷ ಕೋಟಿಗೆ ಏರಿದೆ ಎಂದು ಸಚಿವರು ತಿಳಿಸಿದರು.

'2022ರಲ್ಲಿ ರಾಜ್ಯ ಸರ್ಕಾರದ ಸಾಲ ₹5.03 ಲಕ್ಷ ಕೋಟಿ ಇತ್ತು. 2023ರಲ್ಲಿ ₹5.35 ಲಕ್ಷ ಕೋಟಿಗೆ ಏರಿತ್ತು. ಅತೀ ಹೆಚ್ಚು ಸಾಲ ಪಡೆದ ರಾಜ್ಯಗಳ ಪಟ್ಟಿಯಲ್ಲಿ ಮಹಾರಾಷ್ಟ್ರ, ತಮಿಳುನಾಡು, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ ಮೊದಲ ನಾಲ್ಕು ಸ್ಥಾನದಲ್ಲಿವೆ. ಕರ್ನಾಟಕ ಐದನೇ ಸ್ಥಾನದಲ್ಲಿದೆ' ಎಂದು ಅವರು ವಿವರ ನೀಡಿದರು.

ತಾರತಮ್ಯಕ್ಕೆ 'ಕೈ' ಸರ್ಕಾರ ಆಕ್ರೋಶ

ಒಂದನೇ ಪುಟದಿಂದ...

'₹100 ಕ್ಕೆ ₹12 ಮಾತ್ರ ಸಿಗುತ್ತಿದೆ'

- ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಮೇಲೆ ರಾಜ್ಯದ ಜಿಎಸ್‌ಟಿ ಸಂಗ್ರಹದ ದರದಲ್ಲಿ ಗಮನಾರ್ಹ ಸಾಧನೆ (ಶೇ 17) ಮಾಡಿದ್ದೇವೆ. ಇಷ್ಟೆಲ್ಲ ಮಾಡಿದರೂ ಸಂಗ್ರಹವಾದ ಜಿಎಸ್‌ಟಿ ಮೊತ್ತದಲ್ಲಿ ರಾಜ್ಯಕ್ಕೆ ಶೇ 52ರಷ್ಟು ಮಾತ್ರ ಸಿಗುತ್ತಿದೆ. ಈ ವರ್ಷ ಸುಮಾರು ₹4 ಲಕ್ಷ ಕೋಟಿಗೂ ಹೆಚ್ಚು ತೆರಿಗೆ, ಸೆಸ್, ಸುಂಕ ರೂಪದಲ್ಲಿ ಸಂಗ್ರಹಿಸುತ್ತಿದೆ. ಆದರೆ, ನಮಗೆ ಕೇಂದ್ರ ನೀಡುತ್ತಿರುವುದು ಕೇವಲ ₹50,000 ಕೋಟಿಯಿಂದ ₹53,000 ಕೋಟಿ. ರಾಜ್ಯ ₹100 ಸಂಗ್ರಹಿಸಿ ಕೇಂದ್ರಕ್ಕೆ ಕೊಟ್ಟರೆ ಕರ್ನಾಟಕಕ್ಕೆ ವಾಪಸ್ ಕೊಡುವುದು ₹12ರಿಂದ ₹13 ಮಾತ್ರ
- 2018–19 ರಲ್ಲಿ ಕೇಂದ್ರ ಬಜೆಟ್‌ನ ಒಟ್ಟು ಗಾತ್ರ ₹24,42,213 ಕೋಟಿ ಇತ್ತು. ಆಗ ತೆರಿಗೆ ಪಾಲು ₹35,895 ಕೋಟಿ ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ ₹16,082 ಕೋಟಿ ಅನುದಾನ ಸಿಗುತ್ತಿತ್ತು. ಎರಡರಿಂದ ಒಟ್ಟಾರೆ ₹46,288 ಕೋಟಿಯಷ್ಟು ರಾಜ್ಯಕ್ಕೆ ಸಿಕ್ಕಿದೆ. 2023–24 ರ ಸಾಲಿನಲ್ಲಿ ಕೇಂದ್ರ ಬಜೆಟ್ ಗಾತ್ರ ₹45,03,097 ಕೋಟಿ. ಆದರೆ, ಈ ಬಾರಿ ಒಟ್ಟಾರೆ ₹50,257 ಮಾತ್ರ ಸಿಗುವ ಅಂದಾಜಿದೆ
- ಜಿಎಸ್‌ಟಿ ಅನುಷ್ಠಾನದಿಂದ ₹59,274 ಕೋಟಿ (2017ರಿಂದ 2024), 15ನೇ ಹಣಕಾಸು ಆಯೋಗದ ತೆರಿಗೆ ಪಾಲು ಹಂಚಿಕೆ ₹62,098 ಕೋಟಿ (2020ರಿಂದ 2025–26), ಸೆಸ್ ಮತ್ತು ಸರ್‌ಚಾರ್ಜ್ ಬಾಬ್ತಿನಿಂದ ₹55,000 ಕೋಟಿ (2017ರಿಂದ 2023–24), 15ನೇ ಹಣಕಾಸು ಆಯೋಗದ ವಿಶೇಷ ಅನುದಾನ ₹11,495 ಕೋಟಿ (2020ರಿಂದ 2021–22). ಒಟ್ಟು ₹1,87,867 ಕೋಟಿ ನಷ್ಟ ಆಗಿದೆ

'ಸಿದ್ದರಾಮಯ್ಯ ಅವರಿಂದಲೇ ರಾಜ್ಯಕ್ಕೆ ಅನ್ಯಾಯ'

ಪ್ರಧಾನಿ ನರೇಂದ್ರ ಮೋದಿ ಅವರ 10 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ₹2,82,791 ಕೋಟಿ ಹಣ ಬಂದಿದ್ದು, ಯುಪಿಎ ಅವಧಿಯಲ್ಲಿ (2004–14) ತೆರಿಗೆ ಮೂಲಕ ಕೇವಲ ₹81,795 ಕೋಟಿ ಬಂದಿತ್ತು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 15ನೇ ಹಣಕಾಸು ಆಯೋಗದಿಂದ ಕರ್ನಾಟಕಕ್ಕೆ ಅನ್ಯಾಯ ಆಗಲು ಮೂಲ ಪುರುಷ ಸಿದ್ದರಾಮಯ್ಯ ಅವರೇ ವಿನಃ ಬೇರೆ ಯಾರೂ ಅಲ್ಲ ಎಂದೂ ಆರೋಪಿಸಿದರು.

ಬೊಮ್ಮಾಯಿ ಹೇಳಿದ್ದೇನು?

15ನೇ ಹಣಕಾಸು ಆಯೋಗ ರಾಜ್ಯಕ್ಕೆ ಹಣ ಕಡಿಮೆ ನೀಡಿದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ. 15ನೇ ಹಣಕಾಸು ಆಯೋಗದ ಸಮಿತಿಯು ರಾಜ್ಯಕ್ಕೆ ಬಂದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರದ್ದೇ ಸರ್ಕಾರ ಇತ್ತು. ಇವರು ರಾಜ್ಯದ ಆರ್ಥಿಕ ಪರಿಸ್ಥಿತಿಯ ಚಿತ್ರಣ ಸರಿಯಾಗಿ ನೀಡದ ಕಾರಣ 15ನೇ ಹಣಕಾಸು ಆಯೋಗ ತೆರಿಗೆ ಪಾಲನ್ನು ಶೇ 4.7ರಿಂದ ಶೇ 3.6 ಕ್ಕೆ ಕಡಿಮೆ ಮಾಡಿತು. ಇದಕ್ಕೆ ಸಿದ್ದರಾಮಯ್ಯ ಅವರೇ ನೇರ ಕಾರಣ

- ಅಭಿವೃದ್ಧಿ ಅನುದಾನ ಯುಪಿಎ ಅವಧಿಯಲ್ಲಿ₹60,779 ಕೋಟಿ ಬಂದಿದ್ದರೆ, ನರೇಂದ್ರ ಮೋದಿ ಅವಧಿಯಲ್ಲಿ ₹2,08,882 ಕೋಟಿ ಬಿಡುಗಡೆಯಾಗಿದೆ. 15ನೇ ಹಣಕಾಸು ಆಯೋಗದ ಅವಧಿ ಇನ್ನೂ ಎರಡು ವರ್ಷ ಇದೆ. 2026ರ ವೇಳೆಗೆ ₹2.5 ಲಕ್ಷ ಕೋಟಿ ಮೀರಿ ತೆರಿಗೆ ಹಂಚಿಕೆ ಬರಲಿದೆ. ಇದು ಯುಪಿಎ ಅವಧಿಯಲ್ಲಿದ್ದ 14 ನೇ ಹಣಕಾಸು ಆಯೋಗದ ಶಿಫಾರಸಿಗಿಂತ ₹1,52,309 ಕೋಟಿ ಅಧಿಕ
- ಇದಲ್ಲದೇ ಕೇಂದ್ರದಿಂದ ರಾಜ್ಯಕ್ಕೆ ಬೇರೆ ಬೇರೆ ರೂಪದಲ್ಲಿ ಅನುದಾನ ಬರುತ್ತಿದೆ. ಸ್ವಾತಂತ್ರ್ಯ ಬಂದಾಗಿನಿಂದ 2014ರವರೆಗೆ ರಾಜ್ಯದಲ್ಲಿ ಕೇವಲ 6,000 ಕಿ.ಮೀ ಹೆದ್ದಾರಿ ಅಭಿವೃದ್ಧಿ ಆಗಿತ್ತು. ಮೋದಿ ಅವಧಿಯಲ್ಲಿ 13,500 ಕಿ.ಮೀ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯಾಗಿದೆ
- ರಾಜ್ಯದ ರೈಲ್ವೆಗೆ ಯುಪಿಎ ಅವಧಿಯ 10 ವರ್ಷದಲ್ಲಿ ₹835 ಕೋಟಿ ಬಂದಿದ್ದರೆ, ಎನ್‌ಡಿಎ ಅವಧಿಯಲ್ಲಿ ₹11,000 ಕೋಟಿ ಬಂದಿದೆ. 2023–24ನೇ ಬಜೆಟ್‌ನಲ್ಲಿ ₹7,524 ಕೋಟಿ ಹಂಚಿಕೆಯಾಗಿದೆ. ರೈಲ್ವೆ ವಿದ್ಯುದ್ದೀಕರಣ 1947ರಿಂದ 2014 ರವರೆಗೆ ರಾಜ್ಯದಲ್ಲಿ ಕೇವಲ 16 ಕಿ.ಮೀ ಆಗಿದ್ದರೆ, ಎನ್‌ಡಿಎ ಅವಧಿಯಲ್ಲಿ 3,265 ಕಿ.ಮೀ ಆಗಿದೆ
- ಅನ್ನಭಾಗ್ಯದ ಐದು ಕೆ.ಜಿ. ಅಕ್ಕಿ ನೀಡುತ್ತಿರುವುದೂ ಕೇಂದ್ರ ಸರ್ಕಾರವೇ. ಆದರೆ ಸಿದ್ದರಾಮಯ್ಯ ತಾವೇ ಅದನ್ನು ಕೊಡುತ್ತಿರುವುದಾಗಿ ಸುಳ್ಳು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ
- ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ₹5,300 ಕೋಟಿ ಘೋಷಿಸಿದೆ. ಕೇಂದ್ರದ ಹಣ ಬಿಡುಗಡೆ ಮಾಡಬೇಕಾದರೆ ರಾಜ್ಯ ಶೇ 50ರಷ್ಟು ಭರಿಸಬೇಕು. ರಾಜ್ಯ ಸರ್ಕಾರ ಈವರೆಗೆ ಒಂದು ಪೈಸೆ ಬಿಡುಗಡೆ ಮಾಡಿಲ್ಲ
- ರಾಜ್ಯ ಇತಿಹಾಸದಲ್ಲಿ ಅತಿ ಹೆಚ್ಚು ಸಾಲ ಮಾಡಿದ್ದು ಸಿದ್ದರಾಮಯ್ಯ ಅವಧಿಯಲ್ಲಿಯೇ. ಮುಂದೆಯೂ ಅವರು ಸಾಲ ಮಾಡಲಿದ್ದಾರೆ
- ಗ್ಯಾರಂಟಿ ಯೋಜನೆಯ ಯಶಸ್ಸಿನ ಬಗ್ಗೆ ಸಿದ್ದರಾಮಯ್ಯ ಶ್ವೇತ ಪತ್ರ ಹೊರಡಿಸಲಿ

'ಮೇ 10ರೊಳಗೆ ಭಾರತೀಯ ಸೇನೆ ವಾಪಸ್'

ಮಾಲೆ(ಪಿಟಿಐ): 'ದ್ವೀಪ ರಾಷ್ಟ್ರ ಮಾಲ್ದೀವ್ಸ್‌ನಲ್ಲಿ ನೆಲೆಗೊಂಡಿರುವ ಭಾರತೀಯ ಸೇನೆಯ ಮೊದಲ ತಂಡವನ್ನು ಮಾರ್ಚ್ 10ರೊಳಗೆ ದೇಶದಿಂದ ವಾಪಸ್ ಕಳುಹಿಸಲಾಗುವುದು' ಎಂದು ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಸೋಮವಾರ ಹೇಳಿದ್ದಾರೆ.

ಮೊಹಮ್ಮದ್ ಮುಯಿಜು

'ಪ್ರಸ್ತುತ ಎರಡು ವಾಯು ನೆಲೆಗಳ ನಿರ್ವಹಣೆ ನೋಡಿಕೊಳ್ಳುತ್ತಿರುವ ಉಳಿದೆರಡು ತಂಡಗಳನ್ನು ಮೇ 10ರೊಳಗೆ ಭಾರತಕ್ಕೆ ವಾಪಸ್ ಕಳುಹಿಸಲಾಗುವುದು' ಎಂದು ತಿಳಿಸಿದ್ದಾರೆ.

ಸಂಸತ್ತಿನಲ್ಲಿ ಮಾಡಿದ ಚೊಚ್ಚಲ ಭಾಷಣದಲ್ಲಿ ಈ ವಿಷಯ ತಿಳಿಸಿದ ಮುಯಿಜು, 'ಹಿಂದಿನ ಸರ್ಕಾರ ಭಾರತದೊಂದಿಗೆ ಮಾಡಿಕೊಂಡಿರುವ 100ಕ್ಕೂ ಅಧಿಕ ದ್ವಿಪಕ್ಷೀಯ ಒಪ್ಪಂದಗಳ ಬಗ್ಗೆ ನಮ್ಮ ಸರ್ಕಾರ ಪುನರ್ ಪರಿಶೀಲನೆ ನಡೆಸಲಿದೆ' ಎಂದರು.

ಕಳೆದ ನವೆಂಬರ್ 17ರಂದು ಮಾಲ್ದೀವ್ಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಮುಯಿಜು ಅವರು, ಸೇನೆಯನ್ನು ಮಾರ್ಚ್ 15ರ ಒಳಗೆ ವಾಪಸ್ ಕರೆಸಿಕೊಳ್ಳುವಂತೆ ಭಾರತಕ್ಕೆ ಮನವಿ ಮಾಡಿದ್ದರು. ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ಬಳಿಕ ಭಾರತದ ಸೇನೆಯನ್ನು ವಾಪಸ್ ಕಳುಹಿಸುವ ವಿಚಾರದಲ್ಲಿ ಅವರು ದೃಢ ನಿಲುವು ತಾಳಿದ್ದು, ಚೀನಾ ಪರ ಹೆಚ್ಚಿನ ಒಲವು ತೋರುತ್ತಿರುವುದು ಕಂಡುಬರುತ್ತಿದೆ.

ಚಂಡೀಗಢ ಮೇಯರ್ ಚುನಾವಣೆ ಪ್ರಜಾತಂತ್ರದ ಕೊಲೆ -'ಸುಪ್ರೀಂ'

ಒಂದನೇ ಪುಟದಿಂದ....

ಆಗ ಪೀಠವು, 'ಅವರು (ಚುನಾವಣಾ ಅಧಿಕಾರಿ) ಕ್ಯಾಮೆರಾವನ್ನು ನೋಡುತ್ತಿರುವುದು ಏಕೆ? ಇದು ಪ್ರಜಾತಂತ್ರದ ಅಣಕ. ಚುನಾವಣಾ ಅಧಿಕಾರಿಯು ಪ್ರಜಾತಂತ್ರದ ಕೊಲೆ ಮಾಡಿದ್ದಾರೆ. ಇದು ದಿಗಿಲು ಮೂಡಿಸುವಂತೆ ಇದೆ' ಎಂದು ಹೇಳಿತು.

'ಇದು ಚುನಾವಣಾ ಅಧಿಕಾರಿ ನಡೆದುಕೊಳ್ಳುವ ರೀತಿಯೇ? (ಮತಪತ್ರದಲ್ಲಿ) ಕೆಳಗಡೆ ಗುರುತು ಇದ್ದಲ್ಲಿ ಅವರು ಅದನ್ನು ಮುಟ್ಟುವುದಿಲ್ಲ. ಗುರುತು ಮೇಲೆ ಇದ್ದರೆ, ಅದನ್ನು ಅವರು ತಿದ್ದುತ್ತಾರೆ... ಸುಪ್ರೀಂ ಕೋರ್ಟ್ ತಮ್ಮನ್ನು ಗಮನಿಸುತ್ತಿದೆ ಎಂಬುದನ್ನು ಚುನಾವಣಾ ಅಧಿಕಾರಿಗೆ ತಿಳಿಸಿ' ಎಂದು ಪೀಠ ಹೇಳಿತು. ಪ್ರಜಾತಂತ್ರವನ್ನು ಈ ರೀತಿಯಲ್ಲಿ ಹತ್ಯೆ ಮಾಡಲು ಕೋರ್ಟ್ ಅವಕಾಶ ನೀಡುವುದಿಲ್ಲ ಎಂದು ಕೂಡ ಹೇಳಿತು.

ಕುಲದೀಪ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಕಳೆದ ವಾರ ನೋಟಿಸ್ ಜಾರಿಗೆ ಮಾತ್ರ ಆದೇಶಿಸಿತ್ತು. ಮೇಯರ್ ಚುನಾವಣೆಯಲ್ಲಿ ಸೋನಕರ್ ಅವರು 16 ಮತ ಪಡೆದಿದ್ದರು. ಎಎಪಿ–ಕಾಂಗ್ರೆಸ್ ಅಭ್ಯರ್ಥಿಯು 12 ಮತ ಪಡೆದಿದ್ದರು. ಎಂಟು ಮತಗಳು ಅಸಿಂಧು ಎಂದು ಚುನಾವಣಾ ಅಧಿಕಾರಿ ಹೇಳಿದ್ದರು.

'400 ಸ್ಥಾನ ಗೆದ್ದು ಮತ್ತೆ ಅಧಿಕಾರಕ್ಕೆ'

ಒಂದನೇ ಪುಟದಿಂದ...

'ನಾವು ದೊಡ್ಡ ದೊಡ್ಡ ಗುರಿಗಳನ್ನು ಇಟ್ಟುಕೊಂಡು ಮುನ್ನಡೆಯುತ್ತಿರುವುದನ್ನು ಜಗತ್ತು ಬೆರಗಿನಿಂದ ನೋಡುತ್ತಿದೆ. ದೇಶದಲ್ಲಿ ನಡೆಯುತ್ತಿರುವ ಅಭಿವೃದ್ಧಿಯ ವೇಗವನ್ನು ಕಾಂಗ್ರೆಸ್‌ಗೆ ಊಹಿಸಲೂ ಸಾಧ್ಯವಿಲ್ಲ. 80 ಲಕ್ಷ ಗಟ್ಟಿಮುಟ್ಟಾದ ಮನೆಗಳು ಸೇರಿದಂತೆ ಬಡವರಿಗೆ 4 ಕೋಟಿ ಮನೆಗಳನ್ನು ಕಟ್ಟಿಸಿದ್ದೇವೆ. ಈ ಕೆಲಸ ಮಾಡಬೇಕಾದರೆ ಕಾಂಗ್ರೆಸ್‌ಗೆ 100 ವರ್ಷಗಳೇ ಬೇಕಾಗುತ್ತಿದ್ದವು' ಎಂದು ಕುಟುಕಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 'ಮೊಹಬ್ಬತ್ ಕಿ ದುಕಾನ್' (ಪ್ರೀತಿಯ ಅಂಗಡಿ) ಘೋಷವಾಕ್ಯಕ್ಕೆ ತಿರುಗೇಟು ನೀಡಿದ ಪ್ರಧಾನಿ, 'ಒಂದೇ ಬಗೆಯ ಉತ್ಪನ್ನವನ್ನು ಪದೇ ಪದೇ ಪರಿಚಯಿಸುತ್ತಿರುವ ಕಾರಣ ಕಾಂಗ್ರೆಸ್ ತನ್ನ ಅಂಗಡಿಯನ್ನು ಶೀಘ್ರದಲ್ಲೇ ಮುಚ್ಚಲಿದೆ' ಎಂದರು.

ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರು ಮತ್ತು ಇಂದಿರಾ ಗಾಂಧಿ ಅವರ ಹೇಳಿಕೆಗಳನ್ನು ಉಲ್ಲೇಖಿಸಿದ ಪ್ರಧಾನಿ, 'ಭಾರತೀಯರು ಸೋಮಾರಿಗಳು ಮತ್ತು ದಡ್ಡರು ಎಂಬುದು ಕಾಂಗ್ರೆಸ್ ನಾಯಕರ ನಿಲುವಾಗಿತ್ತು' ಎಂದು ಟೀಕಿಸಿದರು. 'ವಿರೋಧ ಪಕ್ಷದ ಹಲವರು ಭರವಸೆ ಕಳೆದುಕೊಂಡಿರುವುದನ್ನು ನಾನು ಗಮನಿಸಿದ್ದೇನೆ. ಚುನಾವಣೆಯನ್ನು ಎದುರಿಸುವ ಶಕ್ತಿಯನ್ನೂ ಕಳೆದುಕೊಂಡಿದ್ದಾರೆ. ಲೋಕಸಭೆಗೆ ಬರುವ ಬದಲು ರಾಜ್ಯಸಭೆಗೆ ಹೋಗಲು ಬಯಸುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ಅಧಿಕಾರಕ್ಕೆ ಬಂದರೆ ಮೀಸಲಾತಿ ಮಿತಿ ರದ್ದು'

ರಾಂಚಿ (ಪಿಟಿಐ): ಲೋಕಸಭಾ ಚುನಾವಣೆಯ ನಂತರ 'ಇಂಡಿಯಾ' ಮೈತ್ರಿಕೂಟವು ಕೇಂದ್ರದಲ್ಲಿ ಸರ್ಕಾರ ರಚಿಸಿದರೆ ರಾಷ್ಟ್ರದಾದ್ಯಂತ ಜಾತಿ ಗಣತಿ ನಡೆಸಲಾಗುತ್ತದೆ ಮತ್ತು ಮೀಸಲಾತಿಗೆ ಇರುವ ಶೇಕಡ 50ರ ಮಿತಿಯನ್ನು ತೆಗೆಯಲಾಗುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ಅವರು ಇಲ್ಲಿ ನಡೆದ ರ‍್ಯಾಲಿಯಲ್ಲಿ ನೀಡಿದರು.

ತಿರುಮಲ: 'ಧಾರ್ಮಿಕ ಸದಸ್'ಗೆ ತೆರೆ • ಮತಾಂತರ ತಡೆಯುವ ನಿರ್ಣಯ

'ಪವಿತ್ರಜಲ ಸಿಂಪಡಿಸಿ ಹಿಂದೂ ಧರ್ಮಕ್ಕೆ ಸ್ವಾಗತ'

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಹಿಂದೂ ಸನಾತನ ಧರ್ಮದ ಬಗ್ಗೆ ಒಲವಿದ್ದು, ಹಿಂದೂ ಧರ್ಮ ಸ್ವೀಕರಿಸಲು ಬಯಸುವವರಿಗೆ, ಪವಿತ್ರಜಲ ಸಿಂಪಡಿಸಿ ಹಿಂದೂ ಧರ್ಮ ಸೇರಲು ತಿರುಪತಿ ತಿರುಮಲ ದೇವಸ್ಥಾನಮ್ (ಟಿಟಿಡಿ) ಸಹಕರಿಸುತ್ತದೆ' ಎಂದು ಅಧ್ಯಕ್ಷ ಭೂಮನ ಕರುಣಾಕರ ರೆಡ್ಡಿ ಸೋಮವಾರ ಹೇಳಿದರು.

ತಿರುಮಲದ 'ಆಸ್ಥಾನ ಮಂಟಪಮ್'ನಲ್ಲಿ ನಡೆದ ಮೂರು ದಿನಗಳ ಹಿಂದೂ ಧಾರ್ಮಿಕ ಸಮಾವೇಶ 'ಧಾರ್ಮಿಕ ಸದಸ್'ನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಹಿಂದೂ ಧರ್ಮ ಪಾಲಿಸಲು ಇಚ್ಛಿಸುವ ಅನ್ಯಧರ್ಮೀಯರಿಗೆ ಹಿಂದೂ ಧರ್ಮದ ಪದ್ಧತಿಗಳು, ಸಂಪ್ರದಾಯ ಮತ್ತು ಆಚರಣೆಗಳ ಕುರಿತು ತರಬೇತಿ ನೀಡಲಾಗುವುದು. ಈ ಕಾರ್ಯವನ್ನು ವೆಂಕಟೇಶ್ವರ ಸ್ವಾಮಿ ಸನ್ನಿಧಾನದಲ್ಲಿ, ಪವಿತ್ರಜಲ ಸಿಂಪಡಿಸುವ ಮೂಲಕ ಆರಂಭಿಸಲಾಗುವುದು' ಎಂದು ಹೇಳಿದರು.

'ದೊಡ್ಡವರಿಂದ ಚಿಕ್ಕವರಿಗೂ ಅರ್ಥ ಆಗುವಂತೆ ಇತಿಹಾಸ ಮತ್ತು ಪುರಾಣಗಳನ್ನು ಪ್ರಚುರಪಡಿಸಬೇಕು. ಇದಕ್ಕಾಗಿ ನಾವು ಧರ್ಮ ಪ್ರಚಾರಕರಿಗೆ ತರಬೇತಿ ನೀಡಬೇಕು' ಎಂದರು.

'ಕೆಲ ಜಾತಿಗಳ ಕುರಿತು ಕೆಲವರು ತಾರತಮ್ಯ ಧೋರಣೆ ಹೊಂದಿರುತ್ತಾರೆ. ಇದು ಧಾರ್ಮಿಕ ಮತಾಂತರಕ್ಕೆ ಕಾರಣವಾಗಿದೆ. ಹೀಗಾಗಿ, ಗಿರಿಜನರು ಮತ್ತು ಹರಿಜನರು ವಾಸಿಸುವ ಪ್ರದೇಶಗಳಲ್ಲಿ ಹೆಚ್ಚುಹೆಚ್ಚು ಧಾರ್ಮಿಕ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಮೀನುಗಾರ ಸಮುದಾಯಗಳು, ಬುಡಕಟ್ಟು ಸಮುದಾಯಗಳು, ಹರಿಜನರು ವಾಸಿಸುವ ಸ್ಥಳಗಳಲ್ಲಿ ದೇವಸ್ಥಾನಗಳ ನಿರ್ಮಾಣ ದೊಡ್ಡ ಮಟ್ಟದಲ್ಲಿ ನಡೆಯಬೇಕು' ಎಂಬ ನಿರ್ಣಯವನ್ನು ಸಮಾವೇಶದಲ್ಲಿ ಕೈಗೊಳ್ಳಲಾಗಿದೆ ಎಂದು ರೆಡ್ಡಿ ಹೇಳಿದರು.

'ಶ್ರೀವಾಣಿ ಟ್ರಸ್ಟ್ ಸಹಯೋಗದೊಂದಿಗೆ ಟಿಟಿಡಿಯು ಈಗಾಗಲೇ ಹಿಂದುಳಿದ ವರ್ಗಗಳ ವಾಸಿಸುವ ಹಲವು ಪ್ರದೇಶಗಳಲ್ಲಿ ಸಾವಿರಾರು ದೇವಸ್ಥಾನಗಳನ್ನು ನಿರ್ಮಿಸಿದೆ. ಗೋಮಾತೆ ರಕ್ಷಿಸಲು ಗೋ ಸಂರಕ್ಷಣಾ ಚಟುವಟಿಕೆಗಳನ್ನೂ ವ್ಯಾಪಕವಾಗಿ ಹಮ್ಮಿಕೊಂಡಿದೆ' ಎಂದರು.

ನಿರ್ಣಯ: ತಮ್ಮ ಸುತ್ತಲಿನ ಪರಿಸರದ ಕಾರಣಕ್ಕಾಗಿ ಮತ್ತು ಸಂಪತ್ತಿನ ಪ್ರಲೋಭನೆಯಿಂದ ಮೇಲ್ವರ್ಗದ ಹಲವು ಯುವಕರು ಹಿಂದೂ ಧರ್ಮ ತೊರೆಯುತ್ತಿದ್ದಾರೆ. ಇಂಥ ಪರಿಸ್ಥಿತಿಗೆ ಅಂತ್ಯಹಾಡಲು ತರಬೇತಿ ಕೇಂದ್ರಗಳನ್ನು ತೆರೆಯಬೇಕು ಮತ್ತು ಮತಾಂತರ ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ಸಮಾವೇಶ ಮುಕ್ತಾಯವಾಯಿತು.

ಸಮಾವೇಶದಲ್ಲಿ ಅಂಗೀಕಾರವಾದ ನಿರ್ಣಯಗಳನ್ನು ಕರುಣಾಕರ ರೆಡ್ಡಿ ಅವರು ಮಂಡಿಸಿದರು. ಸಮಾವೇಶದಲ್ಲಿ ಹಾಜರಿದ್ದ ದೇಶದ ವಿವಿಧ ಭಾಗಗಳ ಮಠಾಧೀಶರು ನೀಡಿದ್ದ ಸಲಹೆಗಳನ್ನೂ ನಿರ್ಣಯದಲ್ಲಿ ಸೇರಿಸಲಾಗಿದೆ.

ಸ್ವಇಚ್ಛೆಯಿಂದ ಹಿಂದೂ ಧರ್ಮವನ್ನು ಸೇರಲು ಬಯಸುವ ಅನ್ಯಧರ್ಮೀಯರನ್ನು ಸ್ವಾಗತಿಸಬೇಕು ಎಂಬ ವಿಚಾರವು ಈ ಸಮಾವೇಶದಲ್ಲಿ ಹೆಚ್ಚು ಚರ್ಚೆಗೆ ಒಳಗಾಯಿತು. ಜತೆಗೆ, ಹಿಂದೂ ಧರ್ಮವನ್ನು ಹೇಗೆ ಪ್ರಚುರ ಪಡಿಸಬೇಕು ಮತ್ತು ಹಿಂದೂಗಳ ಮತಾಂತರವನ್ನು ಹೇಗೆ ತಪ್ಪಿಸಬೇಕು ಎಂಬ ವಿಷಯಗಳು ಮಹತ್ವ ಪಡೆದವು.

ತಿರುಮಲದಲ್ಲಿ ನಡೆದ 'ಧಾರ್ಮಿಕ ಸದಸ್'ನ ಸಮಾರೋಪ ಕಾರ್ಯಕ್ರಮದಲ್ಲಿ ಟಿಟಿಡಿ ಮುಖ್ಯಸ್ಥ ಭೂಮನ ಕರುಣಾಕರ ರೆಡ್ಡಿ ಅವರು ಮಾತನಾಡಿದರು. ದೇಶದ ವಿವಿಧ ಮಠಗಳ ಮಠಾಧೀಶರು ಭಾಗವಹಿಸಿದ್ದರು –ಪಿಟಿಐ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಪ್ರೀತಿಯು ಯಾವುದೇ ಅಡಿಪಾಯದ ಮೇಲೆ ನಿಂತಿರುವುದಿಲ್ಲ. ಅದು ಆದಿ ಮತ್ತು ಅಂತ್ಯವಿಲ್ಲದ ಸಮುದ್ರದಂತೆ.

-ರೂಮಿ

ಕಡತ ವಿಲೇವಾರಿಗೆ ಕಾಲಮಿತಿ ಇರಲಿ ವಿಳಂಬ ಧೋರಣೆ ಅಕ್ಷಮ್ಯ

ಆಡಳಿತ ವ್ಯವಸ್ಥೆಯ ಯಾವುದೇ ಹಂತದಲ್ಲಿ ವಿಳಂಬಕ್ಕೆ ಅವಕಾಶವಿಲ್ಲದಂತೆ ಕಡತ ವಿಲೇವಾರಿ ಸಾಧ್ಯವಾದರೆ ಭ್ರಷ್ಟಾಚಾರದ ನಿಯಂತ್ರಣ ಮತ್ತು ಜನಸ್ನೇಹಿ ಆಡಳಿತಕ್ಕೆ ಅನುಕೂಲವಾಗುತ್ತದೆ. ಕಡತ ವಿಲೇವಾರಿ ತ್ವರಿತಗತಿಯಲ್ಲಿ ಆಗುತ್ತಿದೆ ಎಂದಾದರೆ, ಆಡಳಿತ ಚುರುಕಾಗಿದೆ ಎಂದರ್ಥ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 1.37 ಲಕ್ಷಕ್ಕೂ ಹೆಚ್ಚು ಕಡತಗಳು ವಿಲೇವಾರಿಗೆ ಬಾಕಿ ಉಳಿದಿವೆ. ಈ ವಿಷಯದ ಬಗ್ಗೆ ಸಂಪುಟ ಸಭೆಯಲ್ಲೂ ಚರ್ಚೆ ನಡೆದಿದೆ. ರಾಜ್ಯದ ನಗರ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು ಸ್ಥಳೀಯ ಆಡಳಿತದ ಹೊಣೆ ನಿಭಾಯಿಸುವ ನಗರಾಭಿವೃದ್ಧಿ ಇಲಾಖೆಯಲ್ಲಿ 16,155 ಕಡತಗಳು ವಿಲೇವಾರಿಗೆ ಬಾಕಿ ಉಳಿದಿವೆ. ಈ ವಿಚಾರದಲ್ಲಿ 39 ಇಲಾಖೆಗಳ ಪೈಕಿ ನಗರಾಭಿವೃದ್ಧಿ ಇಲಾಖೆಯು ತೀರಾ ಹಿಂದುಳಿದಿರುವುದನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸಂಪುಟ ಸಭೆಯಲ್ಲಿ ಮಂಡಿಸಿರುವ ಅಂಕಿಅಂಶಗಳು ತಿಳಿಸುತ್ತವೆ. ಕಂದಾಯ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗೃಹ, ವಾಣಿಜ್ಯ ಮತ್ತು ಕೈಗಾರಿಕೆ, ಲೋಕೋಪಯೋಗಿ ಇಲಾಖೆಗಳು ಬೃಹತ್ ಪ್ರಮಾಣದ ಕಡತಗಳ ರಾಶಿಯನ್ನು ಬಾಕಿ ಇರಿಸಿಕೊಂಡಿವೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದು ಎಂಟು ತಿಂಗಳು ಕಳೆದಿದೆ. ಈ ಅವಧಿಯಲ್ಲಿ ಆಡಳಿತವು ಚುರುಕು ಪಡೆದಿಲ್ಲ ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಈ ವಿಳಂಬ ಧೋರಣೆಯು ರಾಜ್ಯದ ಅಭಿವೃದ್ಧಿಗೆ ತೊಡರುಗಾಲಾಗಿ ಪರಿಣಮಿಸಿದೆ. ಇದನ್ನು ಹೀಗೆಯೇ ಮುಂದುವರಿಯಲು ಬಿಡಬಾರದು.

ಬೃಹತ್ ಪ್ರಮಾಣದಲ್ಲಿ ಕಡತಗಳು ಬಾಕಿ ಉಳಿದಿರುವುದಕ್ಕೆ ಸಚಿವರು ಮತ್ತು ಅಧಿಕಾರಿಗಳು ಸಮಾನ ಹೊಣೆಗಾರರು

ಭೌತಿಕ ಸ್ವರೂಪದ ಕಡತ ವಿಲೇವಾರಿಯಲ್ಲಿ ಅಧಿಕಾರಿಗಳು, ಸಿಬ್ಬಂದಿ ಉದ್ದೇಶಪೂರ್ವಕ ವಿಳಂಬ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂಬ ಕಾರಣಕ್ಕಾಗಿ ತಂತ್ರಜ್ಞಾನ ಆಧಾರಿತ ಇ-ಆಫೀಸ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯ ಮೂಲಕ ಸಂಪೂರ್ಣವಾಗಿ ಕಡತ ವಿಲೇವಾರಿ ಮಾಡುವ ಪ್ರಕ್ರಿಯೆ ಎಲ್ಲ ಇಲಾಖೆಗಳಲ್ಲೂ ಇನ್ನೂ ಆರಂಭವಾಗಿಲ್ಲ. ಈಗ ಭೌತಿಕ ಸ್ವರೂಪದ (ಎಫ್‌ಎಂಎಸ್) 43,404 ಮತ್ತು ಇ-ಆಫೀಸ್‌ನಲ್ಲಿ 94,492 ಕಡತಗಳು ಬಾಕಿ ಇವೆ. ಇ-ಆಫೀಸ್ ವ್ಯವಸ್ಥೆಯಲ್ಲೂ ವಿಳಂಬ ಧೋರಣೆ ಮುಂದುವರಿದಿರುವುದಕ್ಕೆ ಈ ಅಂಕಿ ಅಂಶಗಳು ಸಾಕ್ಷ್ಯ ಒದಗಿಸುತ್ತವೆ. ವಿಳಂಬಕ್ಕೆ ಅವಕಾಶ ಇಲ್ಲದಂತೆ ನಾಗರಿಕರಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಸರ್ಕಾರದ ಸೇವೆಗಳನ್ನು ಒದಗಿಸುವುದಕ್ಕಾಗಿ 'ಸಕಾಲ' ಕಾಯ್ದೆ ಜಾರಿಯಲ್ಲಿದೆ. ಎಲ್ಲ ಇಲಾಖೆಗಳ ಬಹುತೇಕ ಸೇವೆಗಳನ್ನು ಇದರ ವ್ಯಾಪ್ತಿಗೆ ತರಲಾಗಿದೆ. ಆದರೆ, ಅಧಿಕಾರಿಗಳು ಯಾವ ಭೀತಿಯೂ ಇಲ್ಲದೆ ಕಡತಗಳನ್ನು ದೀರ್ಘ ಕಾಲ ಬಾಕಿ ಇರಿಸಿಕೊಂಡು ಜನರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದ್ದಾರೆ.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂಬ ದೂರನ್ನೇ ಚುನಾವಣಾ ಪ್ರಚಾರದ ಪ್ರಮುಖ ಅಸ್ತ್ರ ಮಾಡಿಕೊಂಡ ಕಾಂಗ್ರೆಸ್ ಪಕ್ಷವು ಅಧಿಕಾರದ ಗದ್ದುಗೆ ಹಿಡಿದಿದೆ. ಆದರೆ, ಸರ್ಕಾರದ ಅಧಿಕಾರದ ಚುಕ್ಕಾಣಿಯನ್ನು ಹಿಡಿದವರು ಬದಲಾದರೂ ಅಧಿಕಾರಿಗಳ ಕಾರ್ಯವೈಖರಿಯಲ್ಲಿ ಬದಲಾವಣೆ ಆಗಿಲ್ಲ ಎಂಬುದನ್ನು ಕಡತ ವಿಲೇವಾರಿಯಲ್ಲಿನ ವಿಳಂಬ ಧೋರಣೆಯು ಸಾಬೀತುಪಡಿಸುತ್ತದೆ. ಅರ್ಜಿಗಳನ್ನು, ಕಡತಗಳನ್ನು ದೀರ್ಘ ಕಾಲ ಬಾಕಿ ಇರಿಸಿಕೊಂಡು ಜನರನ್ನು ಸತಾಯಿಸಿ, ಅವರು ಹತಾಶರಾಗುವಂತೆ ಮಾಡುವುದು ಸರ್ಕಾರಿ ನೌಕರರ ಚಾಣಾಕ್ಷ ತಂತ್ರ. ಆ ಮೂಲಕ, ಲಂಚ ಕೊಡುವುದು ಅನಿವಾರ್ಯ ಎಂಬ ಸ್ಥಿತಿಯನ್ನು ಸೃಷ್ಟಿಸುತ್ತಾರೆ. ಬೃಹತ್ ಪ್ರಮಾಣದಲ್ಲಿ ಕಡತಗಳು ಬಾಕಿ ಉಳಿದಿರುವುದಕ್ಕೆ ಸಚಿವರು ಮತ್ತು ಅಧಿಕಾರಿಗಳು ಸಮಾನ ಹೊಣೆಗಾರರು. ನಿಯಮಿತವಾಗಿ ಇಲಾಖಾ ಅಧಿಕಾರಿಗಳ ಸಭೆ ನಡೆಸಿ, ಸಚಿವರು ನಿಗಾ ವಹಿಸಿದ್ದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಸರ್ಕಾರಿ ನೌಕರರ ವರ್ಗಾವಣೆ, ಕಾಮಗಾರಿಗಳ ಗುತ್ತಿಗೆ ಸೇರಿದಂತೆ 'ಲಾಭದಾಯಕ' ಎನಿಸಿದ ಕಡತಗಳಿಗೆ ಎಲ್ಲ ಇಲಾಖೆಗಳಲ್ಲೂ ಶರವೇಗದಲ್ಲಿ ಮುಕ್ತಿ ದೊರಕುತ್ತದೆ. ಅದೇ ಮಾದರಿಯನ್ನು ಉಳಿದ ಕಡತಗಳಿಗೂ ಏಕೆ ಅನ್ವಯಿಸುವುದಿಲ್ಲ ಎಂಬ ಪ್ರಶ್ನೆಗೆ ಉತ್ತರ ನೀಡಬೇಕಾದ ಹೊಣೆಗಾರಿಕೆ ಅಧಿಕಾರದ ಚುಕ್ಕಾಣಿ ಹಿಡಿದವರ ಮೇಲಿದೆ. ಬಾಕಿ ಇರುವ ಕಡತಗಳಲ್ಲಿ ಶೇಕಡ 10ರಷ್ಟನ್ನು ಈ ತಿಂಗಳ ಅಂತ್ಯದೊಳಗೆ ವಿಲೇವಾರಿ ಮಾಡುವಂತೆ ಮುಖ್ಯ ಕಾರ್ಯದರ್ಶಿ ಗಡುವು ನೀಡಿದ್ದಾರೆ. ಸರ್ಕಾರದ ಕ್ರಮವು ಇಷ್ಟಕ್ಕೆ ಸೀಮಿತ ಆಗಬಾರದು. ಗ್ರಾಮಗಳಿಂದ ವಿಧಾನಸೌಧದವರೆಗೆ ಎಲ್ಲ ಹಂತಗಳಲ್ಲೂ ಕಡತ ವಿಲೇವಾರಿ ಮೇಲೆ ನಿಗಾ ಇಡುವಂತಹ ಬಿಗಿಯಾದ ವ್ಯವಸ್ಥೆ ರೂಪಿಸಬೇಕು. ದುರುದ್ದೇಶದಿಂದ ವಿಳಂಬ ಮಾಡುವವರನ್ನು ಗುರುತಿಸಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಸಂಬಂಧಿಸಿದ ಇಲಾಖೆಗಳ ಸಚಿವರನ್ನೂ ಉತ್ತರದಾಯಿಗಳನ್ನಾಗಿ ಮಾಡಬೇಕು. ಕಡತಗಳನ್ನು ಬಾಕಿ ಇರಿಸಿಕೊಂಡು ಜನಹಿತಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರ ವಿರುದ್ಧ ಚಾಟಿ ಬೀಸುವ ಕೆಲಸವನ್ನು ಮುಖ್ಯಮಂತ್ರಿಯವರೇ ಖುದ್ದಾಗಿ ಕೈಗೆತ್ತಿಕೊಂಡರಷ್ಟೇ ಬದಲಾವಣೆ ಸಾಧ್ಯ.

ದಿನದ ಟ್ವೀಟ್

... ಗಳ ಇರಿಯುವವರು

ಒಂದೇ ಕೋವಿಡ್ ಕೇರ್ ಸೆಂಟರ್‌ಗೆ ಬಿಬಿಎಂಪಿ ಎರಡು ಬಾರಿ ಹಣ ನೀಡಿರುವುದು ಲೆಕ್ಕಪರಿಶೋಧನೆಯಿಂದ ಬಹಿರಂಗಗೊಂಡಿದೆ. ನಮ್ಮ ರಾಜಕಾರಣಿಗಳಿಗೆ ಪ್ರತಿಯೊಂದು ವಿಪತ್ತೂ ಒಂದು ಅವಕಾಶದಂತೆ. ತಮ್ಮ ಪಕ್ಷವೇ ಅಧಿಕಾರದಲ್ಲಿದ್ದಾಗ ಇಂತಹ ವಂಚನೆ ಪ್ರಕರಣಗಳು ನಡೆದಿದ್ದರೂ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಪದೇಪದೇ ಪ್ರಸ್ತಾಪಿಸಿದ ಪ್ರಕರಣ ಇದೇ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

12 ಮಕ್ಕಳ ತಂದೆಯಾದ ವಕೀಲ ಹ್ಯಾರಿ ತನ್ನ ದೊಡ್ಡ ಕುಟುಂಬದ ಕಾರಣಕ್ಕಾಗಿ ಬಾಡಿಗೆ ಮನೆ ಪಡೆಯಲು ಹರಸಾಹಸಪಡುತ್ತಿದ್ದ. ಒಮ್ಮೆ ಒಂದು ಮಗುವನ್ನು ಮಾತ್ರ ಮನೆ ನೋಡಲು ಕರೆದೊಯ್ದು, ಉಳಿದ ಮಕ್ಕಳನ್ನು ಪತ್ನಿಯ ಜೊತೆ ಸ್ಮಶಾನದಲ್ಲಿ ಉಳಿಸಿದ. ಮಕ್ಕಳ ಬಗ್ಗೆ ಕೇಳಿದಾಗ, '12 ಮಂದಿ, ಉಳಿದವರು ತಾಯಿಯೊಂದಿಗೆ ಸ್ಮಶಾನದಲ್ಲಿದ್ದಾರೆ' ಎಂದ. ಅವನಿಗೆ ಮನೆ ಸಿಕ್ಕಿತು! ನೀತಿ: ಸೂಕ್ತ ಪದಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಸುಳ್ಳು ಹೇಳಿದಂತೆ ಆಗುವುದಿಲ್ಲ. ವಕೀಲರು, ಸುದ್ದಿ ಮತ್ತು ಸಾಮಾಜಿಕ ಮಾಧ್ಯಮಗಳ ಅರೆಸತ್ಯ ಸಂಗತಿಗಳ ಬಗ್ಗೆ ಎಚ್ಚರದಿಂದಿರಿ.

ಹರ್ಷ್ ಗೋಯಂಕ, ಉದ್ಯಮಿ

25 ವರ್ಷಗಳ ಹಿಂದೆ

ಶನಿವಾರ, 6-2-1999

• ಪಂಚಾಯಿತಿ ಚುನಾವಣೆ ಮುಂದೂಡಿಕೆಗೆ ಖಂಡನೆ

ದಾವಣಗೆರೆ, ಫೆ. 5– ಕರ್ನಾಟಕದ ಜನತಾದಳ ನೇತೃತ್ವದ ಸರ್ಕಾರ ಸೋಲಿನ ಭಯದಿಂದ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದೂಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಇಂದು ಇಲ್ಲಿ ನೇರವಾಗಿ ಆರೋಪಿಸಿದರು.

ಅವರು ಕಾಂಗ್ರೆಸ್ ಕಾರ್ಯಕರ್ತರ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ದಿವಂಗತ ರಾಜೀವ್ ಗಾಂಧಿ ನನಸು ಮಾಡಿ, ಪಂಚಾಯಿತಿ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ ಸಂವಿಧಾನಬದ್ಧ ಅಧಿಕಾರ ನೀಡಿದ್ದರು. ದೇಶದ ಮೂಲೆ ಮೂಲೆಗೆ ಸಂಚರಿಸಿ ಪಂಚಾಯತ್ ರಾಜ್ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದ್ದರು ಎಂದು ಸ್ಮರಿಸಿದರು.

ಆದರೆ ರಾಜ್ಯದಲ್ಲಿ ಈಗ ಅಧಿಕಾರ ನಡೆಸುತ್ತಿರುವ ಸರ್ಕಾರ, ಸಂವಿಧಾನದ ಮೂಲ ಉದ್ದೇಶವನ್ನೇ ಬುಡಮೇಲು ಮಾಡುತ್ತಿದೆ ಎಂದು ಕಟು ಶಬ್ದಗಳಲ್ಲಿ ಟೀಕಿಸಿದರು.

50 ವರ್ಷಗಳ ಹಿಂದೆ

ಬುಧವಾರ, 6-2-1974

• ಕಾವೇರಿ ಯೋಜನೆ ಜನಕ ನಿಜಲಿಂಗಪ್ಪಗೆ ಹಾರ್ದಿಕ ಸನ್ಮಾನ

ಬೆಂಗಳೂರು, ಫೆ. 5– 'ಸದ್ಯದ ಸರ್ಕಾರ ಹೋಗಿ, ಜನತೆಗೆ ಉಪಕಾರ ಮಾಡುವ ಸರ್ಕಾರ ಆದಷ್ಟು ಬೇಗನೆ ಬಂದಲ್ಲಿ, ಅದೇ ನನಗೊಂದು ತೃಪ್ತಿ ಹಾಗೂ ಅದೇ ನನಗೆ ಸನ್ಮಾನ ಮಾಡಿದಂತೆ'

–ಕಾವೇರಿ ಯೋಜನೆಯನ್ನು ತಮ್ಮ ಅಧಿಕಾರಾವಧಿಯಲ್ಲಿ ಮಂಜೂರು ಮಾಡಿದ್ದಕ್ಕಾಗಿ ಬೆಂಗಳೂರು ಕಾರ್ಪೊರೇಷನ್ ಜಿಲ್ಲಾ (ಸಂಸ್ಥಾ) ಸಮಿತಿಯ ಆಶ್ರಯದಲ್ಲಿ ತಮಗೆ ಏರ್ಪಡಿಸಲಾಗಿದ್ದ ಸನ್ಮಾನಕ್ಕೆ ನೀಡಿದ ಉತ್ತರದಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ಈ ಮಾತನ್ನು ಹೇಳಿದರು.

ಈಚೆಗೆ ನಗರದಲ್ಲಿ 'ಕಾವೇರಿ'ಗೆ ಸ್ವಾಗತ ನೀಡಿ ನಡೆದ ಸಮಾರಂಭದಲ್ಲಿ, ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಒದಗಿಸುವ ಯೋಜನೆಗೆ ಮಂಜೂರಾತಿ ನೀಡಿದ ಹಿಂದಿನ ಸರ್ಕಾರ ಹಾಗೂ ನಾಯಕರನ್ನು ಸ್ಮರಿಸಲಿಲ್ಲ ಎಂಬುದರ ಬಗ್ಗೆ ಪ್ರಸ್ತಾಪಿಸಿದ ಅವರು, 'ಉಪಕಾರ ಮಾಡಿದೆ ಅಂತ ಅದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ತಪ್ಪು' ಎಂದರು.

• ಸುಳಿವಿತ್ತರೆ ಬಹುಮಾನ

ಬೆಂಗಳೂರು, ಫೆ. 5– ಆಹಾರಧಾನ್ಯಗಳ ಅಕ್ರಮ ಸಂಗ್ರಹದ ಬಗ್ಗೆ ಸ್ಪಷ್ಟ ಸುಳಿವು ಕೊಡುವವರಿಗೆ 25ರಿಂದ 100 ರೂಪಾಯಿಗಳವರೆಗೆ ಬಹುಮಾನ ಕೊಡುವುದಾಗಿ ಆಹಾರ ಮಂತ್ರಿ ಕೆ.ಎಚ್. ಪಾಟೀಲರು ಪ್ರಕಟಿಸಿದ್ದಾರೆ.

'ಅಂಥವರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು' ಎಂದು ಸಚಿವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ರಾಜ್ಯದ ಹಲವೆಡೆ ಅಕ್ರಮ ಸಂಗ್ರಹಗಳ ಮೇಲೆ ದಾಳಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಚಿವರು ಈ ವಿಷಯ ತಿಳಿಸಿದರು.

ಪಾಕ್ ಚುನಾವಣೆ: ಸೇನೆಯ ಒಲವಿದ್ದವರಿಗೆ ಮಾತ್ರ ಇಲ್ಲಿ ಗೆಲುವು

ಪ್ರಜಾಸತ್ತೆಯ ಬೆನ್ನೇರಿ ಸೇನೆಯ ಸವಾರಿ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪಾಕಿಸ್ತಾನ ಸಾರ್ವತ್ರಿಕ ಚುನಾವಣೆಯ ಹೊಸ್ತಿಲಿನಲ್ಲಿದೆ. ಹಿಂದಿನ ಚುನಾವಣೆಯಲ್ಲಿ ಯಾವ ಸ್ಥಾನದಲ್ಲಿ ನವಾಜ್ ಷರೀಫ್ ಇದ್ದರೋ ಇದೀಗ ಆ ಸ್ಥಾನದಲ್ಲಿ ಇಮ್ರಾನ್ ಖಾನ್ ಇದ್ದಾರೆ. ಇಮ್ರಾನ್ ಕೈಯಲ್ಲಿದ್ದ 'ಬ್ಯಾಟ್' ಕೂಡ ಈಗ ಅವರ ಬಳಿ ಇಲ್ಲ. ಸರಳುಗಳ ಹಿಂದೆ ಬಂದಿಯಾಗಿರುವ ಒಂದು ಕಾಲದ ಕ್ರಿಕೆಟಿಗ, ಈ ಬಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ಮೈದಾನಕ್ಕೆ ಇಳಿದು ಆಡುವ ಅವಕಾಶವನ್ನೇ ಕಳೆದುಕೊಂಡಿದ್ದಾರೆ!

ಫೆಬ್ರುವರಿ 8ರಂದು ನಿಗದಿಯಾಗಿರುವ ಮತದಾನ ಒಂದು ಬಗೆಯ ಆತಂಕವನ್ನು ಸೃಷ್ಟಿಸಿದೆ. ದ್ವೇಷದ ರಾಜಕಾರಣ ಮತ್ತು ಸೇನೆಯ ಸರ್ವಾಧಿಕಾರಕ್ಕೆ ಹೆಸರಾಗಿರುವ ಪಾಕಿಸ್ತಾನದಲ್ಲಿ ಒಂದೊಮ್ಮೆ ಚುನಾವಣೆಯು ಮುಕ್ತವಾಗಿ ಮತ್ತು ಪಾರದರ್ಶಕವಾಗಿ ನಡೆಯದಿದ್ದರೆ ಜನ ದಂಗೆ ಏಳಬಹುದು, ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಬಹುದು, ಹಿಂಸಾಚಾರಕ್ಕೆ ಆಸ್ಪದವಾಗಬಹುದು ಎಂಬ ಆತಂಕ ಇದೆ.

ದುರ್ಬಲ ಆರ್ಥಿಕತೆ, ಬೆಲೆ ಏರಿಕೆ, ನಿರುದ್ಯೋಗ, ನೈಸರ್ಗಿಕ ವಿಕೋಪಗಳ ಅಪಕ್ವ ನಿರ್ವಹಣೆ, ಆಡಳಿತದ ಭ್ರಷ್ಟಾಚಾರ, ದ್ವೇಷದ ರಾಜಕಾರಣ, ಸೇನೆಯ ರಾಜಕೀಯ ಹಸ್ತಕ್ಷೇಪ... ಹೀಗೆ ಪಾಕಿಸ್ತಾನವನ್ನು ಬಾಧಿಸುತ್ತಿರುವ ಹಲವು ಸಂಗತಿಗಳಿವೆ. ಆದರೆ ಪಾಕಿಸ್ತಾನದ ಚುನಾವಣೆ ವಿಷಯಾಧಾರಿತವಾಗಿ ನಡೆಯುವುದು ಕಡಿಮೆ. ಚುನಾವಣಾ ಪ್ರಚಾರ ಸಭೆಗಳು ನಡೆದರೂ, ಪರಸ್ಪರ ಆರೋಪ, ಪ್ರತ್ಯಾರೋಪಗಳು ಕೇಳಿಬಂದರೂ ಕೊನೆಗೆ ಮುಖ್ಯವಾಗುವುದು ಸೇನೆ ಯಾರ ಬೆಂಬಲಕ್ಕೆ ಇದೆ ಎನ್ನುವುದು!

ಪಾಕಿಸ್ತಾನದಲ್ಲಿ ಮೂರು ರಾಜಕೀಯ ಪಕ್ಷಗಳು ಸರ್ಕಾರ ರಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಷರೀಫ್ ಕುಟುಂಬದ ನೇತೃತ್ವ ಇರುವ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್- ಎನ್), ಭುಟ್ಟೊ- ಜರ್ದಾರಿ ಕುಟುಂಬದ ನಾಯಕತ್ವ ಇರುವ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಮತ್ತು ಈ ಎರಡಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷ.

ಹಿಂದಿನ ಚುನಾವಣೆಯಲ್ಲಿ ಪಿಟಿಐ ಪಕ್ಷವನ್ನು ಸೇನೆ ಬೆಂಬಲಿಸಿತ್ತು. ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿದ್ದ ಷರೀಫ್ ಪದಚ್ಯುತಗೊಂಡು ಕಾರಾಗೃಹ ಶಿಕ್ಷೆಗೆ ಒಳಪಟ್ಟಿದ್ದರು. ನಂತರ ಜಾಮೀನು ಪಡೆದು, ಅನಾರೋಗ್ಯದ ನೆಪವೊಡ್ಡಿ, ನಾಲ್ಕು ವಾರಗಳಲ್ಲಿ ಹಿಂದಿರುಗುವುದಾಗಿ ಹೇಳಿ ಇಂಗ್ಲೆಂಡಿಗೆ ತೆರಳಿ ಅಲ್ಲಿ ನಾಪತ್ತೆಯಾಗಿದ್ದರು. ಅವರನ್ನು ಜೀವಮಾನದ ಅವಧಿಗೆ ಚುನಾವಣೆಗಳಿಂದ ಅನರ್ಹಗೊಳಿಸಲಾಗಿತ್ತು.

ಸೇನೆಯ ಬೆಂಬಲದೊಂದಿಗೆ ಗೆದ್ದಿದ್ದ ಇಮ್ರಾನ್ ಖಾನ್ ಅವರಿಗೆ ಸೇನೆಯ ಒಲವನ್ನು ಹೆಚ್ಚು ದಿನಗಳವರೆಗೆ ಕಾಯ್ದುಕೊಳ್ಳಲು ಆಗಲಿಲ್ಲ. ಭ್ರಷ್ಟಾಚಾರದ ಆರೋಪ ಹೊತ್ತ ಇಮ್ರಾನ್ ನೇತೃತ್ವದ ಸರ್ಕಾರ ಅವಿಶ್ವಾಸ ಗೊತ್ತುವಳಿಯ ಮೂಲಕ ಪತನಗೊಂಡಿತು. ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಿ ಸರ್ಕಾರ ರಚಿಸಿದವು.

ಇಮ್ರಾನ್ ಸಾರ್ವಜನಿಕ ಸಭೆಗಳನ್ನು ಆಯೋಜಿಸಿ 'ಲಂಡನ್‌ನಲ್ಲಿ ಕೂತ ಷರೀಫ್ ನನ್ನ ಪದಚ್ಯುತಿಯ ಸೂತ್ರಧಾರ, ಅಮೆರಿಕ ಮತ್ತು ಸೇನೆಯ ಚಿತಾವಣೆಯಿಂದ ಸರ್ಕಾರ ಪತನಗೊಂಡಿದೆ' ಎಂದು ಅಲವತ್ತುಕೊಂಡರು. ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಬಂಧನವಾದಾಗ ಹಲವೆಡೆ ಘರ್ಷಣೆ, ಹಿಂಸಾಚಾರ ನಡೆಯಿತು. ಇಮ್ರಾನ್ ಬೆಂಬಲಿಗರು ಸೇನೆ ಮತ್ತು ಐಎಸ್‌ಐ ಕಚೇರಿಗಳ ಮೇಲೆ ದಾಳಿ ಮಾಡಿದರು. ಇಮ್ರಾನ್ ವಿರುದ್ಧ ದಾಖಲಾಗಿದ್ದ ಪ್ರಕರಣಗಳ ತೀರ್ಪು ಒಂದರ ಮೇಲೆ ಮತ್ತೊಂದು ಬಂದು, ಶಿಕ್ಷೆಯ ಅವಧಿ ಹೆಚ್ಚುತ್ತಾ ಹೋಯಿತು. ಅವರು ಜೈಲಿನಲ್ಲೇ ಇರುವಂತಾಯಿತು.

ಆದರೆ ಇಮ್ರಾನ್ ಖಾನ್ ಅವರ ಜನಪ್ರಿಯತೆ ಕುಸಿಯಲಿಲ್ಲ. ಇಮ್ರಾನ್ ಅನುಪಸ್ಥಿತಿಯಲ್ಲಿ ಇತರ ನಾಯಕರು ಸಾರ್ವಜನಿಕ ಸಭೆಗಳನ್ನು ಮಾಡಿದರು. ಹಲವೆಡೆ ಪ್ರತಿಭಟನಾ ಜಾಥಾ ನಡೆಯಿತು. ಆಗ ದ್ವೇಷ ರಾಜಕಾರಣ ಮತ್ತೊಂದು ಹಂತಕ್ಕೆ ಹೋಯಿತು. ಪಿಟಿಐ ಪಕ್ಷದ ಹಲವು ನಾಯಕರ ವಿರುದ್ಧ ಪ್ರಕರಣಗಳು ದಾಖಲಾದವು, ಕಾರ್ಯಕರ್ತರನ್ನು ಬಂಧಿಸಿ ಜೈಲಿನಲ್ಲಿ ಇಡಲಾಯಿತು.

ಸಂವಿಧಾನಬದ್ಧವಾಗಿ ಪಕ್ಷದ ಆಂತರಿಕ ಚುನಾವಣೆ ನಡೆಸಿಲ್ಲ ಎಂಬ ಕಾರಣದಿಂದ ಚುನಾವಣಾ ಆಯೋಗವು ಪಿಟಿಐ ಪಕ್ಷವನ್ನು ಅನೂರ್ಜಿತಗೊಳಿಸಿತು. ಪಕ್ಷದ ಚಿಹ್ನೆಯಾದ 'ಬ್ಯಾಟ್' ಗುರುತಿನ ಅಡಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂಬ ಆದೇಶ ಬಂತು. ಪಿಟಿಐ ಉಮೇದುವಾರರು ಸ್ವತಂತ್ರ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲು ತೀರ್ಮಾನಿಸಿದರು. ಇಮ್ರಾನ್ ಖಾನ್ ಜೈಲಿನಿಂದಲೇ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡಿತು. ಪಾಕ್ ಸೇನೆಯ ಅವಕೃಪೆಗೆ ಭಾಜನರಾದರೆ ಏನಾದೀತು ಎಂಬುದಕ್ಕೆ ಇಮ್ರಾನ್ ಉದಾಹರಣೆಯಾದರು.

ಹಾಗಂತ ಪಾಕಿಸ್ತಾನದ ಸೇನೆಗೆ ತಾನು ಆಡಳಿತದ ಚುಕ್ಕಾಣಿ ಹಿಡಿಯಬೇಕು ಎಂಬ ಉಮೇದು ಸದ್ಯಕ್ಕೆ ಇದ್ದಂತಿಲ್ಲ. ಪ್ರಜಾಪ್ರಭುತ್ವ ರಾಷ್ಟ್ರದ ಸೋಗಿನಲ್ಲಿ ಹಿಂಬದಿಯಿಂದಲೇ ಆಡಳಿತ ನಿಯಂತ್ರಿಸಿದರೆ ಹೆಚ್ಚು ಅನುಕೂಲ ಎಂದು ಅದು ಭಾವಿಸಿದಂತಿದೆ. ಹಾಗಾಗಿ, ಅದು ಮತ್ತೊಮ್ಮೆ ನವಾಜ್ ಷರೀಫ್ ಅವರತ್ತ ನೋಡಿತು. ನವಾಜ್ ಷರೀಫ್ ಅವರಿಗೆ ಜಾಮೀನು ದೊರಕಿತು. ಚುನಾವಣೆಗಳಿಗೆ ಸ್ಪರ್ಧಿಸದಂತೆ ವಿಧಿಸಿದ್ದ ಜೀವಮಾನದ ಅವಧಿಯ ನಿರ್ಬಂಧವನ್ನು ಐದು ವರ್ಷಗಳಿಗೆ ತಗ್ಗಿಸಲಾಯಿತು. ಪಾಕಿಸ್ತಾನದ ಸೇನೆ ಮತ್ತು ನ್ಯಾಯಾಂಗ ಒಂದಕ್ಕೊಂದು ಪೂರಕವಾಗಿ ವರ್ತಿಸುತ್ತವೆ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಪಕ್ಷದ ಅಧಿಕೃತ ಚಿಹ್ನೆಯನ್ನು ಕಳೆದುಕೊಂಡ ಪಿಟಿಐ, ಇಮ್ರಾನ್ ಖಾನ್ ಅನುಪಸ್ಥಿತಿಯಲ್ಲಿ ಮತ್ತಷ್ಟು ಸೊರಗಿತು. ಪಾಕಿಸ್ತಾನದ ಚುನಾವಣೆಯಲ್ಲಿ ಮತ ಚಲಾಯಿಸುವ ದೊಡ್ಡ ಸಂಖ್ಯೆಯ ಮತದಾರರು ಅನಕ್ಷರಸ್ಥರು, ಚಿಹ್ನೆಯನ್ನು ಗಮನಿಸಿ ಮತ ನೀಡುವವರು. ವಿವಿಧ ಚಿಹ್ನೆಗಳ ಅಡಿಯಲ್ಲಿ ಪಿಟಿಐ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದರೂ, ಪಿಟಿಐ ಮತಗಳು ಇಡಿಯಾಗಿ ಈ ಅಭ್ಯರ್ಥಿಗಳಿಗೆ ಬೀಳುವುದು ಕಠಿಣ. ಹಾಗಾಗಿ, ಷರೀಫ್ ಅವರ ಪಕ್ಷ ಗೆದ್ದು ಸರ್ಕಾರ ರಚಿಸುವ ಉಮೇದಿನಲ್ಲಿದೆ.

ಆದರೆ ಸಿಂಧ್ ಪ್ರಾಂತ್ಯದಲ್ಲಿ ಪ್ರಾಬಲ್ಯ ಹೊಂದಿರುವ ಪಿಪಿಪಿಯ ಯುವ ಮುಂದಾಳು ಬಿಲಾವಲ್ ಭುಟ್ಟೊ ಮತ್ತೊಂದು ಬಗೆಯ ಲೆಕ್ಕಾಚಾರದಲ್ಲಿದ್ದಾರೆ. ಈ ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ ಅವರು ವಿದೇಶಾಂಗ ಸಚಿವರಾಗಿ ಒಂದಿಷ್ಟು ಜನಪ್ರಿಯತೆ ಗಳಿಸಿಕೊಂಡಿದ್ದರು. ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದ, 34 ವರ್ಷದ ಬಿಲಾವಲ್ ವಿದೇಶಾಂಗ ಸಚಿವ ಹುದ್ದೆಗೆ ಏರಲು ಸಾಧ್ಯವಾಗಿದ್ದು ಸೇನೆಯ ಬೆಂಬಲದಿಂದಲೇ ಎನ್ನಲಾಗುತ್ತಿದೆ. ದೊಡ್ಡ ಸಂಖ್ಯೆಯ ಯುವ ಮತದಾರರು ಈ ಚುನಾವಣೆಯಲ್ಲಿ ಮತ ಚಲಾಯಿಸುವುದರಿಂದ, ಎಪ್ಪತ್ತು ದಾಟಿರುವ ಷರೀಫ್ ಮತ್ತು ಇಮ್ರಾನ್ ಅವರಿಗಿಂತ ಮೂವತ್ತರ ಮಧ್ಯದಲ್ಲಿರುವ ಬಿಲಾವಲ್ ಅವರಿಗೆ ಹೆಚ್ಚಿನ ಅನುಕೂಲ ಆಗಬಹುದು ಎನ್ನುವ ಲೆಕ್ಕಾಚಾರ ಇದೆ.

ಸಿಂಧ್ ಪ್ರಾಂತ್ಯದ ಹೊರಗೆ ಉತ್ತಮ ಸಾಧನೆ ತೋರದ ಪಿಪಿಪಿ ಪಕ್ಷ ಈ ಬಾರಿ ಇಮ್ರಾನ್ ಖಾನ್ ಅವರ ಪಕ್ಷದ ಮತ ಕಸಿಯುವ ತಂತ್ರಗಾರಿಕೆ ರೂಪಿಸಿದೆ. ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ದ್ವೇಷ ರಾಜಕಾರಣ ಕೊನೆಗೊಳ್ಳುತ್ತದೆ ಮತ್ತು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆಗೊಳಿಸುತ್ತೇವೆ ಎಂದು ಬಿಲಾವಲ್ ಹೇಳುತ್ತಿದ್ದಾರೆ.

ಸದ್ಯದ ಮಟ್ಟಿಗಂತೂ ಸೇನೆಯ ಒಲವು ಷರೀಫ್ ಅವರ ಮೇಲಿರುವುದರಿಂದ ಅವರಿಗೆ ನಾಲ್ಕನೆಯ ಬಾರಿಗೆ ಪಾಕಿಸ್ತಾನದ ಪ್ರಧಾನಿಯಾಗುವ ಅದೃಷ್ಟ ಒಲಿಯಬಹುದು. ಭಾರತದ ದೃಷ್ಟಿಯಿಂದ ನೋಡುವುದಾದರೆ, ನವಾಜ್ ಷರೀಫ್ ತಮ್ಮ ಅವಧಿಯಲ್ಲಿ ಭಾರತದೊಂದಿಗೆ ಸಂಬಂಧವನ್ನು ವೃದ್ಧಿಸಿಕೊಳ್ಳುವತ್ತ ಹೆಜ್ಜೆ ಇರಿಸಿದ್ದ ನಾಯಕ. 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪದಗ್ರಹಣ ಸಮಾರಂಭಕ್ಕೆ ಷರೀಫ್ ಬಂದಿದ್ದು, ನಂತರ ಮೋದಿ ಅವರು ಷರೀಫ್ ಕುಟುಂಬದ ವಿವಾಹದ ಸಂದರ್ಭದಲ್ಲಿ ಅನಿರೀಕ್ಷಿತ ಹಾಜರಿ ಹಾಕಿದ್ದು ಈ ಹಿಂದೆ ನಡೆದಿದೆ.

ಭಾರತದ ಓಟ ಬೇರೆಯದೇ ಸ್ತರದಲ್ಲಿ ಇರುವುದರಿಂದ ಪಾಕಿಸ್ತಾನದಲ್ಲಿ ಯಾರು ಅಧಿಕಾರಕ್ಕೆ ಬಂದರೂ ಅದು ಭಾರತವನ್ನು ಹೆಚ್ಚು ಬಾಧಿಸುವುದಿಲ್ಲ.

ಅದೇನೇ ಇರಲಿ, ಪಾಕಿಸ್ತಾನದ ಸೇನೆಯ ಚಂಚಲ ಬುದ್ಧಿ ಈ ಎಪ್ಪತ್ತೈದು ವರ್ಷಗಳಲ್ಲಿ ಹಲವು ಬಾರಿ ಜಾಹೀರಾಗಿದೆ. ಒಂದೊಮ್ಮೆ ನವಾಜ್ ಷರೀಫ್ ಮತ್ತೊಮ್ಮೆ ಪ್ರಧಾನಿಯಾದರೂ ನೆಮ್ಮದಿಯ ನಿದ್ರೆ ಸಾಧ್ಯವಾಗಲಾರದು. ಪಾಕಿಸ್ತಾನವನ್ನು ಸಮಸ್ಯೆಗಳ ಕೂಪದಿಂದ ಮೇಲೆತ್ತಬೇಕಾದ ಸವಾಲಿನ ಜೊತೆಗೆ, ಸೇನೆಯ ಒಲವನ್ನು ಕಾಯ್ದುಕೊಳ್ಳುವ ಮಾರ್ಗವನ್ನೂ ಅವರು ಹುಡುಕಬೇಕಿದೆ. ಯಾವುದೇ ಪಕ್ಷದ ನೇತೃತ್ವದ ಸರ್ಕಾರಕ್ಕೆ ಎರಡನೆಯದೇ ದೊಡ್ಡ ಸವಾಲು.

ಚುರುಮುರಿ



ಕೂಗುಮೋರೆಗಳು

• ಲಿಂಗರಾಜು ಡಿ.ಎಸ್.

'ಸಾ, ಎಲ್ಲ ಪಕ್ಷಗಳಲ್ಲೂ 'ಇವರಿಗೆ ಲೋಕಸಭೆಗೆ ಟಿಕೆಟ್ ಕೊಡ್ಲೇಬೇಕು. ಇವರಿಗೆ ಮಾತ್ರ ಟಿಕೆಟ್ ಕೊಡಬೇಡಿ. ನಿಮ್ಗೆ ಅಡ್‌ಬೀಳ್ತೀವಿ' ಅಂತ ಕೂಗು ಎದ್ದದಂತಲ್ಲ ಸಾ?' ಅಂತಂದೆ.

'ಹೂ ಕಲಾ, ತಾವು ಇದ್ದೀವಿ ಅಂತ ತೋರಿಸಿಗ್ಯಳಕ್ಕೆ ಆಗಾಗ ಪರ-ವಿರೋಧದ ಕೂಗು ಏಳಿಸೋ ಸ್ವಂತ ಕೂಗುಮೋರೆಗಳು ಇರತವೆ ಕನೋ' ತುರೇಮಣೆ ವಿವರಿಸಿದರು.

'ಅಲ್ಲಾ ಸಾ, ಪರ-ವಿರೋಧವಾಗಿ ಬ್ಯಾರೆ ಬ್ಯಾರೆ ಥರ ಕೂಗದು ಅಂದ್ರೆ ಹ್ಯಂಗೆ?'

'ನೋಡ್ಲಾ, ಕೂಗದ್ರಗೂ ನಾನಾ ಥರ ಇರತವೆ. ರಾಷ್ಟ್ರೀಯ ಪಕ್ಷದಿಂದ ಉಚ್ಚಾಟನೆಯಾದೋನದ್ದು ಅರ್ಧಚಂದ್ರನಾದ, ಎಣ್ಣೆ ರೇಟು ಎಷ್ಟು ಏರಿಸಿದ್ರೂ ಗೋಣಗಿಕ್ಯಂದು ಕುಡಿದು ತೂಗಾಡೋರದ್ದು ತೂಗುನಾದ!' ಅಂತಂದ್ರು.

'ಹಂಗಾದ್ರೆ ಇನ್ನೂ ಯಾವ ಯಾವ ನಾದ ಇದ್ದಾವೆ ಸಾ?' ಅಂತ ಕೇಳಿದೆ.

'ಬದುಕಾಟ ಮಾಡೋದು ಕಷ್ಟವಾದಾಗ ಜನ ಹೊಂಡುಸದು ಆರ್ತನಾದ, ಪದೇಪದೇ ಪಕ್ಷಾಂತರ ಮಾಡೋರದ್ದು ಲಾಗನಾದ, ಹೈಕಮಾಂಡು ಮುಂದೆ ಹುಸಿನಗತಾ ಕೊಯ್ಯುಡದು ಮಾರ್ಜಾಲನಾದ, ಬ್ಯಾಂಕಿಂದ ಕಡ ತಗಂಡು ಕದ್ದೋದ ಮ್ಯಾಲೆ ಮಾನೇಜರದ್ದು ಕಡಪಾಯಿನಾದ, ಯಾವ ಪಕ್ಷಕ್ಕೋಗದು ಅಂತ ಇಬ್ಬಂದಿಯಲ್ಲಿ ಬಿದ್ದವನದ್ದು ಉಭಯಸಂಕಟನಾದ, ಅವನು ಮಂತ್ರಿಯಾದ ಅಂತ ಹೊಟ್ಟುರಿಯದು ಅಸೂಯಾನಾದ' ಅಂದ್ರು ತುರೇಮಣೆ.

'ಸತ್ತೋರ ಮುಂದೆ ರಾಗವಾಗಿ ಅಳೋದು ಅಪ್ಪರ್ತಿ ಯಾನಾದ ಕನ್ರೋ' ಅಂತ ಯಂಟಪ್ಪಣ್ಣ ಮಾತು ಸೇರಿಸಿತು.

'ಕೆಪಿಎಸ್‌ಸಿ ಮುಂದೆ ನಿರುದ್ಯೋಗಿಗಳು 'ನಿಮ್ಮ ದಮ್ಮಯ್ಯ ಕೆಲಸ ಕೊಡ್ರಪ್ಪೋ!' ಅಂತ ಕೂಗದು ಆರ್ತನಾದ. ಕೆಪಿಎಸ್‌ಸಿ ಒಳಗೇ ಕೂತು 'ನಮಗೆ ಯವಾರ ನಡೆಸಕ್ಕೆ ಅಧಿಕಾರವೇ ಇಲ್ಲ' ಅಂತ ಕಿರುಚಿಕ್ಯಳದು ಸ್ವಾರ್ಥನಾದ. ಇದು ಸೇರಬೇಕಾದೋರ ಕಿವಿಗೆ ಬೇಗ ಸೇರ್ತದೆ' ಅಂತ ಅರ್ಥ ಮಾಡಿಕ್ಯಂದೆ.

'ಹೂ ಕಯ್ಯಾ, ಪವರ್‌ಫುಲ್ ಅಧಿಕಾರಸ್ಥರು ಹೊಂಡಸದು ಹ್ಞೂಂಕಾರನಾದ' ಅಂತ ತುರೇಮಣೆ ಕೂಗುಮೋರೆಗಳ ಬಗ್ಗೆ ಜ್ಞಾನೋದಯ ಮಾಡಿದರು.

ಸಂಗತ

ರೈಲಿನಲ್ಲಿ ಮಹಿಳೆ ಎಷ್ಟು ಸುರಕ್ಷಿತ?

ಮಹಿಳಾ ಸುರಕ್ಷೆಯು ಸ್ವಸ್ಥ ಸಮಾಜದ ಲಕ್ಷಣ ಮತ್ತು ಎಲ್ಲರ ಹೊಣೆ

• ಡಾ. ಕೆ.ಎಸ್.ಚೈತ್ರಾ

ಶಿವಮೊಗ್ಗ– ಬೆಂಗಳೂರು ನಡುವೆ ಸಂಚರಿಸುವ ರೈಲಿನಲ್ಲಿ ರಾತ್ರಿವೇಳೆ ಪ್ರಯಾಣಿಸುತ್ತಿದ್ದ ಅರಣ್ಯ ಭವನದ ಮಹಿಳಾ ಸಿಬ್ಬಂದಿಯೊಬ್ಬರ ಇತ್ತೀಚಿನ ಹತ್ಯಾ ಪ್ರಕರಣವು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ. ಸಾಮಾನ್ಯ ದರ್ಜೆ ಬೋಗಿಯಲ್ಲಿ ಕೂರಲು ಜಾಗವಿರಲಿಲ್ಲ ಎಂಬ ಕಾರಣಕ್ಕೆ, ಖಾಲಿ ಇದ್ದ ಮಹಿಳಾ ಬೋಗಿಗೆ ಹೋಗಿ ಮಲಗಿದ್ದ ಮಹಿಳೆಯನ್ನು ಹತ್ಯೆ ಮಾಡಲಾಗಿದೆ. ಆಭರಣ ಕದ್ದು, ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಮಾಡಿ ಬ್ಯಾಗಿನಲ್ಲಿ ಇಡಲಾಗಿದೆ. ಗಾಬರಿ ಹುಟ್ಟಿಸುವ ಅಂಶವೆಂದರೆ, ಸುರಕ್ಷತೆಯ ದೃಷ್ಟಿಯಿಂದ ಮಹಿಳೆಯರಿಗಾಗಿಯೇ ಮೀಸಲಿದ್ದ ವಿಶೇಷ ಬೋಗಿಯಲ್ಲಿ ಈ ಬರ್ಬರ ಹತ್ಯೆ ನಡೆದಿರುವುದು. ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ.

ಕೆಳ, ಮಧ್ಯಮ ವರ್ಗದವರಿಗೆ, ಬಸ್ಸು ಮತ್ತು ರೈಲು ನೆಚ್ಚಿನ ಸಾರಿಗೆ ವ್ಯವಸ್ಥೆ. ಅದರಲ್ಲೂ ರೈಲು ಪ್ರಯಾಣವು ಸಮಯದ ಉಳಿತಾಯ ಮತ್ತು ಆರ್ಥಿಕ ದೃಷ್ಟಿಯಿಂದ ಅನುಕೂಲಕರ. ಬೋಗಿಯ ಒಳಗೆ ಓಡಾಡಲು ಅವಕಾಶವಿರುವ, ಶೌಚಾಲಯ ಇರುವ ರೈಲುಗಳು ಹಿರಿಯ ನಾಗರಿಕರಿಗೆ ಮತ್ತು ವಿಶೇಷವಾಗಿ ಮಹಿಳೆಯರು, ಮಕ್ಕಳಿಗೆ ವರದಾನವೇ ಸರಿ. ಹಾಗಾಗಿಯೇ ಬಸ್‌ಗಳಲ್ಲಿ ತಮಗೆ ಉಚಿತ ಸೌಲಭ್ಯ ಇದ್ದರೂ ರೈಲುಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಹೀಗಿರುವಾಗ, ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಎಂಬ ಸುದ್ದಿಯ ಜತೆಗೇ ಈ ಪ್ರಕರಣ! ದುಷ್ಕರ್ಮಿಗಳನ್ನು ಶೀಘ್ರ ಪತ್ತೆ ಹಚ್ಚಿ, ಅವರಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳುವುದರೊಂದಿಗೆ ಇದಕ್ಕೆ ಕಾರಣವಾಗುವ ಅಂಶಗಳನ್ನೂ ಗಮನಿಸಬೇಕು.

ಬಹುತೇಕ ರೈಲುಗಳಲ್ಲಿ ಮಹಿಳೆಯರಿಗೆ ವಿಶೇಷ ಬೋಗಿಗಳಿವೆ. ಎಂಜಿನ್ ಹಿಂದೆ ಅಥವಾ ಕಡೆಯ ಭಾಗದಲ್ಲಿ ಈ ಬೋಗಿಗಳಿರುತ್ತವೆ. ಕೆಲ ವರ್ಷಗಳ ಹಿಂದೆ ಈ ಬೋಗಿಗಳನ್ನು ಮಧ್ಯದಲ್ಲಿ ಅಳವಡಿಸಬೇಕು ಎಂಬ ಆದೇಶ ಬಂದರೂ ಅದು ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಹೀಗಾಗಿ ನಿಲ್ದಾಣ, ಕ್ರಾಸಿಂಗ್ ಬಂದಾಗ ಇವು ಪ್ಲ್ಯಾಟ್‌ಫಾರ್ಮ್‌ನಿಂದ ದೂರದಲ್ಲಿ, ಕತ್ತಲಿನಲ್ಲಿ ನಿಂತಿರುತ್ತವೆ. ಹತ್ತಲು, ಇಳಿಯಲು ಮಹಿಳೆಯರಿಗೆ ಕಷ್ಟ, ದರೋಡೆಗೆ ಅತ್ಯಂತ ಪ್ರಶಸ್ತ ತಾಣಗಳು. ಹಾಗಾಗಿ, ಮಹಿಳಾ ಬೋಗಿಯನ್ನು ಮಧ್ಯದಲ್ಲಿ ಅಳವಡಿಸುವುದು ಕಡ್ಡಾಯವಾಗಬೇಕು. ಹಾಗೆಯೇ ಸಾಮಾನ್ಯವಾಗಿ ರೈಲಿನಲ್ಲಿ ಬೋಗಿಗಳ ನಡುವೆ ಸಂಪರ್ಕವಿರುತ್ತದೆ. ಆದರೆ ಮಹಿಳಾ ಬೋಗಿಗೆ ಬೇರೆ ಬೋಗಿಗಳೊಂದಿಗೆ ಸಂಪರ್ಕವಿಲ್ಲ. ಪುರುಷರು ಪ್ರವೇಶಿಸಬಾರದು ಎನ್ನುವ ಸದುದ್ದೇಶ ಇದರ ಹಿಂದಿದ್ದರೂ ಮಹಿಳೆಯರ ಸಂಖ್ಯೆ ಕಡಿಮೆ ಇದ್ದಾಗ ಇತರರೊಂದಿಗೆ ಸಂಪರ್ಕವೇ ಇಲ್ಲದಿರುವುದು ಅಪಾಯದ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಮಹಿಳಾ ಸುರಕ್ಷತೆಯನ್ನು ಗಮನದಲ್ಲಿಟ್ಟು ರೈಲ್ವೆ ಸಂರಕ್ಷಣಾ ಪಡೆಯು 2018ರಲ್ಲಿ 'ಆಪರೇಷನ್ ಶಕ್ತಿ' ಎನ್ನುವ ಸುರಕ್ಷಾ ಕ್ರಮವನ್ನು ಅಳವಡಿಸಿಕೊಂಡಿತ್ತು. ಮಹಿಳಾ ಪ್ರಯಾಣಿಕರ ಟಿಕೆಟ್ ವಿವರವನ್ನು ದಿನವೂ ಸಂಗ್ರಹಿಸಿ, ಅದಕ್ಕೆ ತಕ್ಕಂತೆ, ಅಗತ್ಯವಿರುವ ಬೋಗಿ ಮತ್ತು ಅಸುರಕ್ಷಿತ ಸ್ಥಳಗಳಲ್ಲಿ ಪೊಲೀಸರನ್ನು ಉಸ್ತುವಾರಿಗಾಗಿ ನೇಮಿಸಲಾಗಿತ್ತು. ಇದಲ್ಲದೆ ಅಹಿತಕರ ಘಟನೆ ನಡೆದಲ್ಲಿ ಮಹಿಳಾ ಪ್ರಯಾಣಿಕರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಮತ್ತು ಅಧಿಕಾರಿಗಳ ಬಗ್ಗೆ ಮಾಹಿತಿ ನೀಡುವ ಜಾಗೃತಿ ಕಾರ್ಯಕ್ರಮಗಳು ನಡೆದಿದ್ದವು. ಹಾಗೆಯೇ ಈ ವಿಶೇಷ ಬೋಗಿಗಳನ್ನು ಬಳಸುತ್ತಿದ್ದ ಪುರುಷರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿತ್ತು. ಇವೆಲ್ಲವೂ ಸರಿ, ಆದರೆ ರೈಲು ಪ್ರಯಾಣ ಮಾತ್ರವಲ್ಲ ರೈಲು ನಿಲ್ದಾಣದಲ್ಲಿಯೂ ಮಹಿಳೆಯರ ಮೇಲೆ ಅನೇಕ ರೀತಿಯ ಕಿರುಕುಳ, ದೌರ್ಜನ್ಯ ನಡೆಯುತ್ತವೆ. ಹೀಗಾಗಿ, ಸರಿಯಾದ ದೀಪದ ವ್ಯವಸ್ಥೆ, ಕಾಯಲು ಸೂಕ್ತ ಸ್ಥಳ, ಉತ್ತಮ ಶೌಚಾಲಯಗಳ ವ್ಯವಸ್ಥೆ ಜತೆ ಇವೆಲ್ಲದರ ಬಗ್ಗೆ ಗಮನಹರಿಸಲು ಪೊಲೀಸರು, ರೈಲ್ವೆ ಸಿಬ್ಬಂದಿ ಇರುವುದು ಅವಶ್ಯಕ.



ಪ್ರಸ್ತುತ ರಾತ್ರಿ ರೈಲು ಪ್ರಯಾಣದ ವೇಳೆ ಕೆಲವು ಪ್ರಮುಖ ನಿಲ್ದಾಣಗಳಲ್ಲಿ ಮಾತ್ರ ಆಗಾಗ್ಗೆ ಮಹಿಳಾ ಪೊಲೀಸರು ಬರುತ್ತಾರೆ. ಅದೂ ನೆಪಕ್ಕೆ ಮಾತ್ರ. ಮುಖ್ಯವಾಗಿ ಬೇಕಾಗಿರುವುದು ರಾತ್ರಿಯಿಡೀ ಪ್ರಯಾಣಿಸಬೇಕಾದ ಸಂದರ್ಭದಲ್ಲಿ. ಹಾಗಾಗಿ, ಪ್ರಯಾಣದ ಸಂದರ್ಭದಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಮೂಲಕ ಆಗುಹೋಗುಗಳನ್ನು ಗಮನಿಸುವ ವ್ಯವಸ್ಥೆ, ಕೆಲಸ ಮಾಡುವ ಸಹಾಯವಾಣಿ, ತುರ್ತು ಅಗತ್ಯದ ಒತ್ತುಗುಂಡಿ, ಸುರಕ್ಷಿತ ಶೌಚಾಲಯಗಳ ಜತೆ ಈ ಬೋಗಿಗೆ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕು ಎನ್ನುವುದು ಬಹುತೇಕರ ಬೇಡಿಕೆ.

ಇವೆಲ್ಲವನ್ನು ಮಾಡಿದರೂ ಮಹಿಳೆಯರು ರಾತ್ರಿ ಒಬ್ಬರೇ ಪಯಣಿಸುವಾಗ ಕೆಲವು ಅಂಶಗಳನ್ನು ಗಮನದಲ್ಲಿಡುವುದು ಸೂಕ್ತ. ಬೆಲೆಬಾಳುವ ಆಭರಣ, ದುಬಾರಿ ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳು ಕಳ್ಳರ ಗಮನ ಸೆಳೆಯುತ್ತವೆ. ಹೀಗಾಗಿ ಅವುಗಳ ಬಗ್ಗೆ ಎಚ್ಚರಿಕೆ ಬೇಕು. ರಾತ್ರಿಯ ವೇಳೆ ಶೌಚಾಲಯಕ್ಕೆ ಹೋಗುವಾಗ ಫೋನ್ ಮತ್ತು ಪರ್ಸನ್ನು ಜೊತೆಗೆ ಒಯ್ಯುವುದು ಒಳ್ಳೆಯದು. ತುರ್ತು ಪರಿಸ್ಥಿತಿ ಬಂದಾಗ ಇತರರನ್ನು ಸಂಪರ್ಕಿಸಲು ಫೋನ್ ಅಗತ್ಯ. ಯಾವುದೇ ಕಾರಣಕ್ಕೆ ಸೀಟನ್ನು ಬಿಟ್ಟು ಹೋಗುವ ಸಂದರ್ಭ ಬಂದಲ್ಲಿ ರೈಲು ನಿಂತಾಗ, ನಿಧಾನವಾದಾಗ ಮಾಡಬಾರದು. ಕಳ್ಳರಿಗೆ ಒಳ ಪ್ರವೇಶಿಸಲು ಮತ್ತು ನಂತರ ತಪ್ಪಿಸಿಕೊಳ್ಳಲು ಸಹಾಯಕವಾದ್ದರಿಂದ ಬಹುತೇಕ ಕಳ್ಳತನದ ಪ್ರಕರಣಗಳು ಹೆಚ್ಚು ನಡೆಯುವುದು ಈ ಸಂದರ್ಭದಲ್ಲಿಯೇ! ಹಾಗೆಯೇ ನಿಲ್ದಾಣದಲ್ಲಿ ಅಪರಿಚಿತರ ಬಳಿ ಅನಗತ್ಯವಾದ ಮಾತು, ವೈಯಕ್ತಿಕ ವಿವರ ನೀಡುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ.

ರೈಲಿನಲ್ಲಿ ಮಾತ್ರವಲ್ಲ, ಮಹಿಳಾ ಸುರಕ್ಷೆಯು ಸ್ವಸ್ಥ ಸಮಾಜದ ಲಕ್ಷಣ ಮತ್ತು ಎಲ್ಲರ ಹೊಣೆ ಎಂದು ಅರಿವಾಗುವ ದಿಸೆಯಲ್ಲಿ ನಾವು ಕ್ರಮಿಸಬೇಕಾದ ಹಾದಿ ಬಹಳ ದೂರವಿದೆ!

ವಾಚಕರ ವಾಣಿ

ಪ್ರಶಸ್ತಿ ಪಡೆಯುವವರಲ್ಲ, ನೀಡುವವರು

ಉನ್ನತ ಪ್ರಶಸ್ತಿಗಳನ್ನು ಸಾಧಕರಿಗೆ ನೀಡಿ ಪುರಸ್ಕರಿಸುವುದು ಸರಿಯಷ್ಟೆ. ಅವುಗಳನ್ನು ಕೊಡಲು ಬಳಸುವ ಮಾನದಂಡ ಹಾಗೂ ಆಯ್ಕೆಯ ಹಿಂದಿರುವ ರಾಜಕಾರಣದ ಒಳಪಟ್ಟುಗಳನ್ನು ಉಪೇಕ್ಷಿಸಿ ಹೇಳಬಹುದಾದ ಮಾತೆಂದರೆ, ಪ್ರಶಸ್ತಿ, ಪುರಸ್ಕಾರಗಳು ವಿರಕ್ತರಿಗೆ ಸಲ್ಲ. ವಿಶಿಷ್ಟ ಸಾಧನೆ ಮಾಡಿರುವ ಗೃಹಸ್ಥ ಹಾಗೂ ಜನಸಾಮಾನ್ಯರಿಗೆ ವಿರಕ್ತರು ತಮ್ಮ ಜಂಗಮ ಹಸ್ತಗಳಿಂದ ಅವುಗಳನ್ನು ನೀಡಬೇಕೇ ವಿನಾ ತಾವೇ ಪಡೆಯುವುದಲ್ಲ. ಹಿಂದೆ ಶರಣಮಾರ್ಗದ ವಿರಕ್ತರೊಬ್ಬರು ರಾಷ್ಟ್ರಮಟ್ಟದ ಸೌಹಾರ್ದ, ಇತ್ತೀಚೆಗೆ ಮತ್ತೊಬ್ಬ ವಿರಕ್ತರು ರಾಜ್ಯೋತ್ಸವ ಪ್ರಶಸ್ತಿ ಹಾಗೂ ಮಗದೊಬ್ಬರು ಗೌರವ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇದು ಶರಣಪಥವಲ್ಲ.

ವಿರಕ್ತರು ಎನಿಸಿಕೊಳ್ಳುವವರು ಹಾಗೂ ಶರಣಮಾರ್ಗದವರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯುವುದೆಂದರೆ ಶರಣಸ್ಥಳದಿಂದ ಸೀದಾ ಭವಿಸ್ಥಳಕ್ಕೆ ಜಾರುವುದಾಗಿದೆ. ಬಸವಣ್ಣನವರಿಗೂ ಆಗ ಬಿರುದುಬಾವಲಿಗಳನ್ನು ಕೊಡಲು ಪ್ರಯತ್ನಿಸಲಾಗಿತ್ತು. ಆಗ ಅವರ ಉತ್ತರ ಅತ್ಯಂತ ಮನೋಜ್ಞವಾಗಿತ್ತು. ಅದು, 'ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರ ಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯಾ! ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ' ಎಂಬ ಮಂತ್ರಸದೃಶ ವಚನವಾಗಿತ್ತು!

ಮಹಾಂತೇಶ ಗಂಗಯ್ಯ ಓಶಿಮಠ, ಕೈಗಾ ವಸತಿಗ್ರಾಮ

ಸಾಂಪ್ರದಾಯಿಕ ಅಡ್ಡಗಟ್ಟೆ: ನಡೆಯಲಿ ಸಮೀಕ್ಷೆ

ನೀರು ಸಂಗ್ರಹಿಸಿ ಅಂತರ್ಜಲ ವೃದ್ಧಿಗೆ ಕ್ರಮ ಕೈಗೊಂಡಿರುವ ರೈತರಿಗೆ ಪ್ರೋತ್ಸಾಹಧನ ನೀಡುವ 'ನೀರಿನ ಕ್ರೆಡಿಟ್' ಪದ್ಧತಿ ಜಾರಿಗೆ ತಜ್ಞರು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿರುವುದು (ಪ್ರ.ವಾ., ಫೆ. 3) ಸಮಂಜಸವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಬಹುತೇಕ ರೈತರು ಸಾಮೂಹಿಕವಾಗಿ ನದಿ ನೀರಿಗೆ ಅಡ್ಡಲಾಗಿ ಸಾಂಪ್ರದಾಯಿಕ ಅಡ್ಡಗಟ್ಟೆಯನ್ನು (ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಸ್ವತಃ ರೈತರೇ ಗುಂಪಾಗಿ ನಿರ್ಮಿಸುವ ತಾತ್ಕಾಲಿಕ ಚೆಕ್‌ಡ್ಯಾಮ್) ನಿರ್ಮಿಸಿ, ಆ ಮುಖಾಂತರ ಸುಮಾರು ನಾಲ್ಕೈದು ಕಿ.ಮೀ. ದೂರದವರೆಗಿನ ತಮ್ಮ ಜಮೀನುಗಳಿಗೆ ಕಾಲುವೆ ನೀರನ್ನು ಹರಿಸಿಕೊಂಡು ಕೃಷಿ ಮಾಡುತ್ತಿರುವ ಪರಿಪಾಟವು ಶತಮಾನದಿಂದಲೂ ನಡೆದುಕೊಂಡು ಬಂದಿದೆ. ಇಂಥ ಕಾಲುವೆಯ ನೀರಿನ ಹರಿವಿನಿಂದಾಗಿ ಕೃಷಿ ಉಪಯೋಗಕ್ಕಷ್ಟೇ ಅಲ್ಲದೆ ಕಡು ಬೇಸಿಗೆಯಲ್ಲೂ ಆಸುಪಾಸಿನ ತೆರೆದ ಬಾವಿಗಳಲ್ಲಿ ಸಹಜವಾಗಿ ನೀರಿನ ಸಮೃದ್ಧಿ ಕಾಣುತ್ತಿದೆ. ಪರೋಕ್ಷವಾಗಿ ಅಂತರ್ಜಲ ವೃದ್ಧಿಗೆ ಕಾರಣವಾಗುವ ಇಂತಹ ಅಡ್ಡಗಟ್ಟೆಗಳು ಪ್ರತಿ ಮಳೆಗಾಲದ ನೆರೆ ನೀರಿಗೆ ಕೊಚ್ಚಿ ಹೋಗುತ್ತವೆ. ಮಣ್ಣು ಸವಕಳಿ ಅಥವಾ ಕೆಸರು ತುಂಬಿದ ಕಾಲುವೆಗಳ ದುರಸ್ತಿಗೆ ವೆಚ್ಚವಾಗುವ ಹಣದ ಮೊತ್ತವೂ ಕಾಲಕ್ರಮೇಣ ಹೆಚ್ಚುತ್ತಿದ್ದು, ಇದನ್ನು ಭರಿಸುವ ಸ್ಥಿತಿಯಲ್ಲಿ ಹೆಚ್ಚಿನ ಕೃಷಿಕರು ಇಲ್ಲ. ಹೀಗಾಗಿ, ಕೆಲವು ಕಡೆ ಇಂತಹ ಅಡ್ಡಗಟ್ಟೆಗಳ ನಿರ್ಮಾಣ ಬಹುತೇಕ ಸ್ಥಗಿತಗೊಂಡಿದೆ. ಅಲ್ಲದೆ ಅವೈಜ್ಞಾನಿಕವಾಗಿ ಚೆಕ್‌ಡ್ಯಾಮ್‌ಗಳನ್ನು ನಿರ್ಮಿಸುತ್ತಿರುವುದರಿಂದಾಗಿ ಕೃಷಿಗೆ ಬೇಕಾದಷ್ಟು ನೀರಿನ ಸರಾಗ ಹರಿವು ಕಾಲುವೆಯಲ್ಲಿ ಇಲ್ಲದ ಕಾರಣ, ಸ್ವತಂತ್ರ ನೀರಾವರಿ ಸೌಲಭ್ಯದತ್ತ ಬಹುತೇಕ ರೈತರು ಯೋಚಿಸುತ್ತಿದ್ದಾರೆ.

ಸರ್ಕಾರವೇ ತುರ್ತಾಗಿ ಈ ಸಾಂಪ್ರದಾಯಿಕ ಅಡ್ಡಗಟ್ಟೆಗಳ ಸ್ಥಿತಿಗತಿಯ ಸಮೀಕ್ಷೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಡಿಸಿ, ಇವುಗಳನ್ನು ಉಳಿಸುವಲ್ಲಿ ರೈತರನ್ನು ಪ್ರೇರೇಪಿಸಬೇಕು. ಅಡ್ಡಗಟ್ಟೆಯ ಜೊತೆಗೆ ಕಾಲುವೆ ಅಭಿವೃದ್ಧಿಗೆ ಹೆಚ್ಚಿನ ಧನಸಹಾಯವನ್ನು ರೈತ ಸಮೂಹಕ್ಕೆ ನೀಡಿ ಪ್ರೋತ್ಸಾಹಿಸಬೇಕು. ಸಾಂಪ್ರದಾಯಿಕ ಅಡ್ಡಗಟ್ಟೆ ಹಾಗೂ ಇದಕ್ಕೆ ಸಂಬಂಧಿಸಿದ ಕಾಲುವೆಯು ಹಾದುಹೋಗುವ ಜಮೀನನ್ನು ಇದಕ್ಕಾಗಿಯೇ ಅಧಿಕೃತವಾಗಿ ಕಾಯ್ದಿರಿಸಲು ಯೋಜನೆ ಸಿದ್ಧಪಡಿಸಬೇಕು. ಹೀಗಾದರೆ ಮಾತ್ರ 'ನೀರಿನ ಕ್ರೆಡಿಟ್' ಯೋಜನೆ ಬಹುತೇಕ ಸಫಲಗೊಂಡಂತೆ.

ಗೋಪು ಗೋಖಲೆ, ಶಿಶಿಲ

ಅನಗತ್ಯ ಹೊರೆ ತಪ್ಪಿಸಲು ಬೇಕು ಇಚ್ಛಾಶಕ್ತಿ

'ಕಂದಾಯಕ್ಕೆ ಬೇಕು ಚಿಕಿತ್ಸೆ' ಎಂಬ ವಿಶೇಷ ವರದಿಯು (ಪ್ರ.ವಾ., ಫೆ. 4) ತಾಲ್ಲೂಕು ಕಚೇರಿಗಳಲ್ಲಿ ರೈತರು ಪಡುತ್ತಿರುವ ಬವಣೆಯ ಒಂದು ಮುಖವನ್ನು, ದೂರದ ಊರುಗಳಿಂದ ಬಂದು, ಊಟ ಬಿಟ್ಟು ಕಚೇರಿಗಳ ಬಾಗಿಲು ಕಾಯುವ ರೈತಾಪಿ ವರ್ಗದ ಅಸಹಾಯಕತೆಯನ್ನು ಚಿತ್ರವತ್ತಾಗಿ ತೆರೆದಿಟ್ಟಿದೆ. ಆದರೆ ಇದಕ್ಕೆ ಕಾರಣವಾದ ಇನ್ನೊಂದು ಮಹತ್ವದ ಅಂಶವಿದೆ. ಇಂದಿನ ಕಂಪ್ಯೂಟರ್ ಯುಗದಲ್ಲೂ ಅಪ್ರಸ್ತುತವಾಗಿರುವ ಅನೇಕ ಕಾನೂನು ವಿಧಿಗಳನ್ನು ರೈತರ ಮೇಲೆ ಹೇರುತ್ತಿರುವುದು ಅನವಶ್ಯಕ ವಿಳಂಬಕ್ಕೆ, ರೈತರ ಬವಣೆಗೆ ಕಾರಣವಾಗುತ್ತಿದೆ. ಉದಾಹರಣೆಗೆ, ಉತ್ತರ ಕನ್ನಡ ಜಿಲ್ಲೆಯಲ್ಲಿ (ಬೇರೆಡೆಯೂ ಇರಬಹುದು) ಜಮೀನು ಮಂಜೂರು ಮಾಡಿ ಅದನ್ನು ಫಲಾನುಭವಿಗೆ ಹಸ್ತಾಂತರಿಸುವಾಗ, 'ಹದಿನೈದು ವರ್ಷಗಳ ಕಾಲ ಅದನ್ನು ಪರಭಾರೆ ಮಾಡುವಂತಿಲ್ಲ' ಎಂಬ ಷರತ್ತನ್ನು ವಿಧಿಸಿರುತ್ತಾರೆ. ಸರಿಯೇ. ಆದರೆ ಸಾಮಾನ್ಯಜ್ಞಾನದಂತೆ, ಈ ಅವಧಿ ಮುಗಿದ ನಂತರ ಈ ಷರತ್ತು ತನ್ನಷ್ಟಕ್ಕೇ ಅನೂರ್ಜಿತವಾಗುವುದಷ್ಟೆ. ಆದರೆ ಈಗ ಹಾಗಾಗುವುದಿಲ್ಲ. ಸಂಬಂಧಪಟ್ಟ ರೈತ ಮತ್ತೆ ಅರ್ಜಿ ಕೊಟ್ಟು ಆ ಷರತ್ತನ್ನು ತೆಗೆದ ಅಪ್ಪಣೆಗಾಗಿ ಕಾಯಬೇಕು. ಇದು ರೈತನಿಗೆ ಹಾಗೆಯೇ ಕಚೇರಿ ಸಿಬ್ಬಂದಿಗೆ ವ್ಯರ್ಥ ಕಾರ್ಯಬಾಹುಳ್ಯ, ಹೊರೆ.

ಇದಕ್ಕೆ ಸರಳ ಪರಿಹಾರವೆಂದರೆ, ಅವಧಿ ಮುಗಿದ ನಂತರ ಈ ಷರತ್ತು ತನ್ನಷ್ಟಕ್ಕೇ ಅನೂರ್ಜಿತವಾಗುತ್ತದೆ ಎಂಬ ಒಂದು ವಾಕ್ಯವನ್ನು ಆ ಷರತ್ತಿನಲ್ಲಿಯೇ ನಮೂದಿಸಿದರಾಯಿತು. ಇದು ದೊಡ್ಡ ಕೆಲಸವೇನಲ್ಲ. ಆದರೆ ಅಂಥದ್ದೊಂದು ಆದೇಶ ನೀಡುವ ಇಚ್ಛಾಶಕ್ತಿ ಬೇಕಷ್ಟೆ.

ಜಿ.ಮೃತ್ಯುಂಜಯ, ಬೆಂಗಳೂರು

ಚಿಕಿತ್ಸೆಗೆ ನೆರವಾಗಿ

ನನ್ನ ನಾಲ್ಕು ತಿಂಗಳ ಅವಳಿ ಹೆಣ್ಣು ಶಿಶುಗಳು ಅಪರೂಪದ ಕಾಯಿಲೆಯಾದ ಆನುವಂಶಿಕ ನರದೌರ್ಬಲ್ಯದಿಂದ ಬಳಲುತ್ತಿದ್ದು, ಹುಟ್ಟಿದಾಗಿನಿಂದಲೂ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿವೆ. ಜಾಗತಿಕವಾಗಿ ನಮಗೆ ತಿಳಿದುಬಂದಂತೆ, ಇದೇ ಬಗೆಯ ಕಾಯಿಲೆಯಿಂದ ಬಳಲುತ್ತಿರುವ ಹಲವು ಪೋಷಕರ ಅನುಭವ ಹಾಗೂ ವೈದ್ಯರ ಅಭಿಪ್ರಾಯದ ಪ್ರಕಾರ, ಆರಂಭಿಕ ಹಂತದಲ್ಲಿ ಸೂಕ್ತ ಚಿಕಿತ್ಸೆ ದೊರೆತರೆ ಕಾಯಿಲೆ ನಿಯಂತ್ರಣಕ್ಕೆ ಬರುತ್ತದೆ. ಆದರೆ ಇದಕ್ಕೆ ಅಪಾರ ಹಣ ವ್ಯಯಿಸಬೇಕಿದ್ದು, ನಾವು ಈಗಾಗಲೇ ನಮ್ಮ ಶಕ್ತಿ ಮೀರಿ ಹಣವನ್ನು ವ್ಯಯಿಸಿದ್ದೇವೆ. ಚಿಕಿತ್ಸೆಗೆ ಇನ್ನೂ ₹ 70 ಲಕ್ಷದ ಅಗತ್ಯವಿದೆ. ಖಾಸಗಿ ಕಂಪನಿಯೊಂದರ ಉದ್ಯೋಗಿಯಾದ ನನಗೆ ಅಷ್ಟೊಂದು ಹಣವನ್ನು ಭರಿಸುವುದು ಅಸಾಧ್ಯ. ದಾನಿಗಳು ದಯಮಾಡಿ ನೆರವಾಗಿ. ಬ್ಯಾಂಕ್ ಮಾಹಿತಿ: ಖಾತೆ ಸಂಖ್ಯೆ 055201535825, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್ ಬ್ರ್ಯಾಂಚ್, IFSC- ICIC0000552, ಫೋನ್ ಪೇ/ ಗೂಗಲ್ ಪೇ ಸಂಖ್ಯೆ– 9036224651

ಅಮೀತ್ ಎಂ. ನಂದಿಹಾಳ್, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕವಿರಾಜಮಾರ್ಗಕಾರನ ಎಲ್ಲೆಯ ಮೀರಿದ ಕನ್ನಡಿಗರ ನೆಲೆ

ಕನ್ನಡನಾಡು ಕಾವೇರಿಯಿಂದ ಗೋದಾವರಿವರೆಗೂ ಹಬ್ಬಿದೆ ಎಂದು ಕವಿರಾಜಮಾರ್ಗಕಾರ 10ನೇ ಶತಮಾನದಲ್ಲಿಯೇ ಹೇಳಿದ್ದ. ಈ ಬಗ್ಗೆ ತಮ್ಮ ಸಂಶೋಧನಾ ಗ್ರಂಥಗಳಲ್ಲಿ, ಸಂಶೋಧನಾ ಪತ್ರಿಕೆಗಳಲ್ಲಿ ಉಲ್ಲೇಖಿಸಿದವರ ಸಂಖ್ಯೆಗೆ ಲೆಕ್ಕವಿಲ್ಲ. ಆದರೆ ದೇಶದ ಜನಗಣತಿಯ ದತ್ತಾಂಶಗಳನ್ನು ವಿಶ್ಲೇಷಿಸಿರುವ ಸಂಶೋಧಕರೊಬ್ಬರು, ಕವಿರಾಜಮಾರ್ಗಕಾರ ಹೇಳಿದ್ದ ಎಲ್ಲೆಯನ್ನೂ ಮೀರಿ ಕನ್ನಡಿಗರ ನೆಲೆ ಇದೆ ಎಂದಿದ್ದಾರೆ

ಪ್ರಜಾವಾಣಿ ವಾರ್ತೆ

ದೇಶದ ಬೇರೆ ರಾಜ್ಯಗಳಲ್ಲಿ ನೆಲೆಸಿರುವ ಕನ್ನಡ ಭಾಷಿಕರ ಸಂಖ್ಯೆ 30 ಲಕ್ಷಕ್ಕೂ ಅಧಿಕ. ಹಾಗೆಂದು ಇವರೆಲ್ಲರೂ ಕರ್ನಾಟಕದಿಂದ ಅಲ್ಲಿಗೆ ಹೋಗಿ ನೆಲೆಸಿದವರು ಅಲ್ಲ. ಬದಲಿಗೆ ಅದೇ ನೆಲದಲ್ಲಿರುವ ಕನ್ನಡ ಭಾಷಿಕ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಕರ್ನಾಟಕದ ನೆರೆಯ ರಾಜ್ಯಗಳ ಜಿಲ್ಲೆಗಳಲ್ಲಿ ಕನ್ನಡ ಭಾಷಿಕ ಸಮುದಾಯವನ್ನು ಕಾಣಬಹುದಾಗಿದೆ. ಜಿಲ್ಲೆಯೊಂದರಲ್ಲಿ ಕನ್ನಡ ಭಾಷಿಕ ಸಮುದಾಯದ ಸಂಖ್ಯೆ 10,000ಕ್ಕೂ ಹೆಚ್ಚು ಇರುವ ಒಟ್ಟು 37 ಜಿಲ್ಲೆಗಳನ್ನು 2011ರ ಜನಗಣತಿಯಲ್ಲಿ ಗುರುತಿಸಲಾಗಿದೆ. ಕರ್ನಾಟಕದ ಜಿಲ್ಲೆಗಳು ಬಿಟ್ಟರೆ, ಹೊರರಾಜ್ಯದಲ್ಲಿ ಕನ್ನಡ ಭಾಷಿಕರು ಅತಿಹೆಚ್ಚು ಇರುವ ಜಿಲ್ಲೆ ಮಹಾರಾಷ್ಟ್ರದ ಸೊಲ್ಲಾಪುರ. ಸೊಲ್ಲಾಪುರದಲ್ಲಿ ಕನ್ನಡ ಮಾತನಾಡುವ 4 ಲಕ್ಷಕ್ಕೂ ಹೆಚ್ಚು ಜನರು ಇದ್ದಾರೆ.

ಜನಗಣತಿಯ ವೇಳೆ ಭಾಷಿಕ ಸಮುದಾಯದ ಸಂಖ್ಯೆಯನ್ನೂ ಲೆಕ್ಕ ಮಾಡಲಾಗುತ್ತದೆ. ಯಾವುದೇ ಭಾಷಿಕ ಸಮುದಾಯದ ಸಂಖ್ಯೆ 10,000ಕ್ಕಿಂತ ಹೆಚ್ಚು ಇದ್ದರೆ, ಅದನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಅವುಗಳ ಆಧಾರದಲ್ಲಿ ಸಿದ್ಧಪಡಿಸಲಾಗುವ ಭಾರತದ ಭಾಷಾ ಅಟ್ಲಾಸ್ ಮತ್ತು ಭಾರತೀಯ ಮಾತೃಭಾಷಾ ಸಮೀಕ್ಷೆಯ ವರದಿಗಳನ್ನು ಸಿದ್ಧಪಡಿಸಲಾಗುತ್ತದೆ.

ಆ ವರದಿಗಳನ್ನು ವಿಶ್ಲೇಷಿಸಿರುವ ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ, ಸಂಶೋಧಕ ಬಸವರಾಜ ಕೋಡಗುಂಟಿ ಅವರು ದೇಶದ 67 ಜಿಲ್ಲೆಗಳಲ್ಲಿ, ಕನ್ನಡ ಭಾಷಿಕರ ಸಂಖ್ಯೆ 10,000ಕ್ಕಿಂತ ಹೆಚ್ಚು ಇದೆ ಎಂಬುದನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಹೊರರಾಜ್ಯಗಳ 37 ಜಿಲ್ಲೆಗಳು ಸೇರಿವೆ.

ರಾಜ್ಯದ 17 ಜಿಲ್ಲೆಗಳಲ್ಲಿ ಕನ್ನಡ ಭಾಷಿಕರ ಸಂಖ್ಯೆ 10 ಲಕ್ಷಕ್ಕಿಂತಲೂ ಹೆಚ್ಚು ಇದ್ದರೆ, 13 ಜಿಲ್ಲೆಗಳಲ್ಲಿ ಕನ್ನಡ ಭಾಷಿಕರ ಸಂಖ್ಯೆ 10 ಲಕ್ಷಕ್ಕಿಂತ ಕಡಿಮೆ ಇದೆ. ಕೆಲವು ಜಿಲ್ಲೆಗಳಲ್ಲಿ ಕನ್ನಡ ಭಾಷಿಕರ ಸಂಖ್ಯೆ 5 ಲಕ್ಷಕ್ಕಿಂತ ಕಡಿಮೆ ಇದೆ. ಕನ್ನಡ ಭಾಷಿಕರ ಸಂಖ್ಯೆ ಕಡಿಮೆ ಇರುವ ಜಿಲ್ಲೆಗಳಲ್ಲಿ ದ್ವಿಭಾಷಿಕರ ಸಂಖ್ಯೆ ಹೆಚ್ಚು ಇದೆ. ಆ ಜಿಲ್ಲೆಗಳಲ್ಲಿನ ಜನರು ಮನೆಭಾಷೆಯಾಗಿ ತಮ್ಮ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನು ಬಳಸುತ್ತಾರೆ. ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

ಕರ್ನಾಟಕದಾಚೆ ಕನ್ನಡ ಭಾಷಿಕರ ಸಂಖ್ಯೆ ಅತಿಹೆಚ್ಚು ಇರುವುದು ತಮಿಳುನಾಡಿನಲ್ಲಿ. ಕರ್ನಾಟಕಕ್ಕೆ ಹೊಂದಿಕೊಂಡಿರುವ ಕೃಷ್ಣಗಿರಿ, ಈರೋಡ್, ನೀಲಗಿರಿ ಜಿಲ್ಲೆಗಳಲ್ಲಿ ಕನ್ನಡ ಭಾಷಿಕರ ಸಂಖ್ಯೆ ಅತ್ಯಧಿಕವಾಗಿದೆ. ಈ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಸೇಲಂ, ತಿರುಪ್ಪೂರು, ಕೊಯಮತ್ತೂರು ಮತ್ತು ಥೇಣಿ ಜಿಲ್ಲೆಗಳಲ್ಲೂ ಕನ್ನಡ ಭಾಷಿಕರ ಸಂಖ್ಯೆ ಗಣನೀಯ ಮಟ್ಟದಲ್ಲೇ ಇದೆ. ಮಹಾರಾಷ್ಟ್ರದ ಸೊಲ್ಲಾಪುರ, ಕೊಲ್ಹಾಪುರ, ಸಾಂಗ್ಲಿ, ಪುಣೆ ಮತ್ತು ಠಾಣೆ ಜಿಲ್ಲೆಗಳಲ್ಲೂ ಕನ್ನಡ ಭಾಷಿಕರ ಸಂಖ್ಯೆ ದೊಡ್ಡದೇ ಇದೆ ಎನ್ನುತ್ತದೆ ಬಸವರಾಜ ಅವರ ಸಂಶೋಧನಾ ದತ್ತಾಂಶಗಳು.

ಕನ್ನಡ ಭಾಷಿಕರ ಸಂಖ್ಯೆ 10,000ಕ್ಕಿಂತ ಹೆಚ್ಚು ಇರುವ ಹೊರರಾಜ್ಯ ಜಿಲ್ಲೆಗಳು

ರಾಜ್ಯ	ಒಟ್ಟು ಜಿಲ್ಲೆಗಳು	ಕನ್ನಡ ಭಾಷಿಕರ ಸಂಖ್ಯೆ ಹತ್ತು ಸಾವಿರಕ್ಕಿಂತ ಹೆಚ್ಚು ಇರುವ ಜಿಲ್ಲೆಗಳು
ಆಂಧ್ರ ಪ್ರದೇಶ	14	3
ತೆಲಂಗಾಣ	9	5
ಮಹಾರಾಷ್ಟ್ರ	36	9
ತಮಿಳುನಾಡು	32	16
ಕೇರಳ	14	2
ಗೋವಾ	2	2

ಆಧಾರ: ಬಸವರಾಜ ಕೋಡಗುಂಟಿ ಅವರ ದತ್ತಾಂಶ ವಿಶ್ಲೇಷಣಾ ವರದಿ, ಕೇಂದ್ರ ಸರ್ಕಾರದ ಭಾರತೀಯ ಭಾಷಾ ಅಟ್ಲಾಸ್ ವರದಿ ಮತ್ತು ಭಾರತೀಯ ಮಾತೃಭಾಷಾ ಸಮೀಕ್ಷೆ

ಕನ್ನಡಿಗರು ಇರುವ ಜಿಲ್ಲೆ ಮತ್ತು ಕನ್ನಡಿಗರ ಸಂಖ್ಯೆ

ಕೆಂಪು ಬಣ್ಣದಲ್ಲಿರುವ ಅಂಕಿಗಳನ್ನು ಹೊರತುಪಡಿಸಿ, ಉಳಿದೆಲ್ಲವೂ ಲಕ್ಷಗಳಲ್ಲಿ



* ಎಲ್ಲ ಅಂಕಿಅಂಶಗಳು 2011ರ ಜನಗಣತಿ ವರದಿಯನ್ನು ಆಧಾರಿಸಿವೆ

30 ಲಕ್ಷ ಹೊರರಾಜ್ಯ ಕನ್ನಡಿಗರು

4.37 ಕೋಟಿ ಭಾರತದಾದ್ಯಂತ ಇರುವ ಕನ್ನಡ ಭಾಷಿಕರ ಸಂಖ್ಯೆ

4.065 ಕೋಟಿ ಕರ್ನಾಟಕದಲ್ಲಿ ಇರುವ ಕನ್ನಡ ಭಾಷಿಕರ ಸಂಖ್ಯೆ

30.55 ಕೋಟಿ ಬೇರೆ ರಾಜ್ಯಗಳಲ್ಲಿ ಇರುವ ಕನ್ನಡ ಭಾಷಿಕರ ಸಂಖ್ಯೆ

12.86 ಲಕ್ಷ/ ತಮಿಳುನಾಡು

10 ಲಕ್ಷ/ ಮಹಾರಾಷ್ಟ್ರ

5.34 ಲಕ್ಷ/ ಆಂಧ್ರ ಪ್ರದೇಶ ಮತ್ತು ತೆಲಂಗಾಣ

ಹೊರರಾಜ್ಯಗಳಲ್ಲಿ...

86,995 ಕೇರಳ

67,923 ಗೋವಾ

79,722 ದೇಶದ ಇತರೆ ರಾಜ್ಯಗಳು

ದಕ್ಷಿಣ ಕನ್ನಡ ಮತ್ತು ಕೊಡಗು

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಕನ್ನಡ ಮಾತನಾಡುವ ಹೆಚ್ಚಿನ ಜನರು ಇಲ್ಲ ಎನ್ನುವುದನ್ನು ಈ ದತ್ತಾಂಶಗಳು ಹೇಳುತ್ತವೆ. ಈ ಜಿಲ್ಲೆಗಳು 1 ಲಕ್ಷಕ್ಕಿಂತ ಹೆಚ್ಚು ಮತ್ತು 2 ಲಕ್ಷಕ್ಕಿಂತ ಕಡಿಮೆ ಕನ್ನಡ ಮಾತನಾಡುವ ಜಿಲ್ಲೆಗಳ ವಿಭಾಗದಲ್ಲಿ ಬರುತ್ತವೆ. ಯಾಕೆಂದರೆ, ಈ ಜಿಲ್ಲೆಗಳಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಗಳನ್ನು ಮಾತನಾಡುತ್ತಾರೆ. ದಕ್ಷಿಣ ಕನ್ನಡದಲ್ಲಿ ತುಳು ಭಾಷೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾತನಾಡುತ್ತಾರೆ. ಕೊಡಗಿನಲ್ಲಿ ಕೊಡವ ಭಾಷೆಯನ್ನು ಮಾತನಾಡುತ್ತಾರೆ.

ಫೆ.9ಕ್ಕೆ ಒಟಿಟಿಗೆ 'ಕಾಟೇರ'

ಕಳೆದ ವರ್ಷ ಡಿಸೆಂಬರ್ 29ರಂದು ಬಿಡುಗಡೆಗೊಂಡು ಪ್ರೇಕ್ಷಕರಿಂದ ಅತ್ಯುತ್ತಮ ಪ್ರತಿಕ್ರಿಯೆ ಪಡೆದ ನಟ ದರ್ಶನ್ ಅಭಿನಯದ 'ಕಾಟೇರ' ಸಿನಿಮಾ ಫೆ.9ರಂದು ಒಟಿಟಿ ವೇದಿಕೆ ಜೀ5ನಲ್ಲಿ ಬಿಡುಗಡೆಯಾಗಲಿದೆ.

ಸಾಮಾನ್ಯವಾಗಿ ಬಿಡುಗಡೆಯಾದ 30–40 ದಿನಗಳಲ್ಲಿ ಸಿನಿಮಾಗಳು ಒಟಿಟಿಗೆ ಲಗ್ಗೆ ಇಡುತ್ತವೆ. 'ಕಾಟೇರ', 43 ದಿನಗಳ ಬಳಿಕ ಒಟಿಟಿ ವೇದಿಕೆಗೆ ಹೆಜ್ಜೆ ಇಡಲಿದೆ. 'ಕಾಟೇರ' ಬಿಡುಗಡೆಯಾಗಿ ಆರನೇ ವಾರವೂ ಕೆಲವಡೆ ಉತ್ತಮ ಪ್ರದರ್ಶನ ಕಾಣುತ್ತಿದೆ. ಪ್ರಸ್ತುತ 196 ಚಿತ್ರಮಂದಿರ ಹಾಗೂ 63 ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರದರ್ಶನ ಕಾಣುತ್ತಿದೆ. 'ಯಜಮಾನ' ಬಳಿಕ ದರ್ಶನ್ ಸಿನಿಪಯಣದ ಗ್ರಾಫ್ ಏರಿಸಿದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ನೂರು ಕೋಟಿಗೂ ಅಧಿಕ ಹಣ ಬಾಚಿದೆ. ನೆಲದ ಕಥೆಯಿದ್ದ ಈ ಸಿನಿಮಾವನ್ನು ಪ್ರೇಕ್ಷಕರು ಮೆಚ್ಚಿಕೊಂಡಿದ್ದರು. ರಾಕ್‌ಲೈನ್ ವೆಂಕಟೇಶ್ ನಿರ್ಮಿಸಿರುವ ಈ ಸಿನಿಮಾ ಈಗಾಗಲೇ ಜೀ5 ಜೊತೆ ವಹಿವಾಟು ಮುಗಿಸಿದೆ. ನಿರ್ಮಾಪಕರು ಹಾಗೂ ಒಟಿಟಿ ವೇದಿಕೆ ಮಾಡಿಕೊಂಡ ಒಡಂಬಡಿಕೆಯಂತೆ ಪ್ರೀಮಿಯರ್ ಆಗಲಿದೆ.

'ಕಾಟೇರ' ಮೂಲಕ 1970ರ ಕಾಲಘಟ್ಟದ ಕಥೆಯನ್ನು ತೆರೆಮೇಲೆ ತಂದಿದ್ದರು ನಿರ್ದೇಶಕ ತರುಣ್ ಸುಧೀರ್. ನಟಿ ಮಾಲಾಶ್ರೀ ಪುತ್ರಿ ಆರಾಧನಾ ರಾಮು ಈ ಚಿತ್ರದಲ್ಲಿ ದರ್ಶನ್‌ಗೆ ಜೋಡಿಯಾಗಿ ನಟಿಸಿದ್ದಾರೆ. ಸಿನಿಮಾದ ಕಥೆ ಬರೆದ ಜಡೇಶ್ ಕುಮಾರ್ ಹಂಪಿ, ಸಂಭಾಷಣೆ ಬರೆದ ಮಾಸ್ತಿಗೂ ಈ ಸಿನಿಮಾ ಮರೆಯಲಾಗದ ಯಶಸ್ಸು ನೀಡಿದೆ.

'ಹಯಗ್ರೀವ'ನಾದ ಧನ್ವೀರ್

'ಕೈವ' ಸಿನಿಮಾ ಬಳಿಕ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿರುವ ಧನ್ವೀರ್ 'ಹಯಗ್ರೀವ'ನಾಗಿ ತೆರೆಗೆ ಬರಲು ಸಜ್ಜಾಗಿದ್ದಾರೆ. ಚಿತ್ರದ ಮುಹೂರ್ತ ಇತ್ತೀಚೆಗೆ ನಾಡದೇವತೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ನಡೆಯಿತು.

ಸಮೃದ್ಧಿ ಮಂಜುನಾಥ್ ತಮ್ಮ ಕೆ.ವಿ.ಸಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ರಘುಕುಮಾರ್ ಒ.ಆರ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಧನ್ವೀರ್‌ಗೆ ಜೋಡಿಯಾಗಿ 'ಸಲಗ' ಖ್ಯಾತಿಯ ಸಂಜನಾ ಆನಂದ್ ನಟಿಸುತ್ತಿದ್ದಾರೆ. ಈ ಸಿನಿಮಾದಲ್ಲಿ ಮತ್ತೊಬ್ಬ ನಾಯಕನಿದ್ದು, ಅವರು ಯಾರು ಎಂದು ಚಿತ್ರ ಬಿಡುಗಡೆಯವರೆಗೂ ಗೌಪ್ಯವಾಗಿಡಲಾಗುವುದು ಎಂದಿದೆ ಚಿತ್ರತಂಡ.

'ಚಿತ್ರದಲ್ಲಿ ಮುಖ್ಯವಾಗಿ ಪೌರಾಣಿಕ ಅಂಶಗಳ ಜೊತೆಗೆ ಕ್ರೈಮ್ ಇದೆ. ಪ್ರೀತಿ, ಭಾವನಾತ್ಮಕ ಅಂಶಗಳ ಜೊತೆಗೆ ಕಮರ್ಷಿಯಲ್ ಚಿತ್ರಕ್ಕೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಬೆಂಗಳೂರಿನಲ್ಲಿ ಇಡೀ ಚಿತ್ರದ ಚಿತ್ರೀಕರಣ ನಡೆಯಲಿದೆ. ರಂಗಾಯಣ ರಘು, ತಾರಾ, ಸಾಧು ಕೋಕಿಲ, ರವಿಶಂಕರ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಬರೆದಿದ್ದೇನೆ' ಎಂದು ಚಿತ್ರದ ಮಾಹಿತಿ ಹಂಚಿಕೊಂಡರು ರಘುಕುಮಾರ್.

'ಇದು ನನ್ನ ಐದನೇ ಚಿತ್ರ' ಎಂದು ಮಾತು ಆರಂಭಿಸಿದ ಧನ್ವೀರ್, 'ಬಹಳ ದಿನಗಳಿಂದ ಯೋಜನೆ ರೂಪಿಸಿ ಈ ಚಿತ್ರದ ಚಿತ್ರೀಕರಣಕ್ಕೆ ಇಳಿಯುತ್ತಿದ್ದೇವೆ. 'ಬಜಾರ್' ನಂತರ ಈ ಚಿತ್ರಕ್ಕಾಗಿ ಸಿಕ್ಸ್ ಪ್ಯಾಕ್ ಮಾಡಿಕೊಳ್ಳುತ್ತಿದ್ದೇನೆ. ಒಂದೇ ಹಂತದಲ್ಲಿ ಚಿತ್ರೀಕರಣ ನಡೆಯಲಿದೆ' ಎಂದರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಭಾರತ ನ್ಯಾಯಯಾತ್ರೆಯನ್ನು ಭಾರತ ಆಕ್ರಮಿತ ಅರುಣಾಚಲ ಪ್ರದೇಶದಿಂದ ಆರಂಭಿಸದೆ ಮಣಿಪುರದಿಂದ ಆರಂಭಿಸಿದ್ದಾರೆ. ಚೀನಾದ ಸಾರ್ವಭೌಮತ್ವವನ್ನು ಗೌರವಿಸಿದ್ದಕ್ಕಾಗಿ ರಾಹುಲ್ ಅವರಿಗೆ ಚೀನಾ ಅಧ್ಯಕ್ಷ ಜಿನ್‌ಪಿಂಗ್ ಅವರು ಧನ್ಯವಾದ ಅರ್ಪಿಸಿದ್ದಾರೆ' ಎಂದು ಗ್ಲೋಬಲ್ ಟೈಮ್ಸ್ ಸುದ್ದಿ ಸಂಸ್ಥೆಯು ತನ್ನ ಜಾಲತಾಣದಲ್ಲಿ ಹಂಚಿಕೊಂಡಿರುವ ಸ್ಕ್ರೀನ್‌ಶಾಟ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ನ್ಯಾಯಯಾತ್ರೆಯ ಮಾರ್ಗವನ್ನು ಸಾರ್ವಜನಿಕಗೊಳಿಸಿದ ದಿನವೇ ನಾನು ಹೇಳಿದ್ದೆ. ಅರುಣಾಚಲ ಪ್ರದೇಶವನ್ನು ಕೈಬಿಡಲಾಗಿದೆ ಎಂದು. ಕಾಂಗ್ರೆಸ್ ಅಂದರೆ, ಚೀನಾದ ಫ್ರಾಂಚೈಸಿ' ಎಂದು ಹಲವರು ತನ್ನ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

'ಗ್ಲೋಬಲ್ ಟೈಮ್ಸ್' ಸುದ್ದಿ ಸಂಸ್ಥೆಯ ಸಾಮಾಜಿಕ ಜಾಲತಾಣಗಳನ್ನು ಹುಡುಕಲಾಯಿತು. ರಾಹುಲ್ ಗಾಂಧಿಯ ಬಗ್ಗೆ ಅಥವಾ ಭಾರತ ನ್ಯಾಯಯಾತ್ರೆಯ ಕುರಿತು ನಿರ್ದಿಷ್ಟವಾಗಿ ಹುಡುಕಲಾಯಿತು. ಕೆಲವು ವರದಿಗಳು ಕಂಡವು. ಆದರೆ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ಯಾವುದೇ ವರದಿಯೂ ದೊರೆಯಲಿಲ್ಲ. ಈ ಕುರಿತು ಭಾರತೀಯ ಮಾಧ್ಯಮ ಮಾಡಿದ ಯಾವ ವರದಿಯೂ ದೊರೆಯಲಿಲ್ಲ. ಸುದ್ದಿ ಸಂಸ್ಥೆ ಮಾಡಿದೆ ಎನ್ನಲಾದ ಪೋಸ್ಟ್ ಅನ್ನು ಗಮನಿಸಿದಾಗ ಅದೊಂದು ಎಡಿಟ್ ಮಾಡಲಾದ ಚಿತ್ರ ಎಂದು ತಿಳಿದುಬಂದಿತು. ಹುಡುಗಿಯೊಬ್ಬರು ನಗುತ್ತಿರುವ ಚಿತ್ರವೊಂದು ಪೋಸ್ಟ್‌ನಲ್ಲಿದೆ. ಆದ್ದರಿಂದ, ರಾಹುಲ್ ಗಾಂಧಿ ಅವರಿಗೆ ಚೀನಾ ಅಧ್ಯಕ್ಷ ಅಭಿನಂದನೆ ತಿಳಿಸಿದ್ದಾರೆ ಎನ್ನುವುದು ಸುಳ್ಳು ಸುದ್ದಿ ಎಂದು 'ಇಂಡಿಯಾ ಟುಡೆ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಜೀವವೆಂದರೆ ನಾವೂ ಅಲ್ಲವೇ?

ನುಡಿ ಬೆಳಗು



ಪಿ. ಚಂದ್ರಿಕಾ

ಗುರು ಶಿಷ್ಯನಿಗೆ ಬೋಧಿಸಿದ್ದು ಅಹಿಂಸಕ ವ್ರತವನ್ನು. ಶಿಷ್ಯ ಅದನ್ನು ತಪ್ಪದೆ ಪಾಲಿಸುತ್ತಾ ಬರುತ್ತಾನೆ. ಎಂಥಾ ಕಷ್ಟದ ಸಮಯದಲ್ಲೂ ಅವನು ಇನ್ನೊಬ್ಬರಿಗೆ ತೊಂದರೆ ಕೊಡುವುದನ್ನು ಊಹೆ ಕೂಡಾ ಮಾಡುತಿರಲಿಲ್ಲ. ಗುರು ಒಮ್ಮೆ ಪರ್ಯಟನೆಗಾಗಿ ಹೊರಡುತ್ತಾ, 'ನೀತಿ ನಿಯಮಗಳನ್ನು ಮೀರಬೇಡ. ಜನರ ಒಳಿತನ್ನು ಬಯಸುವ ನಾವು ಯಾವತ್ತು ಯಾರಿಗೂ ಹಿಂಸೆಯನ್ನು ಕೊಡಬಾರದು' ಎನ್ನುತ್ತಾರೆ.

ಶಿಷ್ಯ ಗುರುವಿನ ಮಾತಿಗೆ ಬೆಲೆಯನ್ನು ಕೊಟ್ಟು ಹಾಗೇ ನಡೆದುಕೊಳ್ಳುತ್ತಾನೆ. ಗುರುವಿಲ್ಲದ ಆಶ್ರಮವಾದ್ದರಿಂದ ಕೆಲ ಪುಂಡರು ಸಣ್ಣ ಹುಡುಗ ಎಂದು ಅವನನ್ನು ಹಿಂಸೆ ಮಾಡಲು ತೊಡಗುತ್ತಾರೆ. ಧ್ಯಾನಕ್ಕೆ ಕೂತಾಗ ತಮಾಷೆ ಎನ್ನುವಂತೆ ಕಲ್ಲಿಂದ ಹೊಡೆಯುತ್ತಾರೆ, ಮೈಮೇಲೆ ಚೇಳು, ಜರಿಯಂಥಾ ಪ್ರಾಣಿಗಳನ್ನು ಬಿಟ್ಟು ವಿನೋದ ನೋಡುತ್ತಾರೆ. ಏನನ್ನೂ ಹೇಳದೆ ಅಷ್ಟನ್ನೂ ತಡೆದುಕೊಂಡು ಗುರುವಿನ ಮಾತುಗಳನ್ನು ನೆನೆದು ಶಿಷ್ಯ ದಿನಗಳನ್ನು ಸಾಗಿಸುತ್ತಿರುತ್ತಾನೆ.

ಪರ್ಯಟನೆಯ ಕೆಲ ದಿನಗಳ ನಂತರ ಗುರುವು ಮರಳಿ ಗುರುಕುಲಕ್ಕೆ ಬರುತ್ತಾರೆ. ಶಿಷ್ಯ ಸೊರಗಿ ಹೋಗಿರುತ್ತಾನೆ. ಅದನ್ನು ನೋಡಿ ಗುರುವಿಗೆ ಖೇದವೆನ್ನಿಸಿ, 'ನೀನು ಯಾಕೆ ಹೀಗಾದೆ?' ಎಂದು ಕೇಳುತ್ತಾರೆ. 'ನಾನು ಸಣ್ಣ ಹುಡುಗ ಎಂದು ಸುತ್ತ ಮುತ್ತಲಿನ ಪುಂಡ ಹುಡುಗರು ನನ್ನನ್ನು ಗೋಳುಹೊಯ್ದುಕೊಂಡು ಹೀಗೆಲ್ಲ ಮಾಡಿದರು' ಎನ್ನುತ್ತಾನೆ ಶಿಷ್ಯ.

ಗುರು ಕೋಪದಿಂದ 'ನೀನೊಬ್ಬ ಮೂರ್ಖ' ಎನ್ನುತ್ತಾರೆ. ಶಿಷ್ಯನಿಗೆ ಅಚ್ಚರಿ, 'ನೀವು ತಾನೆ ಹೇಳಿದ್ದು ಅಹಿಂಸಕ ವ್ರತವನ್ನು ಪಾಲಿಸು ಅಂತ' ಎನ್ನುತ್ತಾನೆ. 'ಹೌದು ಹೇಳಿದೆ ಇನ್ನೊಬ್ಬರಿಗೆ ತೊಂದರೆ ಕೊಡಬೇಡ, ಹಿಂಸೆ ಮಾಡಬೇಡ ಎಂದು. ನಿನ್ನನ್ನು ಹಿಂಸೆಗೆ ಒಳಗಾಗು ಎಂದು ಹೇಳಿದೆನೇ? ಹೆಡೆ ತೆರೆದ ಹಾವು ಯಾವಾಗಲೂ ಕಚ್ಚುವುದಿಲ್ಲ, ಹೆಡೆ ತೆರೆದದ್ದಕ್ಕೆ ನಾವು ಹೆದರುತ್ತೇವೆ. ಹಾಗೆಯೇ ಸಿಂಹ, ಕಡೆಗೆ ನಾಯಿ ಕೂಡಾ. ಇರುವೆಯನ್ನೇ ನೋಡು ತನ್ನ ಮೇಲೆ ಕಾಲಿಡಲು ಬಂದವರನ್ನು ಕಚ್ಚಿ ತನ್ನನ್ನು ತಾನು ರಕ್ಷಿಸಿಕೊಳ್ಳಲು ಯತ್ನಿಸುತ್ತದೆ. ಪ್ರತಿಕ್ರಿಯಿಸದಿದ್ದರೆ ಅದನ್ನು ದೌರ್ಬಲ್ಯ ಎಂದುಕೊಳ್ಳುತ್ತಾರೆ. ಇನ್ನೊಬ್ಬರಿಗೆ ಹಾನಿಯಾಗಬಾರದು ಸರಿ ನಾವು ಹಾನಿಗೊಳಗಾದರೂ ಅದು ಜೀವ ಹಾನಿಯೇ. ನಮ್ಮನ್ನು ನಾವು ರಕ್ಷಿಸಿಕೊಳ್ಳದೇ ಹೋದರೆ ಅದೂ ತಪ್ಪೇ' ಎನ್ನುತ್ತಾರೆ.

ಆಗ ಶಿಷ್ಯನಿಗೆ ಅರ್ಥವಾಯಿತು, 'ಜೀವ ಎಂದರೆ ನಾವೂ ಸೇರುತ್ತೇವೆ' ಎಂದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಫೆಬ್ರುವರಿ 6, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಏಕಾದಶಿ ಗಂ. 06-08 **ನಕ್ಷತ್ರ:** ಜ್ಯೇಷ್ಠ ಗಂ. 07-35 ನಂತರ ಮೂಲಾ ಗಂ. 30-27
ಯೋಗ: ವ್ಯಾಘಾತ ಗಂ. 08-50, ಮಕರ ಮಾಸದ 23 ನೇ ದಿನ, **ಮಳೆನಕ್ಷತ್ರ:** ಶ್ರವಣ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 07-00 **ಸೂರ್ಯಾಸ್ತ:** 06-29,
ಮುಸ್ಲಿಂ ದಿನಾಂಕ: 25 ರಜಬ್
ದಿನ ವಿಶೇಷ: ಷಟ್‌ತಿಲ ಏಕಾದಶಿ, **ಅದೃಷ್ಟ ಸಂಖ್ಯೆ:** 2, 5

ಮೇಷ: ನಿಮ್ಮ ಸಾಂಸಾರಿಕ ಮತ್ತು ವ್ಯಾಪಾರ ವ್ಯವಹಾರದ ವಿಚಾರಗಳಲ್ಲಿ ಗೌಪ್ಯತೆ ಕಾಪಾಡಿಕೊಳ್ಳಿರಿ. ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು. ವಾಣಿಜ್ಯ ಉದ್ಯಮಿಗಳಿಗೆ ವಿಶೇಷ ದಿನ.

ವೃಷಭ: ಹಿತಶತ್ರುಗಳ ದ್ವೇಷ ಅಸೂಯೆಯಿಂದ ಬರುತಿದ್ದ ಮನದ ಕ್ಲೇಶ ದೂರಾಗುತ್ತದೆ. ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ. ಏಳಿಗೆ ಹೊಂದುವಿರಿ.

ಮಿಥುನ: ವೃತ್ತಿಯಲ್ಲಿನ ಬದಲಾವಣೆ ಮಾಡುವ ಬಗ್ಗೆ ಹೆಂಡತಿಯೊಡನೆ ಮತ್ತು ಸ್ನೇಹಿತರೊಡನೆ ಚರ್ಚಿಸಿ ತೀರ್ಮಾನಿಸುವುದು ಒಳ್ಳೆಯದು. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಅಥವಾ ರಿಪೇರಿಗಳಿಂದ ಆದಾಯ ಹೆಚ್ಚುವುದು.

ಕರ್ಕಾಟಕ: ನಿಮ್ಮ ಪ್ರಾಮಾಣಿಕತೆಯ ಫಲವಾಗಿ ಉದ್ಯೋಗದಲ್ಲಿ ಒಳ್ಳೆಯ ಸ್ಥಾನಮಾನ ಸಿಗಲಿದೆ. ಸಣ್ಣ ನೋವಿಗಾಗಿ ವೈದ್ಯರನ್ನು ಭೇಟಿ ಮಾಡಿದ ನಿಮಗೆ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ.

ಸಿಂಹ: ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಧೈರ್ಯದಿಂದ ಮುನ್ನುಗ್ಗಿ. ವ್ಯವಹಾರಸ್ಥರು ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಒಪ್ಪಿಗೆ ನೀಡಲು ಈ ದಿನ ಸೂಕ್ತವಲ್ಲ.

ಕನ್ಯಾ: ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಅರಿತುಕೊಂಡು ಮುಂದುವರಿಯುವಿರಿ. ನಿಮ್ಮ ಆದ್ಯತೆ ನಿಮ್ಮ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ. ಕೆಲಸಗಳು ಪೂರ್ವ ಯೋಜನೆಯಂತೆ ನಡೆಯುವುದು ಕಷ್ಟಕರ.

ತುಲಾ: ತಂದೆಯೊಡನೆ ಕೂಡಿ ಅಧ್ಯಾತ್ಮಿಕ ಚಟುವಟಿಕೆಗಳಲ್ಲಿ ವಿಶೇಷ ಪಾತ್ರ ವಹಿಸುವ ಅವಕಾಶ ಈ ದಿನ ನಿಮ್ಮದಾಗಲಿದೆ. ವ್ಯವಹಾರದಲ್ಲಿ ಸಹೋದರನನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸಬಹುದು.

ವೃಶ್ಚಿಕ: ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ವಿಶೇಷವಾಗಿ ಸಂಗೀತ ಶಾಸ್ತ್ರದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅಧಿಕ ಸಮಯ ಸಿಗುವುದು.

ಧನು: ಹಲವಾರು ಅವಕಾಶಗಳು ನಿಮಗೆದುರಾಗಿದ್ದರೂ ಸರಿಯಾಗಿ ಇರುವುದನ್ನೇ ಆಯ್ಕೆ ಮಾಡುವಿರಿ. ಕಾರ್ಯದೊತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ.

ಮಕರ: ಕಾರ್ಯ ಸಾಧನೆಗೆ ಕೆಲವರ ಅಡ್ಡಗಾಲು ಹಾಗೂ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಕಿಂಚಿತ್ ಕಾರ್ಯಸಿದ್ಧಿಯಿಂದಲೂ ನೆಮ್ಮದಿ ಕಂಡು ಬರಲಿದೆ. ಮಕ್ಕಳ ಮೇಲಿದ್ದ ಮುನಿಸು ಕರಗುವುದು.

ಕುಂಭ: ತಾಯಿಯ ಆರೋಗ್ಯದ ಬಗ್ಗೆ ಗಮನವನ್ನು ಹರಿಸಿ; ಅದರಲ್ಲೂ ಹೊಟ್ಟೆಗೆ ಸಂಬಂಧಿಸಿದ ರೋಗ ಲಕ್ಷಣಗಳು ಅನುಭವಕ್ಕೆ ಬಂದಲ್ಲಿ, ತಡಮಾಡದೆ ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆಯುವುದು ಉತ್ತಮ.

ಮೀನ: ಮಕ್ಕಳ ಮೇಲಿನ ವ್ಯಾಮೋಹ ಅತಿಯಾಗಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಘಟನೆ ನಿಮ್ಮ ಬಾಳಲ್ಲಿ ನಡೆಯಬಹುದು. ಕಂಪನಿಯ ಹಣಕಾಸಿನ ನಿರ್ವಹಣೆಯಲ್ಲಿ ನಿಮ್ಮ ಪಾತ್ರ ಪ್ರಮುಖವಾಗುವುದು.

ಪದಬಂಧ 5583

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರದ ನಡುವೆ ಬಂದಿರುವ ದೊಡ್ಡ ಪ್ರವಾಹ (4)
3.ಹಂಚಿಕೆದಾರ ಇಲ್ಲಿ ತಿರುಗಿದ್ದಾನಲ್ಲಾ! (4)
5.ಕೊನೆಗೆ ಬೆಲೆಯನ್ನಿಟ್ಟು ನೀಡಿದ ಸಲುಗೆ (3)
6.ಭ್ರೂಣವನ್ನು ಆವರಿಸಿರುವ ಪೊರೆ (3)
8.ಸಂಗನ ಬದುಕಿನಲ್ಲಾದ ಘಟನೆ (3)
10.ಆ ಸಾರೆ ನೀಡಿದ ಆಶ್ರಯ! (3)
11.ಪಾಯಸ ನೆಕ್ಕುತ್ತಿರುವ ಕಾಗೆ (3)
13.ಅಳುವಿನೊಂದಿಗೆ ಹೆದರಿಕೆ ಬಂದಿದೆ (3)
15.ಮೊದಲಿದ್ದ ಸ್ಥಿತಿಯಿದು (4)
16.ಯುದ್ಧದ ನಗಾರಿಯಿದು (4)

ಮೇಲಿಂದ ಕೆಳಕ್ಕೆ

1.ಮಜವಾಗಿ ಆಳ್ವಿಕೆ ನಡೆಸಿದ ಚಕ್ರವರ್ತಿ (4)
2.ರಸದಲ್ಲಿನ ಜೋರು (3)
3.ಈತ ಕಬ್ಬಿಣದ ಕೆಲಸಗಾರ (3)
4.ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ! (4)
7.ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9.ದಾಯಾದಿ ಮಾಡಿರುವ ಪಾವತಿ (3)
10.ಖರ್ಚು ಮತ್ತು ವೆಚ್ಚ (4)
12.ಒಳ್ಳೆಯ ಆಚಾರವುಳ್ಳವನು (4)
13.ದೇವತೆಗಳ ಜನನಿ (3)
14.ಅಷ್ಟ ದಿಕ್ಪಾಲಕರಲ್ಲಿ ಈತ ಅತೀ ಶ್ರೀಮಂತ (3)



5582ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಅನುಭವಿ
5.ವಲೀಮುಖ 7.ವಿನ್ಯಾಸ
8.ಅಂತರ್ದೇಶಿಯ 11.ಬಲಿಷ್ಠ
12.ರಸಹೀನ 14.ರಿಕ್ತಹಸ್ತ
15.ಅಪಘಾತ

ಮೇಲಿಂದ ಕೆಳಕ್ಕೆ:
1.ಗೊತ್ತುವಳಿ 2.ಗುದಾಮು
4.ವಿರಸ 6.ಖಚಿತ
7.ವಿಜಯ 8.ಅಂಗುಷ್ಠ
9.ಶೀಕರ 10.ಜನಹಿತ
11.ಬತೇರಿ 13.ಸಲ್ಲಾಪ

ಸುಡೊಕು 5968

	2			8				
			1		6			3
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5967 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	25099-31999
ಕೋಕ	16099-28999
ಫ್ಯಾಕ್ಟರಿ	10869-21299
ಹಳೆಚಾಲಿ	35899-37801
ಹೊಸಚಾಲಿ	32569-34819
ಸಾಗರ	
ಬಿಳಿಗೋಟು	13569-30210
ಚಾಲಿ	28100-37001
ಕೋಕ	14299-29899
ಕೆಂಪುಗೋಟು	24899-37169
ರಾಶಿ	30899-48799
ಸಿಪ್ಪೆಗೋಟು	7511-19509
ಶಿವಮೊಗ್ಗ	
ಬೆಟ್ಟೆ	41199-54569
ಗೊರಬಲು	16519-35619
ರಾಶಿ	35009-49111
ಸರಕು	41000-81896
ಸಿದ್ದಾಪುರ	
ಬಿಳಿಗೋಟು	29199-31689
ಚಾಲಿ	35899-37899
ಕೋಕ	28099-32000
ಹೊಸಚಾಲಿ	30399-36499
ಕೆಂಪುಗೋಟು	31019-35899
ರಾಶಿ	43009-47299
ತಟ್ಟಿಬೆಟ್ಟೆ	41289-46099
ಶಿರಸಿ	
ಬೆಟ್ಟೆ	38699-44699
ಬಿಳಿಗೋಟು	25339-33499
ಚಾಲಿ	36099-38899
ಕೆಂಪುಗೋಟು	31898-36699
ರಾಶಿ	43600-47859
ಯಲ್ಲಾಪುರ	
ಅಪಿ	54100-59629
ಬಿಳಿಗೋಟು	24009-33691
ಚಾಲಿ	33809-38819
ಕೋಕ	18899-30166
ಕೆಂಪುಗೋಟು	25430-37569
ರಾಶಿ	46889-52935
ತಟ್ಟಿಬೆಟ್ಟೆ	37070-45819

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,853
ಇಂದಿನ ಅಂತ್ಯ	21,771
▼	82
ದಿನದ ಗರಿಷ್ಠ	21,726

ವಿನಿಮಯ ದರ

$ ಡಾಲರ್	83.03
£ ಪೌಂಡ್	104.65
€ ಯುರೊ	89.32
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹76
ಮೈಸೂರು	
100ಕ್ಕೆ	₹582

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹870 (875)
ಸೂರ್ಯಕಾಂತಿ (ರಿಫೈನ್ಡ್)	₹895 (905)
ಪಾಮೋಲಿನ್	₹840 (840)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹348-465
ದ್ವಿತಳಿ (ಬಿ.ವಿ)	₹330-563

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹161.50
ಆರ್‌ಎಸ್‌ಎಸ್-5	₹156.50
ಗುಡ್ ಲಾಟ್	₹139.50

ಹುಣಸೆ ಹಣ್ಣು: ಒಂದು ಕ್ವಿಂಟಲ್‌ಗೆ ₹26 ಸಾವಿರ

ಪ್ರಜಾವಾಣಿ ವಾರ್ತೆ

ತುಮಕೂರು: ಗುಣಮಟ್ಟದ ಹುಣಸೆ ಹಣ್ಣಿಗೆ ಉತ್ತಮ ಬೆಲೆ ಸಿಗುತ್ತಿದ್ದು ಸೋಮವಾರ ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಹುಣಸೆ ಹಣ್ಣು ₹26 ಸಾವಿರಕ್ಕೆ ಮಾರಾಟವಾಗಿದೆ.

ಕೊರಟಗೆರೆ ತಾಲ್ಲೂಕು ನೇಗಲಾಳ ಗ್ರಾಮದ ಜಯಣ್ಣ ಅವರು ಮಾರುಕಟ್ಟೆಗೆ ತಂದಿದ್ದ 70 ಕೆ.ಜಿ ಹುಣಸೆ ಹಣ್ಣು ಕ್ವಿಂಟಲ್‌ಗೆ ₹26 ಸಾವಿರ ದರದಲ್ಲಿ ಮಾರಾಟವಾಗಿದೆ. ಈ ಬಾರಿ ಇದುವರೆಗೆ ಹುಣಸೆಗೆ ಸಿಕ್ಕ ಹೆಚ್ಚು ಬೆಲೆ ಇದಾಗಿದೆ.

ಈ ಬಾರಿ ಗುಣಮಟ್ಟದ ಹಣ್ಣಿಗೆ ಒಳ್ಳೆಯ ಬೆಲೆ ಬಂದಿದೆ. ವ್ಯಾಪಾರಿಗಳು ಗುಣಮಟ್ಟದ ಹಣ್ಣು ಖರೀದಿಗೆ ಆದ್ಯತೆ ನೀಡುತ್ತಿದ್ದಾರೆ. ಹಾಗಾಗಿ ಗುಣಮಟ್ಟವಿದ್ದರೆ ಉತ್ತಮ ಬೆಲೆ ಸಿಗಲಿದೆ ಎಂದು ವರ್ತಕರು ಹೇಳುತ್ತಿದ್ದಾರೆ.

ಮಾರುಕಟ್ಟೆಗೆ ಸೋಮವಾರ 70 ಟನ್ ಹಣ್ಣು ಬಂದಿತ್ತು. ಕಡಿಮೆ ಗುಣಮಟ್ಟದ ಹಣ್ಣು ಕ್ವಿಂಟಲ್‌ಗೆ ₹9,000ದಿಂದ ₹12,500ರ ವರೆಗೆ ಮಾರಾಟವಾಗಿದೆ. ಈವರೆಗೆ ಉತ್ತಮ ಗುಣಮಟ್ಟದ ಹಣ್ಣಿಗೆ ಪ್ರತಿ ಕ್ವಿಂಟಲ್‌ಗೆ ₹13,000ದಿಂದ, ₹23,500ರವರೆಗೂ ಬೆಲೆ ಸಿಕ್ಕಿದೆ.

ಕಳೆದ ಮೂರು ವಾರದಿಂದ ಹಣ್ಣು ಮಾರುಕಟ್ಟೆಗೆ ಬರಲು ಆರಂಭಿಸಿದೆ. ಈಗ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದೆ. ಫೆಬ್ರುವರಿ ಕೊನೆ ಅಥವಾ ಮಾರ್ಚ್ ವೇಳೆಗೆ ಆವಕದಲ್ಲಿ ಹೆಚ್ಚಳವಾಗಲಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ತುಮಕೂರು ಎಪಿಎಂಸಿ ಮಾರುಕಟ್ಟೆಯಲ್ಲಿ ದಾಖಲೆ ಬೆಲೆಗೆ ಮಾರಾಟವಾದ ಹುಣಸೆ ಹಣ್ಣು

ಕೊಬ್ಬರಿ ಖರೀದಿಗೆ ನೋಂದಣಿ: ಮುನ್ಸೂಚನೆ ನೀಡದೆ ದಿಢೀರ್ ಚಾಲನೆ

ಸರ್ವರ್ ಸಮಸ್ಯೆ: ರೈತರು ಕಂಗಾಲು

ಪ್ರಜಾವಾಣಿ ವಾರ್ತೆ

ತುಮಕೂರು: ಎರಡು ಬಾರಿ ಮುಂದೂಡಿದ್ದ ನಾಫೆಡ್‌ನಿಂದ ಕೊಬ್ಬರಿ ಖರೀದಿಸುವುದಕ್ಕೆ ಸೋಮವಾರ ಚಾಲನೆ ದೊರೆತಿದ್ದು, ರೈತರಿಗೆ ಟೋಕನ್ ನೀಡುವ ಪ್ರಕ್ರಿಯೆ ಆರಂಭವಾಗಿದೆ.

ರೈತರಿಗೆ ಮುನ್ಸೂಚನೆ ನೀಡದೇ ಇದ್ದಕ್ಕಿದ್ದಂತೆ ನೋಂದಣಿಗೆ ಚಾಲನೆ ನೀಡಲಾಗಿದೆ.

ಸರ್ವರ್ ಸಮಸ್ಯೆಯಿಂದಾಗಿ ನೋಂದಣಿ ಕಾರ್ಯ ನಿಧಾನವಾಗುತ್ತಿದೆ. ಖರೀದಿ ಆರಂಭವಾಗಲು ಇನ್ನು ಎರಡು ವಾರ ಸಮಯ ತೆಗೆದುಕೊಳ್ಳಲಿದೆ ಎಂದು ಮಾರುಕಟ್ಟೆ ಫೆಡರೇಷನ್ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲ ಖರೀದಿ ಕೇಂದ್ರಗಳಲ್ಲಿ ಪ್ರಾಯೋಗಿಕವಾಗಿ ನೋಂದಣಿ ಮಾಡಿಕೊಳ್ಳಲು ಟೋಕನ್ ನೀಡಲಾಗುತ್ತಿದೆ. ನಿಗದಿತ ದಿನದಂದು ಮತ್ತೆ ಖರೀದಿ ಕೇಂದ್ರಕ್ಕೆ ಬಂದು ರೈತರು ಬಯೊಮೆಟ್ರಿಕ್ ನೀಡಿ ನೋಂದಣಿ ಮಾಡಿಸಬೇಕು.

ಕೊಬ್ಬರಿ ಮಾರಾಟ ಮಾಡಲು ರೈತರು ಮೂರು ಬಾರಿ ಖರೀದಿ ಕೇಂದ್ರಕ್ಕೆ ಬರಬೇಕಿದೆ. ಒಮ್ಮೆ ಟೋಕನ್ ತೆಗೆದುಕೊಳ್ಳಲು, ಇನ್ನೊಮ್ಮೆ ಬಯೊಮೆಟ್ರಿಕ್ ನೀಡಿ ನೋಂದಾಯಿಸಿಕೊಳ್ಳಲು ಹಾಗೂ ಕೊನೆಗೆ ಕೊಬ್ಬರಿ ತಂದು ಮಾರಾಟ ಮಾಡಬೇಕಿದೆ.

ದಟ್ಟಣೆ ಇಲ್ಲದ ಕೇಂದ್ರಗಳಲ್ಲಿ ಟೋಕನ್ ನೀಡಿ ನೋಂದಣಿ ಮಾಡಿಕೊಳ್ಳುವುದು ಬೇಗ ನಡೆಯುತ್ತಿದೆ. ಹೆಚ್ಚು ರೈತರು ಬರುತ್ತಿರುವ ತುರುವೇಕೆರೆ, ತಿಪಟೂರು ಭಾಗದಲ್ಲಿ ಈ ಪ್ರಕ್ರಿಯೆ ನಿಧಾನವಾಗುತ್ತಿದ್ದು, ದಿನಗಟ್ಟಲೆ ರೈತರು ಕಾಯುವಂತಾಗಿದೆ.

ಕೊಬ್ಬರಿ ಬೆಲೆ ತೀವ್ರ ಕುಸಿತ ಕಂಡಿದ್ದು, ನಾಫೆಡ್ ಖರೀದಿ ಕೇಂದ್ರಗಳ ಆರಂಭಕ್ಕೆ ರೈತರು ಒತ್ತಾಯಿಸುತ್ತಿದ್ದರು. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸ್ಪಂದಿಸಿದ್ದವು. ಜನವರಿ ಆರಂಭದಲ್ಲೇ ಖರೀದಿ ಕೇಂದ್ರ ಆರಂಭವಾಗಬಹುದು ಎಂಬ ನಿರೀಕ್ಷೆ ಇತ್ತು.

ಕೊನೆಗೆ ಜ. 20ರಿಂದ ನೋಂದಣಿ ಮತ್ತು ಖರೀದಿ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ, ಆರಂಭವಾಗಿರಲಿಲ್ಲ. ಜ. 24ರಂದು ನಗರದ ಎಪಿಎಂಸಿಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಖರೀದಿ ಕೇಂದ್ರ ಉದ್ಘಾಟಿಸಿದರೂ ಪ್ರಕ್ರಿಯೆ ಪ್ರಾರಂಭವಾಗಿರಲಿಲ್ಲ. ಮತ್ತೆ ಫೆ.1ರಿಂದ ಖರೀದಿ ಆರಂಭವಾಗಲಿದೆ ಎಂದು ಹೇಳಲಾಗಿತ್ತು. ಆಗಲೂ, ಯಾವುದೇ ಕಾರಣ ನೀಡದೆ ಮುಂದೂಡಲಾಗಿತ್ತು.

‘ರಾಗಿ ಖರೀದಿಗೆ ಬಯೊಮೆಟ್ರಿಕ್ ಬಳಸಿದಂತೆ ಕೊಬ್ಬರಿ ಖರೀದಿಯಲ್ಲೂ ಅಳವಡಿಸಬೇಕು’ ಎಂದು ರೈತರು, ಸಂಘಟನೆಗಳು ಒತ್ತಾಯಿಸಿದ್ದವು. ಬಯೊಮೆಟ್ರಿಕ್‌ಗೆ ತಂತ್ರಾಂಶ ರೂಪಿಸುವುದು ತಡವಾಗಿದ್ದರಿಂದ ಖರೀದಿ ಪ್ರಕ್ರಿಯೆ ಮುಂದಕ್ಕೆ ಹೋಗಿತ್ತು.



ತುಮಕೂರು ಎಪಿಎಂಸಿಯಲ್ಲಿ ತೆರೆದಿರುವ ನಾಫೆಡ್ ಕೊಬ್ಬರಿ ಖರೀದಿ ಕೇಂದ್ರದಲ್ಲಿ ಸೋಮವಾರ ರೈತರು ಹೆಸರು ನೋಂದಾಯಿಸಿಕೊಂಡರು

ಜಿಲ್ಲೆಯಲ್ಲಿ 21 ಖರೀದಿ ಕೇಂದ್ರ

ಜಿಲ್ಲೆಯಲ್ಲಿ 21 ಖರೀದಿ ಕೇಂದ್ರ ತೆರೆಯಲಾಗಿದ್ದು, ಎಲ್ಲೆಡೆ ನೋಂದಣಿ ಆರಂಭವಾಗಿದೆ. ತಿಪಟೂರು, ತುರುವೇಕೆರೆ ತಾಲ್ಲೂಕಿನಲ್ಲಿ ತಲಾ 6 ಕೇಂದ್ರ, ಗುಬ್ಬಿ, ಚಿಕ್ಕನಾಯಕನಹಳ್ಳಿ, ಹುಳಿಯಾರಿನಲ್ಲಿ ತಲಾ 2, ತುಮಕೂರು, ಕುಣಿಗಲ್, ಶಿರಾ ತಾಲ್ಲೂಕಿನಲ್ಲಿ ತಲಾ 1 ಕೇಂದ್ರ ತೆರೆಯಲಾಗಿದೆ.

ನೋಂದಣಿಗೆ ನೂಕುನುಗ್ಗಲು

ಹಾಸನ: ಜಿಲ್ಲೆಯ ಚನ್ನರಾಯಪಟ್ಟಣ, ಹಿರೀಸಾವೆ, ನುಗ್ಗೇಹಳ್ಳಿಯಲ್ಲಿ ಕೊಬ್ಬರಿ ಖರೀದಿಗೆ ನೋಂದಣಿ ಆರಂಭವಾಗಿದ್ದು, ಮೊದಲ ದಿನ ನೂಕುನುಗ್ಗಲು ಉಂಟಾಯಿತು.

‘ಹಿರೀಸಾವೆ ಕೇಂದ್ರದಲ್ಲಿ ಸರ್ವರ್ ಸಮಸ್ಯೆಯಿಂದ 150 ರೈತರ ಹೆಸರು ನೋಂದಾಯಿಸಿ, ಉಳಿದವರಿಗೆ ಟೋಕನ್ ನೀಡಲಾಯಿತು. ಬೆರಳಚ್ಚು ಪಡೆಯುವಲ್ಲಿಯೂ ಸಮಸ್ಯೆಯಾಗಿದ್ದು, ಪರಿಹಾರ ಕಂಡುಕೊಳ್ಳಲಾಗುವುದು’ ಎಂದು ಕೇಂದ್ರದ ಸಿಬ್ಬಂದಿ ತಿಳಿಸಿದ್ದಾರೆ.

ನುಗ್ಗೇಹಳ್ಳಿಯಲ್ಲಿ ನೂಕುನುಗ್ಗಲು ಉಂಟಾಯಿತು. ಶಾಸಕ ಸಿ.ಎನ್. ಬಾಲಕೃಷ್ಣ ಭೇಟಿ ನೀಡಿ ಟೋಕನ್ ವ್ಯವಸ್ಥೆ ಮಾಡಿಸಿದರು. ‘45 ದಿನ ನೋಂದಣಿ ನಡೆಯುವುದರಿಂದ ಆತಂಕ ಬೇಡ’ ಎಂದು ತಿಳಿಸಿದರು. ಚನ್ನರಾಯಪಟ್ಟಣದಲ್ಲಿಯೂ ನೋಂದಣಿ ಆರಂಭವಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ.ಕೃಷ್ಣಪ್ಪ.ಬಿ.ಎನ್–ವಕೀಲರು
ಅವರು ದಿನಾಂಕ 05–02–2024 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ವಿಳಾಸ: ನಂ.11, 8ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಜಿ.ಎಂ. ಪಾಳ್ಯ, ಹೊಸ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು–75.
ಇಂತಿ, ದುಃಖತಪ್ತ ಕುಟುಂಬದವರು
7975787432, 9880068828

ವೈಕುಂಠ ಸಮಾರಾಧನೆ



ಕೆ.ಬಿ ಚಿಕ್ಕಬೆಟ್ಟಯ್ಯ
(ನಿವೃತ್ತ ಕೆ.ಎ.ಎಸ್ ಅಧಿಕಾರಿ)
ಜನನ: 29.03.1952 – ಮರಣ: 27.01.2024
ಇವರು ದಿ: 27.01.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ತತ್ಸಬಂಧ ವೈಕುಂಠ ಸಮಾರಾಧನೆಯನ್ನು ದಿ: 07.02.2024, ಬುಧವಾರ ಬೆಳಗ್ಗೆ 10.00ಕ್ಕೆ ‘ಹಿಂದೂ ರುದ್ರಭೂಮಿ’, ಟಿ.ಆರ್. ಮಿಲ್, ಚಾಮರಾಜಪೇಟೆ ರಲ್ಲಿ ಏರ್ಪಡಿಸಲಾಗಿದೆ. ಇದನ್ನೆ ಆಹ್ವಾನವೆಂದು ಭಾವಿಸಿ, ಕಾರ್ಯದಲ್ಲಿ ಭಾಗವಹಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗ & ಸ್ನೇಹಿತರು.
ಮೊ: 9902676566, 9900900211

ಜಿಎಸ್‌ಟಿ ವಂಚನೆ: ಮಹಾರಾಷ್ಟ್ರ, ಗುಜರಾತ್‌ನಲ್ಲಿ ಹೆಚ್ಚು

ನವದೆಹಲಿ (ಪಿಟಿಐ): ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳು 2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 14,597 ತೆರಿಗೆ ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಕೇಂದ್ರ ಸರ್ಕಾರವು, ಸೋಮವಾರ ಲೋಕಸಭೆಗೆ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ವಂಚನೆ ಪ್ರಕರಣಗಳು ದಾಖಲಾಗಿವೆ. ಈ ರಾಜ್ಯದಲ್ಲಿ ಒಟ್ಟು 2,716 ಪ್ರಕರಣಗಳು ದಾಖಲಾಗಿವೆ. ಉಳಿದಂತೆ ಗುಜರಾತ್ 2,589, ಹರಿಯಾಣ 1,123 ಹಾಗೂ ಪಶ್ಚಿಮ ಬಂಗಾಳದಲ್ಲಿ 1,089 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಎಸಗುತ್ತಿದ್ದ ಜಾಲ ಸಕ್ರಿಯವಾಗಿತ್ತು. ದತ್ತಾಂಶ ವಿಶ್ಲೇಷಣೆ ಮೂಲಕ ಕೃತಕ ಬುದ್ಧಿಮತ್ತೆ ಸಾಧನಗಳನ್ನು ಬಳಸಿಕೊಂಡು ಈ ಜಾಲದಲ್ಲಿ ಸಕ್ರಿಯರಾಗಿದ್ದ ತೆರಿಗೆದಾರರನ್ನು ಪತ್ತೆ ಹಚ್ಚುವಲ್ಲಿ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯದ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
05-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	834 (835)
ಪಾಮ್ ವಾರದ ಡೆಲಿವರಿ	838 (838)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,150 (62,700)
ಬೆಳ್ಳಿ ಕೆ.ಜಿ ₹70,350 (70,950)
ಆವರಣದಲ್ಲಿ ಶನಿವಾರದ ಧಾರಣೆ

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ 29ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಶಾಸಕ ಸತೀಶ್ ಕೃಷ್ಣ ಸೈಲ್ ಅವರನ್ನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ನಂದೀಶ, ಉಪ ನಿರ್ದೇಶಕಿ ಲತಾ ನಾಯಕ್, ವ್ಯವಸ್ಥಾಪಕರಾದ ರಶ್ಮಿ ಯದಾಟಿ, ನಾಗಪ್ಪ ಕಿತ್ತೂರ್, ಸಹಾಯಕ ವ್ಯವಸ್ಥಾಪಕಿ ತೇಜಾವತಿ ಅಭಿನಂದಿಸಿದರು. ಶಾಸಕರ ಪತ್ನಿ ಕಲ್ಪನಾ ಸೈಲ್ ಇದ್ದರು

ಐಪಿಒ: ₹25 ಸಾವಿರ ಕೋಟಿ ಸಂಗ್ರಹಕ್ಕೆ ಹುಂಡೈ ಸಿದ್ಧತೆ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ಹುಂಡೈ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ ಎಂದು ಸೋಮವಾರ ಮೂಲಗಳು ತಿಳಿಸಿವೆ.

ಭಾರತದಲ್ಲಿ ಮಾರುತಿ ಸುಜುಕಿ ಕಂಪನಿಯ ಬಳಿಕ ಹುಂಡೈ ಅತಿದೊಡ್ಡ ಕಾರು ತಯಾರಿಕಾ ಕಂಪನಿ ಆಗಿದೆ. ಪ್ರಸಕ್ತ ವರ್ಷದಲ್ಲಿ ರಾಷ್ಟ್ರೀಯ ಷೇರುಪೇಟೆ ಹಾಗೂ ಮುಂಬೈ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಲು ಸಿದ್ಧತೆ ನಡೆಸಿದೆ. ಶೇ 15ರಿಂದ 20ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ ₹25 ಸಾವಿರ ಕೋಟಿಯಿಂದ ₹46,500 ಕೋಟಿವರೆಗೆ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ ಎಂದು ತಿಳಿಸಿವೆ.

ಏರ್‌ಟೆಲ್‌ಗೆ ₹2,442 ಕೋಟಿ ಲಾಭ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಭಾರ್ತಿ ಏರ್‌ಟೆಲ್ ₹2,442 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹1,588 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 54ರಷ್ಟು ಏರಿಕೆ ಆಗಿದೆ. ಕಂಪನಿಯ ಕಾರ್ಯಾಚರಣೆ ವರಮಾನವು ₹35,804 ಕೋಟಿಯಿಂದ ₹37,899 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

₹1,000 ದಾಟಿದ ಎಲ್‌ಐಸಿ ಷೇರು

ಷೇರುಪೇಟೆ ಸೂಚ್ಯಂಕಗಳು ಇಳಿಕೆ: ಟಾಟಾ ಷೇರು ಏರಿಕೆ

ನವದೆಹಲಿ/ ಮುಂಬೈ (ಪಿಟಿಐ): ಏಷ್ಯಾ ಮತ್ತು ಯುರೋಪಿಯನ್ ಷೇರು ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟು ಸೇರಿದಂತೆ ರಿಲಯನ್ಸ್ ಇಂಡಸ್ಟ್ರೀಸ್, ಭಾರ್ತಿ ಏರ್‌ಟೆಲ್ ಮತ್ತು ಮಾರುತಿ ಕಂಪನಿಯ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆಯಲ್ಲಿ ಸೋಮವಾರ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 354 ಅಂಶ ಇಳಿಕೆಯಾಗಿ 71,731ರಲ್ಲಿ ವಹಿವಾಟು ಮುಕ್ತಾಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 82 ಅಂಶ ಕಡಿಮೆಯಾಗಿ, 21,771ರಲ್ಲಿ ಅಂತ್ಯಗೊಂಡಿತು.

ಎಲ್‌ಐಸಿ ಷೇರಿನ ಬೆಲೆ ಏರಿಕೆ: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರಿನ ಮೌಲ್ಯ ಶೇ 6ರಷ್ಟು ಹೆಚ್ಚಾಗಿದೆ. ಪ್ರತಿ ಷೇರಿನ ಬೆಲೆ ಮೊದಲ ಬಾರಿಗೆ ₹1 ಸಾವಿರ ದಾಟಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ5.90ರಷ್ಟು ಹೆಚ್ಚಾಗಿದ್ದು, ಪ್ರತಿ ಷೇರಿನ ಬೆಲೆ ₹1,000.35ಕ್ಕೆ ತಲುಪಿದೆ. ದಿನದ ಆರಂಭಿಕ ವಹಿವಾಟಿನಲ್ಲಿ ಪ್ರತಿ ಷೇರಿನ ಬೆಲೆಯು 52 ವಾರಗಳ ಗರಿಷ್ಠ ಮಟ್ಟವಾದ ₹1,027.95ಕ್ಕೆ ತಲುಪಿತ್ತು.

ಎನ್‌ಎಸ್‌ಇಯಲ್ಲಿಯೂ ಷೇರಿನ ಮೌಲ್ಯ ಶೇ 5.64ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹998.85 ಆಗಿದೆ. ಆರಂಭಿಕ ವಹಿವಾಟಿನಲ್ಲಿ ಷೇರಿನ ಮೌಲ್ಯ ಶೇ8.73ರಷ್ಟು ಏರಿಕೆಯಾಗಿ, ಪ್ರತಿ ಷೇರಿನ ಬೆಲೆಯು 52 ವಾರಗಳ ಗರಿಷ್ಠ ಮಟ್ಟವಾದ ₹1,028ಕ್ಕೆ ತಲುಪಿತ್ತು.

ಎಲ್‌ಐಸಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹35,230 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಮೌಲ್ಯ ₹6.32 ಲಕ್ಷ ಕೋಟಿಗೆ ತಲುಪಿದೆ.

ಕಳೆದ ತಿಂಗಳು ಸರ್ಕಾರಿ ಸ್ವಾಮ್ಯದ ಕಂಪನಿಗಳ ಪೈಕಿ ಮಾರುಕಟ್ಟೆ ಮೌಲ್ಯಮಾಪನದ ಶ್ರೇಯಾಂಕದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ಎಲ್‌ಐಸಿ ಮೀರಿಸಿತ್ತು.

ಟಾಟಾ ಷೇರು ಏರಿಕೆ: ಟಾಟಾ ಮೋಟರ್ಸ್ ಷೇರುಗಳು ಶೇ 6ರಷ್ಟು ಏರಿಕೆಯಾಗಿವೆ. ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹15,949 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಮೌಲ್ಯ ₹3.07 ಲಕ್ಷ ಕೋಟಿ ಆಗಿದೆ.

ಪೇಟಿಎಂ: ₹20,471 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ ಬ್ಯಾಂಕ್ ಲಿಮಿಟೆಡ್‌ಗೆ (ಪಿಪಿಬಿಎಲ್) ಆರ್‌ಬಿಐ ವಿಧಿಸಿರುವ ನಿರ್ಬಂಧದಿಂದಾಗಿ ಸೋಮವಾರವೂ ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರುಗಳ ಮೌಲ್ಯ ಶೇ 10ರಷ್ಟು ಕುಸಿದಿದೆ.

ಷೇರುಪೇಟೆ ವಹಿವಾಟಿನ ಮೂರು ದಿನಗಳಲ್ಲಿ ಷೇರಿನ ಮೌಲ್ಯ ಶೇ 42ರಷ್ಟು ಕುಸಿದಿದ್ದು, ಕಂಪನಿಯ ಮಾರುಕಟ್ಟೆ ಮೌಲ್ಯ ₹20,471.25 ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 10ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹438.35ಕ್ಕೆ ತಲುಪಿದೆ. ನಿಫ್ಟಿಯಲ್ಲಿ ಷೇರಿನ ಮೌಲ್ಯ ಶೇ 9.99ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹438.50 ಆಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಮಗುವಿನಾರೈಕೆ ಮಾಡಿಕೊಳ್ಳಲು ತಮಿಳು ಭಾಷೆ ತಿಳಿದಿರುವ ಉಳಕೊಳ್ಳುವ ಅನುಭವಸ್ಥ ಮಹಿಳೆ ಉಡುಪಿಗೆ ಬೇಕಾಗಿದ್ದಾರೆ. ಸಂಬಳ: 20,000/-; Ph: 9916856577, 8073941828

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200, 080-25300714

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663563555

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

REQUIRED, EXPERIENCED Telecaller & LoanRecovery Supervisor For BankLoan collection. Salary 30,000+ Incentive Contact: 9620206756

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿ.
ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9901641752
+91 9845114560
+91 9900428036
+91 9731810277

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 20.02.2024 ರಿಂದ 11 ದಿನಗಳ ಗುಜರಾತ್ ಮಹಾಕಾಳೇಶ್ವರ ಓಂಕಾರೇಶ್ವರ. 24.03.2024 12.04.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ. 11.03.2024 12.04.2024 ರಿಂದ 11 ದಿನಗಳ ಅಯೋಧ್ಯಾ,ಮುಕ್ತಿನಾಥ,ಕಾಶಿ. 25.04.2024 ರಿಂದ ವೈಷ್ಣೋದೇವಿ,ಕಾಶ್ಮೀರ್. 17.05.2024 26.05.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 12.04.2024 ರಿಂದ 11/16 ದಿನಗಳ ಪುರಿ,ಕೋಲ್ಕತಾ ಡಾರ್ಜಲಿಂಗ್ ಗ್ಯಾಂಗ್‌ಟಾಕ್/ ನೇಪಾಳ. 27.02.2024 11.03.2024 ರಿಂದ 5 ದಿನಗಳ ದುಬೈ,ಅಬುದಾಬಿ. 24.03.2024 25.04.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 25.04.2024 30.05.2024 ರಿಂದ 13/16 ದಿನಗಳ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

10 ದಿನಗಳ ಕಾಂಬೋಡಿಯಾ ಮತ್ತು ವಿಯಟ್ನಾಂ, 7/11 ದಿನಗಳ ಸಿಂಗಪುರ ಮತ್ತು ಮಲೇಷ್ಯಾ ಥೈಲ್ಯಾಂಡ್, 18 ದಿನಗಳ ಯುಕೆ ಮತ್ತು ಯುರೋಪ್, 5 ದಿನಗಳ ಬಾಕು, 6 ದಿನಗಳ ಬಾಲಿ, 10 ದಿನಗಳ ಗುಜರಾತ್ 9 ದಿನಗಳ ಭೂತಾನ್. ಭಟ್ ಟ್ರಾವೆಲ್ಸ್ 9844166555 ,9844037295

8 ದಿನಗಳ ಇಂಡೋನೇಷ್ಯಾ ಮತ್ತು ಮಲೇಷಿಯಾ. 6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್ ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9900080796, 9900080792

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ತಾಂತ್ರಿಕ ಸಮಸ್ಯೆ: ಗ್ರಾಹಕರ ಪರದಾಟ

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಆಡಳಿತಾತ್ಮಕ ಕೆಲಸಗಳಿಗೆ ಫಿನಾಕಲ್–10 ತಂತ್ರಾಂಶ ಅಳವಡಿಸಿಕೊಂಡ ಬಳಿಕ ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದು, ಬ್ಯಾಂಕಿಂಗ್ ವ್ಯವಸ್ಥೆ ಏರುಪೇರಾಗಿದೆ. ಇದರಿಂದ ಗ್ರಾಹಕರು ಮತ್ತು ಸಿಬ್ಬಂದಿ ಪರದಾಡುವಂತಾಗಿದೆ.

ಬಳ್ಳಾರಿಯಲ್ಲಿ ಪ್ರಧಾನ ಕಚೇರಿ ಹೊಂದಿರುವ ಕೆಜಿಬಿ ರಾಜ್ಯದ 22 ಜಿಲ್ಲೆಗಳಲ್ಲಿ 1,122 ಶಾಖೆಗಳನ್ನು ಹೊಂದಿದೆ. ತಂತ್ರಾಂಶವನ್ನು ಮೇಲ್ದರ್ಜೆಗೆ ಏರಿಸಿದ ನಂತರ ಬಹುತೇಕ ಶಾಖೆಗಳಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ವಾರ ಕಳೆದರೂ ಪರಿಹಾರ ದೊರಕಿಲ್ಲ. ಸಾಲದ ವ್ಯವಸ್ಥೆ, ಆನ್‌ಲೈನ್ ಬ್ಯಾಂಕಿಂಗ್, ಎಟಿಎಂ ಹೀಗೆ ಎಲ್ಲ ರೀತಿಯ ಹಣ ವರ್ಗಾವಣೆಯಲ್ಲಿ ವ್ಯತ್ಯಯವಾಗಿದೆ. ಇದೇ ರೀತಿ ಆರ್‌ಟಿಜಿಎಸ್, ನೆಫ್ಟ್, ಯುಪಿಐ ವ್ಯವಹಾರಗಳೂ ವ್ಯತ್ಯಯವಾಗಿದ್ದು ಗ್ರಾಹಕರು ತೊಂದರೆ ಎದುರಿಸುತ್ತಿದ್ದು, ಸಿಬ್ಬಂದಿ ಅಸಹಾಯಕರಾಗಿದ್ದಾರೆ.

‘ರಾಜ್ಯದ ಎಲ್ಲ ಶಾಖೆಗಳಲ್ಲಿ ಒಂದೊಂದು ರೀತಿ ಸಮಸ್ಯೆ ಇದೆ. ನ್ಯೂನತೆ ಸರಿಪಡಿಸಲು ತಾಂತ್ರಿಕ ಸಿಬ್ಬಂದಿ ಪ್ರಯತ್ನಿಸುತ್ತಿದ್ದು, ಶೀಘ್ರದಲ್ಲೇ ಪರಿಹಾರ ದೊರಕಲಿದೆ’ ಎಂದು ಕೆಜಿಬಿ ಪ್ರಾದೇಶಿಕ ವ್ಯವಸ್ಥಾಪಕ ಪ್ರಸನ್ನ ವೆಂಕಟೇಶ್ವರಲು ಪ್ರತಿಕ್ರಿಯಿಸಿದ್ದಾರೆ.

‘ಕೈಗಾರಿಕೆಗಳಿಗೆ ಬೇಕು ನಿತ್ಯ 29 ಕೋಟಿ ಲೀ. ನೀರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಕೈಗಾರಿಕಾ ಪ್ರದೇಶಗಳಿಗೆ ನಿತ್ಯ 29 ಕೋಟಿ ಲೀಟರ್ ನೀರಿನ ಬೇಡಿಕೆ ಇದೆ. ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡದಿದ್ದರೆ ಕೈಗಾರಿಕಾ ಬೆಳವಣಿಗೆಗೆ ಹಿನ್ನಡೆಯಾಗುತ್ತದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಜತೆಗೂಡಿ ಕೈಗಾರಿಕಾ ಪ್ರದೇಶಗಳಿಗೆ ನೀರು ಪೂರೈಕೆ ಕುರಿತು ಗ್ರಾಮೀಣ ಕುಡಿಯುವ ನೀರು ಪೂರೈಕೆ ಇಲಾಖೆ, ಬೆಂಗಳೂರು ಜಲ ಮಂಡಳಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗಳ ಅಧಿಕಾರಿಗಳ ಸಭೆಯನ್ನು ಸೋಮವಾರ ನಡೆಸಿದ ಅವರು, ಕೈಗಾರಿಕಾ ಪ್ರದೇಶಗಳ ನೀರಿನ ಬೇಡಿಕೆ ಈಡೇರಿಸಲು ಯೋಜನೆ ರೂಪಿಸುವಂತೆ ಸೂಚಿಸಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳು ಕುಡಿಯುವ ನೀರಿನ ತೀವ್ರ ಸಮಸ್ಯೆ ಎದುರಿಸುತ್ತಿವೆ. ಧಾರವಾಡ ಕೈಗಾರಿಕಾ ಪ್ರದೇಶಕ್ಕೆ ಪ್ರತಿದಿನ 4.5 ಕೋಟಿ ಲೀಟರ್‌ಗಳಷ್ಟು ಕುಡಿಯುವ ನೀರಿನ ಅಗತ್ಯವಿದೆ ಎಂದು ಹೇಳಿದರು.

ಸೇವಾ ಚಟುವಟಿಕೆ: 6 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆ ಸೂಚ್ಯಂಕವು ಜನವರಿಯಲ್ಲಿ ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

2023ರ ಡಿಸೆಂಬರ್‌ನಲ್ಲಿ 59 ಇದ್ದ ಸೂಚ್ಯಂಕವು ಜನವರಿಯಲ್ಲಿ 61.8ಕ್ಕೆ ಹೆಚ್ಚಳವಾಗಿದೆ.

ದೇಶೀಯವಾಗಿ ಹಾಗೂ ವಿದೇಶಗಳಲ್ಲಿ ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಜೊತೆಗೆ, ಕಂಪನಿಗಳಿಗೆ ಹೊಸ ವಹಿವಾಟು ಸಿಗುತ್ತಿರುವುದರಿಂದ ಏರಿಕೆ ಆಗಿದೆ ಎಂದು ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್‌ನ (ಪಿಎಂಐ) ವರದಿ ಸೋಮವಾರ ತಿಳಿಸಿದೆ.

ಸೇವಾ ವಲಯದ 400 ಕಂಪನಿಗಳಿಂದ ಅಭಿಪ್ರಾಯ ಸಂಗ್ರಹಿಸಿ ಈ ವರದಿ ಸಿದ್ಧಪಡಿಸಲಾಗಿದೆ.

‘ಮುಂದಿನ ದಿನಗಳಲ್ಲಿ ಸೇವಾ ವಲಯದ ಚಟುವಟಿಕೆಗಳು ದೃಢಗೊಳ್ಳುವ ನಿರೀಕ್ಷೆಯಿದೆ. ಇದರಿಂದ ಹೊಸ ವಹಿವಾಟು ವಿಸ್ತರಣೆಯಾಗುತ್ತಿದೆ. ಹೊಸ ರಫ್ತು ವಹಿವಾಟು ವೇಗ ಪಡೆದಿದೆ. ಇದು ದೇಶದ ಸೇವಾ ರಫ್ತು ದೃಢವಾಗಲು ಸಹಕಾರಿಯಾಗಲಿದೆ’ ಎಂದು ಎಚ್‌ಎಸ್‌ಬಿಸಿಯ ಅರ್ಥಶಾಸ್ತ್ರಜ್ಞ ಇನೆಸ್ ಲ್ಯಾಮ್ ಹೇಳಿದ್ದಾರೆ.



ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಡ್ರೋನ್ ದಾಳಿಗೆ ಕುರ್ದ್ ಹೋರಾಟಗಾರರು ಬಲಿ

ಬೈರೂತ್ (ಎಪಿ): ಪೂರ್ವ ಸಿರಿಯಾದಲ್ಲಿ ಅಮೆರಿಕದ ಯೋಧರು ಇರುವ ನೆಲೆಯ ಮೇಲೆ ಭಾನುವಾರ ನಡೆದ ಡ್ರೋನ್ ದಾಳಿಯಲ್ಲಿ ಅಮೆರಿಕ ಬೆಂಬಲಿತ ಆರು ಮಂದಿ ಕುರ್ದಿಶ್ ಹೋರಾಟಗಾರರು ಮೃತಪಟ್ಟಿದ್ದಾರೆ. ಇರಾನ್ ಬೆಂಬಲಿತ ಬಂಡುಕೋರರ ಮೇಲೆ ಅಮೆರಿಕವು ವಾರಾಂತ್ಯದಲ್ಲಿ ಪ್ರತಿದಾಳಿ ನಡೆಸಿದ ನಂತರದಲ್ಲಿ ನಡೆದಿರುವ ಮಹತ್ವದ ದಾಳಿ ಇದಾಗಿದೆ. ಇರಾನ್ ಬೆಂಬಲಿತ ಬಂಡುಕೋರರು ಅಮೆರಿಕದ ಯೋಧರನ್ನು ಗುರಿಯಾಗಿಸಿಕೊಂಡು ದಾಳಿಗಳನ್ನು ನಡೆಸುತ್ತಿದ್ದಾರೆ.

ಸಿರಿಯಾದ ಪೂರ್ವ ಪ್ರಾಂತ್ಯದಲ್ಲಿ ಇರುವ ತರಬೇತಿ ನೆಲೆಯ ಮೇಲೆ ದಾಳಿ ನಡೆದಿದೆ. ಸಿರಿಯಾ ಆಡಳಿತದ ಬೆಂಬಲವಿರುವ ಸೈನಿಕರು ಈ ದಾಳಿ ನಡೆಸಿದ್ದಾರೆ ಎಂದು ಅಮೆರಿಕದ ಬೆಂಬಲ ಇರುವ ‘ಸಿರಿಯನ್ ಡೆಮಾಕ್ರಟಿಕ್ ಫೋರ್ಸಸ್’ ಹೇಳಿಕೆಯಲ್ಲಿ ತಿಳಿಸಿದೆ. ಈ ದಾಳಿಯಲ್ಲಿ ಅಮೆರಿಕದ ಯೋಧರು ಮೃತಪಟ್ಟಿರುವ ವರದಿಗಳು ಇಲ್ಲ. ದಾಳಿಯ ಹೊಣೆ ಹೊತ್ತು ಇರಾನ್ ಬೆಂಬಲಿತ ಬಂಡುಕೋರರು ವಿಡಿಯೊ ಒಂದನ್ನು ಬಿಡುಗಡೆ ಮಾಡಿದ್ದಾರೆ. ಇದೇ ಗುಂಪು ಜನವರಿ ಕೊನೆಯಲ್ಲಿ ಜೋರ್ಡಾನ್‌ನ ಮರುಭೂಮಿಯನಲ್ಲಿನ ನೆಲೆಯ ಮೇಲೆ ನಡೆಸಿದ ದಾಳಿಯಲ್ಲಿ ಅಮೆರಿಕದ ಮೂವರು ಯೋಧರು ಸಾವನ್ನಪ್ಪಿದ್ದರು. ಇದಕ್ಕೆ ಪ್ರತಿಯಾಗಿ ಅಮೆರಿಕದ ಮಿಲಿಟರಿಯು, ಇರಾಕ್‌ನ ಪಶ್ಚಿಮ ಭಾಗ ಮತ್ತು ಸಿರಿಯಾದ ಪೂರ್ವ ಭಾಗದಲ್ಲಿ ಇರುವ ಬಂಡುಕೋರರ ಮೇಲೆ ದಾಳಿ ನಡೆಸಿದೆ. ಯೆಮನ್‌ನ ಹುಥಿ ಬಂಡುಕೋರರ ಮೇಲೆಯೂ ದಾಳಿ ನಡೆಸಿದೆ.

ಪಾಕ್‌ನಲ್ಲಿ ಉಗ್ರರ ದಾಳಿ; 10 ಪೊಲೀಸರು ಸಾವು

ಪೇಶಾವರ (ಪಿಟಿಐ): ವಾಯವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಶಸ್ತ್ರಸಜ್ಜಿತ ಭಯೋತ್ಪಾದಕರು ಸೋಮವಾರ ಪೊಲೀಸ್ ಠಾಣೆಯ ಮೇಲೆ ನಡೆಸಿದ ದಾಳಿಗೆ 10 ಮಂದಿ ಪೊಲೀಸರು ಬಲಿಯಾಗಿದ್ದು ಆರು ಮಂದಿ ಪೊಲೀಸರು ಗಾಯಗೊಂಡಿದ್ದಾರೆ. ಪಾಕಿಸ್ತಾನದಲ್ಲಿ ಫೆಬ್ರುವರಿ 8ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಅದಕ್ಕೆ ಮೂರು ದಿನಗಳ ಮೊದಲು ಈ ದಾಳಿ ನಡೆದಿದೆ.

ದೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಈ ದಾಳಿ ನಡೆದಿದೆ. ದಾಳಿಗೆ ಇದುವರೆಗೆ ಯಾರೂ ಹೊಣೆ ಹೊತ್ತಿಲ್ಲ. ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಭಯೋತ್ಪಾದಕರು ಹಠಾತ್ತನೆ ದಾಳಿ ನಡೆಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ಅಧಿಕಾರಿ ನಸೀರ್ ಮೆಹ್ಮೂದ್ ಹೇಳಿದ್ದಾರೆ.

ಜೈಪುರ ಸಾಹಿತ್ಯೋತ್ಸವದ ಸಮಾರೋಪದಲ್ಲಿ ವ್ಯಕ್ತವಾದ ಆತಂಕ

ವಾಕ್ ಸ್ವಾತಂತ್ರ್ಯದ ಮೇಲೆ ಕರಿನೆರಳು

• ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ: ಮುಂದುವರಿಯುತ್ತಿರುವ ತಂತ್ರಜ್ಞಾನದ ಕಣ್ಗಾವಲಿನಲ್ಲಿ ವಾಕ್ ಸ್ವಾತಂತ್ರ್ಯವು ಮುಕ್ತವಾಗಿ ಉಳಿಯುವುದಿಲ್ಲ ಎಂಬ ತೀವ್ರ ಆತಂಕದೊಂದಿಗೆ ಜಗತ್ತಿನ ಅತಿ ದೊಡ್ಡ ಸಾಹಿತ್ಯ ಸಮಾರಾಧನೆ 'ಜೈಪುರ ಸಾಹಿತ್ಯೋತ್ಸವ'ವು ಸೋಮವಾರ ಸಮಾರೋಪಗೊಂಡಿತು.

'ಬೇಹುಗಾರಿಕೆ ತಂತ್ರಜ್ಞಾನ ಮತ್ತು ಖಾಸಗೀತನದ ಮೇಲಿನ ಆಕ್ರಮಣದ ಹೊರತಾಗಿಯೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಸಾಧ್ಯವೇ' ಎಂಬ ವಿಷಯವಾಗಿ ಸಮಾರೋಪ ವೇದಿಕೆಯಲ್ಲಿ ಮಾತಿನ ಜಟಾಪಟಿ ನಡೆಯಿತು.

'ತಂತ್ರಜ್ಞಾನವು ಎಷ್ಟೇ ಮುಂದುವರಿಯಲಿ, ಮನುಷ್ಯನ ವಾಕ್ ಸ್ವಾತಂತ್ರ್ಯವನ್ನು ಕಸಿಯುವುದು ಸಾಧ್ಯವಾಗುವುದಿಲ್ಲ. ಅಭಿವ್ಯಕ್ತಿಯನ್ನು ಹತ್ತಿಕ್ಕುವ ಕಂಸನು ಸೃಷ್ಟಿಯಾದರೆ, ಅದನ್ನು ರಕ್ಷಿಸುವ ಕೃಷ್ಣನು ಹುಟ್ಟಿಬರುತ್ತಾನೆ' ಎಂಬ ಸದಾಶಯದೊಂದಿಗೆ ಉದ್ಯಮಿ ಮೋಹಿತ್ ಸತ್ಯಾನಂದ ಚರ್ಚೆಗೆ ಚಾಲನೆ ನೀಡಿದರು. ಹಿರಿಯ ವಕೀಲೆ ಪಿಂಕಿ ಆನಂದ್, 'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವವರನ್ನು ನಿಗ್ರಹಿಸಲು ತಂತ್ರಜ್ಞಾನ ಬಳಕೆಯಾಗುತ್ತಿದೆ' ಎನ್ನುತ್ತ, ನಿರ್ಭಯಾ ಪ್ರಕರಣ, ಸಂಸತ್ತಿನ ಮೇಲೆ ನಡೆದ ಆಕ್ರಮಣದ ಉದಾಹರಣೆ ನೀಡಿದರು. 'ಆದರೆ, ತಂತ್ರಜ್ಞಾನ ಬಳಸಿ ಕಳ್ಳರನ್ನು ಹಿಡಿಯಬೇಕೇ ಹೊರತು ಜನಸಾಮಾನ್ಯರ ಮೇಲೆ ನಿಷೇಧಗಳನ್ನು ಹೇರುವುದು ಎಷ್ಟು ಸರಿ' ಎಂದು ಲೇಖಕ ಪವನ್.ಕೆ. ವರ್ಮಾ ಪ್ರಶ್ನಿಸಿದರು.

ಜೈಪುರ ಸಾಹಿತ್ಯೋತ್ಸವದಲ್ಲಿ ಸೋಮವಾರ ನಡೆದ ಸಂವಾದದಲ್ಲಿ ಬ್ರಿಟಿಷ್ ಗಣಿತಜ್ಞ ಮಾರ್ಕಸ್ ಡು ಸಾಟೊಯ್, ಲೇಖಕ ಪವನ್ ಕೆ.ವರ್ಮಾ, ಪತ್ರಕರ್ತರಾದ ವರ್ಗೀಸ್ ಕೆ. ಜಾರ್ಜ್ ಹಾಗೂ ವೀರ್ ಸಾಂಘ್ವಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಪತ್ರಕರ್ತ ವರ್ಗೀಸ್ ಕೆ. ಜಾರ್ಜ್, 'ಜನರ ಆಲೋಚನೆಗಳನ್ನೇ ನಿಯಂತ್ರಿಸುವ ರೀತಿಯಲ್ಲಿ ಪ್ರಚಾರಕ್ಕಾಗಿ ತಂತ್ರಜ್ಞಾನ ಬಳಸಿಕೊಳ್ಳುತ್ತಿರುವಾಗ ಮುಕ್ತತೆ ಎಲ್ಲಿಂದ ಬರಬೇಕು' ಎಂದು ಪ್ರಶ್ನಿಸಿದರು. ಇದೇ ಮಾತನ್ನು ಸಮರ್ಥಿಸಿದ ಬ್ರಿಟಿಷ್ ಗಣಿತಜ್ಞ ಮಾರ್ಕಸ್ ಡು ಸಾಟೊಯ್, 'ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎನ್ನುತ್ತಲೇ, ಹಿನ್ನೆಲೆಯಲ್ಲಿ ಭಯದ ವಾತಾವರಣ ಸೃಷ್ಟಿಸಲು ತಂತ್ರಜ್ಞಾನ ಬಳಸಲಾಗುತ್ತಿದೆ ಎಂಬುದನ್ನು ಗಮನಿಸಬೇಕು' ಎಂದು ಎಚ್ಚರಿಸಿದರು.

ಜನಪರವಾದ ಮೌಲ್ಯಗಳಿಗಾಗಿ ನಿರಂತರವಾಗಿ ಮಾತನಾಡುವ ಸ್ವಾತಂತ್ರ್ಯ ಇಂದಿಗೂ ಇದ್ದೇ ಇರುತ್ತದೆ ಎಂದು ತತ್ವಶಾಸ್ತ್ರಜ್ಞೆ ಅಮಿಯಾ ಶ್ರೀನಿವಾಸನ್ ಹೇಳಿದರು. ಆದರೆ, ಜನಸಾಮಾನ್ಯರು ಪ್ರಭುತ್ವದ ವಿರುದ್ಧ ಮಾತನಾಡುವಷ್ಟು ಮುಕ್ತ ವಾತಾವರಣವಿಲ್ಲ. ಮುಂದೊಂದು ದಿನ ಅಂತಹ ಮುಕ್ತತೆ ಬರಬಹುದು ಎಂದು ಕನಸು ಕಾಣುತ್ತ ಇಂದು ಮುಕ್ತ ವಾತಾವರಣ ಇದೆ ಎಂದು ಭ್ರಮಿಸುವುದು ಮೂರ್ಖತನವಾಗುತ್ತದೆ ಎಂದು ಪವನ್ ಕೆ. ವರ್ಮಾ ಹೇಳಿದರು.

ಅಂತಿಮವಾಗಿ ವಿಷಯದ ಪರ ಮತ್ತು ವಿರೋಧದ ಮತಗಳನ್ನು ಸಭಿಕರಿಂದ ಪಡೆದಾಗ, ಸಭೆಯಿಂದ ವಿರೋಧದ ಧ್ವನಿಯೇ ಜೋರಾಗಿ ಕೇಳಿ ಬಂತು.

'ಶಿಂದೆ ಬಗ್ಗೆ ತನಿಖೆ ಏಕಿಲ್ಲ'

ಮುಂಬೈ (ಪಿಟಿಐ): 'ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ತಮಗೆ ಕೋಟ್ಯಂತರ ರೂಪಾಯಿ ಕೊಡಬೇಕಾಗಿದೆ ಎಂದಿರುವ ಬಿಜೆಪಿ ಶಾಸಕ ಗಣಪತ್ ಗಾಯಕ್ವಾಡ್ ಅವರ ಹೇಳಿಕೆಯ ಬಗ್ಗೆ ತನಿಖೆ ಮಾಡಲು ಯಾವ ತನಿಖಾ ಸಂಸ್ಥೆಯೂ ಏಕೆ ಮುಂದಾಗಿಲ್ಲ ಎಂದು ಶಿವಸೇನಾ (ಯುಬಿಟಿ) ಮುಖಂಡ ಉದ್ಧವ್ ಠಾಕ್ರೆ ಸೋಮವಾರ ಪ್ರಶ್ನಿಸಿದ್ದಾರೆ.

ರತ್ನಗಿರಿ ಜಿಲ್ಲೆಯ ರಾಜಾಪುರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಶಿವಸೇನಾ (ಶಿಂದೆ ಬಣ) ಮುಖಂಡನ ಮೇಲೆ ಪೊಲೀಸ್ ಠಾಣೆಯಲ್ಲಿ ಗುಂಡು ಹಾರಿಸಿದ ಗಣಪತ್ ಗಾಯಕ್ವಾಡ್ ಅವರ ಕ್ರಮವನ್ನು ನಾನು ಬೆಂಬಲಿಸುವುದಿಲ್ಲ. ಆದರೆ, ಅವರ ಮಾತುಗಳನ್ನು ಸುಲಭವಾಗಿ ತಳ್ಳಿ ಹಾಕಲಾಗುವುದಿಲ್ಲ' ಎಂದು ಹೇಳಿದ್ದಾರೆ.

ಗುಂಡು ಹಾರಿಸಿದ ಪ್ರಕರಣದ ನಂತರ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಗಣಪತ್ ಗಾಯಕ್ವಾಡ್, 'ಶಿಂದೆ ಮುಖ್ಯಮಂತ್ರಿಯಾಗಿದ್ದರೆ ಮಹಾರಾಷ್ಟ್ರದಲ್ಲಿ ಕೇವಲ ಕ್ರಿಮಿನಲ್‌ಗಳು ಮಾತ್ರ ಜನಿಸುತ್ತಾರೆ. ಅವರು ಉದ್ಧವ್ ಅವರನ್ನು ತೊರೆದರು. ಅವರು ಬಿಜೆಪಿಯನ್ನೂ ತೊರೆಯುತ್ತಾರೆ. ಅವರಿಂದ ನನಗೆ ಕೋಟ್ಯಂತರ ರೂಪಾಯಿ ಬರಬೇಕಾಗಿದೆ. ಮಹಾರಾಷ್ಟ್ರ ಚೆನ್ನಾಗಿರಬೇಕಾದರೆ ಶಿಂದೆ ರಾಜೀನಾಮೆ ನೀಡಬೇಕು' ಎಂದು ಹೇಳಿದ್ದರು.

ಗೂಂಡಾಗಳು ಆಳುತ್ತಿದ್ದಾರೆ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಪುತ್ರ, ಸಂಸದ ಶ್ರೀಕಾಂತ್ ಶಿಂದೆ ಅವರು ಕೊಲೆ ಆರೋಪಿಯೊಬ್ಬನ ಜತೆಗಿರುವ ಫೋಟೊವೊಂದನ್ನು ಶಿವಸೇನಾ (ಯುಬಿಟಿ) ಬಣದ ಸಂಸದ ಸಂಜಯ್ ರಾವುತ್ ಸೋಮವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, 'ಮಹಾರಾಷ್ಟ್ರವನ್ನು ಗೂಂಡಾಗಳು ಆಳುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

ಭಾನುವಾರ ಶ್ರೀಕಾಂತ್ ಶಿಂದೆ ಅವರ ಜನ್ಮದಿನವಾಗಿದ್ದು, ಹಲವರು ಶುಭಾಶಯ ಕೋರಿದ್ದರು. ಮರ್ನೆ ಗ್ಯಾಂಗ್‌ನ ಕಿಶೋರ್ ಮರ್ನೆ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲು ಸೇರಿ ಸದ್ಯ ಜಾಮೀನಿನ ಮೇಲೆ ಹೊರಗಿರುವ ಹೇಮಂತ್ ದಾಬೇಕರ್ ಕೂಡ ಶ್ರೀಕಾಂತ್ ಶಿಂದೆ ಅವರನ್ನು ಭೇಟಿಯಾಗಿ ಶುಭಾಶಯ ಕೋರಿದ್ದರು.

ಈ ಫೋಟೊವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ರಾವುತ್, 'ಗೃಹ ಮಂತ್ರಿ ದೇವೇಂದ್ರಜೀ, ಮಹಾರಾಷ್ಟ್ರವನ್ನು ಗೂಂಡಾಗಳು ಆಳುತ್ತಿದ್ದಾರೆ. ಆಡಳಿತಾರೂಢ ಪಕ್ಷದ ಶಾಸಕರೊಬ್ಬರು ಪೊಲೀಸ್ ಠಾಣೆಯಲ್ಲಿ ಗುಂಡು ಹಾರಿಸುತ್ತಾರೆ. ಗೂಂಡಾಗಳು ಇಷ್ಟು ಪ್ರಬಲರಾಗಿದ್ದು ಯಾಕೆ? ಇದಕ್ಕೆ ಯಾರು ಜವಾಬ್ದಾರಿ' ಎಂದು ಪ್ರಶ್ನಿಸಿದ್ದಾರೆ.

ಉಪವಾಸ ಸತ್ಯಾಗ್ರಹ: ಜರಾಂಗೆ ಎಚ್ಚರಿಕೆ

ಜಾಲ್ನಾ (ಪಿಟಿಐ): ಮರಾಠ ಸಮುದಾಯಕ್ಕೆ ಒಬಿಸಿ ಪ್ರವರ್ಗದಲ್ಲಿ ಮೀಸಲಾತಿ ನೀಡಬೇಕು ಎಂಬ ಆಗ್ರಹದೊಂದಿಗೆ ಹೋರಾಟ ನಡೆಸುತ್ತಿರುವ ಮನೋಜ್ ಜರಾಂಗೆ ಅವರು, ಕಳೆದ ತಿಂಗಳು ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ಇರುವ 'ರಕ್ತಸಂಬಂಧಿಗಳು' ಎಂಬ ಪದದ ಅರ್ಥವ್ಯಾಪ್ತಿಯ ಬಗ್ಗೆ ವಿವರಣೆ ನೀಡಲು ಸರ್ಕಾರ ವಿಫಲವಾದಲ್ಲಿ ಫೆಬ್ರುವರಿ 10ರಿಂದ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ತಾನು ಕುಣಬಿ ಸಮುದಾಯಕ್ಕೆ ಸೇರಿದವ ಎನ್ನಲು ದಾಖಲೆಗಳನ್ನು ಹೊಂದಿರುವ ಮರಾಠ ಸಮುದಾಯದ ವ್ಯಕ್ತಿಯ ರಕ್ತಸಂಬಂಧಿಗಳನ್ನು ಕೂಡ ಕುಣಬಿ ಎಂದೇ ಪರಿಗಣಿಸುವುದಾಗಿ ಸರ್ಕಾರ ಹೇಳಿದೆ. ಕುಣಬಿ ಸಮುದಾಯವನ್ನು ಮಹಾರಾಷ್ಟ್ರದಲ್ಲಿ ಒಬಿಸಿ ಎಂದು ಪರಿಗಣಿಸಲಾಗಿದೆ. ಮಹಾರಾಷ್ಟ್ರದ ಮರಾಠರೆಲ್ಲರಿಗೂ ಕುಣಬಿ ಜಾತಿ ಪ್ರಮಾಣಪತ್ರ ನೀಡಬೇಕು ಎಂದು ಜರಾಂಗೆ ಒತ್ತಾಯಿಸಿದ್ದಾರೆ.

ಪಾಕ್ ಚುನಾವಣೆ: ಮುಂಬೈ ದಾಳಿ ಸಂಚುಕೋರ ಭಾಗಿ

ಇಸ್ಲಾಮಾಬಾದ್ (ಪಿಟಿಐ): 2008ರ ಮುಂಬೈ ಭಯೋತ್ಪಾದನಾ ದಾಳಿಯ ಸಂಚುಕೋರ ಹಫೀಜ್ ಸಯೀದ್ ನೇತೃತ್ವದ ನಿಷೇಧಿತ ಗುಂಪು, ಇದೇ 8ರಂದು ನಡೆಯಲಿರುವ ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಯಲ್ಲಿ ಪಾಕಿಸ್ತಾನ ಮರ್ಕಜಿ ಮುಸ್ಲಿಂ ಲೀಗ್ ಎಂಬ ಹೊಸ ರಾಜಕೀಯ ಪಕ್ಷದ ಹೆಸರಿನಲ್ಲಿ ಭಾಗಿಯಾಗುತ್ತಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ.

ಪಾಕಿಸ್ತಾನದ ವಿವಿಧ ಕಡೆ ಚುನಾವಣೆಗೆ ಸ್ಪರ್ಧಿಸಿರುವ ಕೆಲವು ಅಭ್ಯರ್ಥಿಗಳು ಹಫೀಜ್ ಸಯೀದ್ ಸಂಬಂಧಿಕರಾಗಿದ್ದರೆ, ಹಲವರು ನಿಷೇಧಿತ ಲಷ್ಕರ್‌–ಎ–ತಯಬಾ, ಜಮಾತ್‌–ಉದ್‌–ದಾವಾ ಅಥವಾ ಮಿಲ್ಲಿ ಮುಸ್ಲಿಂ ಲೀಗ್‌ನೊಂದಿಗೆ ಸಂಬಂಧ ಹೊಂದಿದ್ದವರು ಎಂದು ಬಿಬಿಸಿ ಉರ್ದು ವರದಿ ಮಾಡಿದೆ.

ಪ್ರಸ್ತುತ ಲಾಹೋರ್ ಜೈಲಿನಲ್ಲಿರುವ ಸಯೀದ್‌ಗೆ, ಪಾಕಿಸ್ತಾನದ ಭಯೋತ್ಪಾದನಾ ವಿರೋಧಿ ನ್ಯಾಯಾಲಯವು ಭಯೋತ್ಪಾದನೆಗೆ ಆರ್ಥಿಕ ನೆರವು ನೀಡಿದ ಪ್ರಕರಣಗಳಲ್ಲಿ 31 ವರ್ಷ ಶಿಕ್ಷೆ ವಿಧಿಸಿದೆ. ಈತನನ್ನು 2008ರ ಡಿ.10ರಂದೇ ವಿಶ್ವಸಂಸ್ಥೆಯ 'ಜಾಗತಿಕ ಭಯೋತ್ಪಾದಕರ' ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ.

ಹಲವು ಭಯೋತ್ಪಾದಕ ಪ್ರಕರಣಗಳಲ್ಲಿ ಭಾರತೀಯ ತನಿಖಾ ಸಂಸ್ಥೆಗಳಿಗೆ ಬೇಕಾಗಿರುವ ಹಫೀಜ್‌ನನ್ನು ಹಸ್ತಾಂತರಿಸುವಂತೆ ಕಳೆದ ಡಿ. 29ರಂದು ಭಾರತವು ಪಾಕಿಸ್ತಾನಕ್ಕೆ ಮನವಿ ಮಾಡಿತ್ತು.

ಪಾಕಿಸ್ತಾನದ ಚುನಾವಣೆಯಲ್ಲಿ ಸಯೀದ್ ಪುತ್ರ ತಲ್ಹಾ ಸ್ಪರ್ಧಿಸುತ್ತಿದ್ದಾರೆ ಎಂಬ ವರದಿಗಳನ್ನು ಭಾರತವು ಗಮನಿಸಿದೆ. ನೆರೆಯ ದೇಶದಲ್ಲಿ ಭಯೋತ್ಪಾದಕ ಸಂಘಟನೆಗಳು ಮುಖ್ಯವಾಹಿನಿಯಲ್ಲಿರುವುದು ಹೊಸದೇನೂ ಅಲ್ಲ. ದೀರ್ಘಕಾಲದಿಂದಲೂ ಇದು ಅಲ್ಲಿನ ರಾಜನೀತಿಯಾಗಿದೆ ಎಂದಿದೆ.

ಸಯೀದ್ ಭಯೋತ್ಪಾದಕ ಸಂಘಟನೆಯ ಚುಕ್ಕಾಣಿ ಹಿಡಿದಿದ್ದರೆ, ಈತನ ಪುತ್ರ ತಲ್ಹಾ ಎಲ್‌ಇಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ನಡೆದ 66ನೇ ವಾರ್ಷಿಕ ಗ್ರ್ಯಾಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ದಿಸ್ ಮೂವ್‌ಮೆಂಟ್'ಗಾಗಿ ಅತ್ಯುತ್ತಮ ಜಾಗತಿಕ ಮ್ಯೂಸಿಕ್ ಆಲ್ಬಮ್ ಪ್ರಶಸ್ತಿಯನ್ನು 'ಶಕ್ತಿ' ತಂಡದ ಉಸ್ತಾದ್ ಝಾಕೀರ್ ಹುಸೇನ್, ಗಾಯಕ ಶಂಕರ್ ಮಹದೇವನ್, ವಿ ಸೆಲ್ವಗಣೇಶ್, ಗಣೇಶ್ ರಾಜಗೋಪಾಲನ್ ಪಡೆದರು —ಪಿಟಿಐ ಚಿತ್ರ

ದಾಳಿ ನಂತರ ಅಮೆರಿಕಕ್ಕೆ ಇರಾನ್ ಎಚ್ಚರಿಕೆ

ಜೆರುಸಲೇಂ (ಎಪಿ): ಅಮೆರಿಕವು ಮಧ್ಯಪ್ರಾಚ್ಯದಲ್ಲಿ 'ಬೆಹಶಾದ್' ಮತ್ತು 'ಸವೀಜ್' ಹೆಸರಿನ ಎರಡು ಸರಕು ಸಾಗಣೆ ಹಡಗುಗಳನ್ನು ಗುರಿಯಾಗಿಸಿಕೊಳ್ಳುವುದರ ವಿರುದ್ಧ ಇರಾನ್ ಎಚ್ಚರಿಕೆ ನೀಡಿದೆ. ಈ ಎರಡು ಹಡುಗಳನ್ನು ಇರಾನ್ ದೇಶವು ತನ್ನ ಕಮಾಂಡೊಗಳಿಗೆ ನೆಲೆಯನ್ನಾಗಿ ಬಳಸಿಕೊಳ್ಳುತ್ತಿದೆ ಎಂಬ ಅನುಮಾನವು ಬಹುಕಾಲದಿಂದ ಇದೆ.

ಯೆಮನ್‌ನ ಹುಥಿ ಬಂಡುಕೋರರನ್ನು ಗುರಿಯಾಗಿಸಿಕೊಂಡು ಅಮೆರಿಕ ಮತ್ತು ಬ್ರಿಟನ್ ಜಂಟಿಯಾಗಿ ದಾಳಿ ನಡೆಸಿದ ನಂತರದಲ್ಲಿ ಇರಾನ್ ಈ ಎಚ್ಚರಿಕೆ ನೀಡಿದೆ. ಇರಾನ್ ಬೆಂಬಲ ಇರುವ ಬಂಡುಕೋರರನ್ನು ಗುರಿಯಾಗಿಸಿಕೊಂಡು ಅಮೆರಿಕವು ಇರಾಕ್, ಸಿರಿಯಾ ಮತ್ತು ಯೆಮನ್‌ನಲ್ಲಿ ದಾಳಿಗಳನ್ನು ನಡೆಸುತ್ತಿದೆ. ಇರಾನ್ ನೀಡಿರುವ ಎಚ್ಚರಿಕೆಯು, ಅಮೆರಿಕದ ಈ ದಾಳಿಗಳು ಇರಾನ್‌ನ ಕೋಪಕ್ಕೆ ಕಾರಣವಾಗಿವೆ ಎಂಬ ಸಂದೇಶವನ್ನು ರವಾನಿಸಿದೆ.

ಹುಥಿ ಬಂಡುಕೋರರ ವಶದಲ್ಲಿ ಇರುವ ಯೆಮನ್‌ನ ಆರು ಪ್ರಾಂತ್ಯಗಳ ಮೇಲೆ ಅಮೆರಿಕವು ಭಾನುವಾರ ದಾಳಿ ನಡೆಸಿದೆ. ದಾಳಿಯಿಂದ ಆಗಿರುವ ಹಾನಿ ಎಷ್ಟು ಎಂಬ ಬಗ್ಗೆ ಬಂಡುಕೋರರು ಮಾಹಿತಿ ನೀಡಿಲ್ಲ. ಭೂಗತ ಕ್ಷಿಪಣಿ ಸಂಗ್ರಹಾಗಾರ, ಕ್ಷಿಪಣಿ ಉಡಾವಣೆಗೆ ಬಳಸುವ ನೆಲೆ ಮತ್ತು ಬಂಡುಕೋರರು ಬಳಸುವ ಹೆಲಿಕಾಪ್ಟರ್‌ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆದಿದೆ ಎಂದು ಅಮೆರಿಕ ಹೇಳಿದೆ.

'ಯೆಮನ್‌ನ ಪಡೆಗಳು ಮತ್ತು ಯೆಮನ್ ದೇಶವು ಪ್ಯಾಲೆಸ್ಟೀನ್ ಜನರಿಗೆ ಬೆಂಬಲ ನೀಡುವುದನ್ನು ಈ ದಾಳಿಗಳು ತಡೆಯಲಾರವು' ಎಂದು ಹುಥಿ ಮಿಲಿಟರಿ ವಕ್ತಾರ ಬ್ರಿಗೆಡಿಯರ್ ಜನರಲ್ ಯಾಹ್ಯಾ ಸರೀ ಹೇಳಿದ್ದಾರೆ. 'ಆಕ್ರಮಣಕಾರರ ವಾಯುದಾಳಿಗೆ ಉತ್ತರ ನೀಡದೆ ಇರುವುದಿಲ್ಲ' ಎಂದೂ ಅವರು ಹೇಳಿದ್ದಾರೆ.

THE BENGALURU DISTRICT CENTRAL CO-OPERATIVE BANK LTD.,

No.2, Grain Merchant Co-operative Bank Campus, Pampamahakavi Road, Chamarajpet, Bengaluru-560018. Ph:080-29505301/29500301

No. BDCCB: HO: 3496: 2023-24

Date:05.02.2024

NOTIFICATION INVITING TENDER (NIT)
(Through e-procurement mode only)

Invites tender for the Bank Head Office Interior work as detail in the label below (item-wise) for the Interior works through E-procurement portal **Two Cover System.** The Bidders are requested to submit the tender in two cover system, technical bid containing EMD and details of their capability to undertake the tender and commercial (Price) bid separately.

Sl. No.	Name of the Work	Estimate cost in Rs.	EMD in Rs.
1.	BDCC Bank Interior Building at Chamarajpete, Bengaluru, including Interior works, Electrical, PAS and Fire Fighting, HVAC Works **(Airtech Engineering)**	3,27,46,008	4,91,200
2.	Last date and time for Receipt of Tenders	07.03.2024	at 5.30 pm.
3.	Date & Time of Opening of Tenders Technical bid	11.03.2024	at 3.00 pm.
4.	Date & Time of Opening of Tenders Price bid.	14.03.2024	at 12.00 pm.

The cost of document and period of completion, as in E-portal tender documents may be downloaded from the E-procurement Tender of the Government of Karnataka. Tenders must be submitted online through E-procurement portal on or before the due date. The tenders must be submitted online through E-procurement portal as per the E-procurement portal guidelines. Other details can be seen in website **https://kppp.karnataka.gov.in** Tender Document Number BNGDCCB/2023-24, BD/WORK_INDENT1

Sd/- Shanthi Pai (Deputy General Manager)

ಪುರಸಭೆ ಕಾರ್ಯಾಲಯ, ಸಂಡೂರು

ಸಂಡೂರು (ತಾಲೂಕು) । ಬಳ್ಳಾರಿ (ಜಿಲ್ಲೆ) ☎ : 08395–260275,

E-mail : itstaff_ulb_sandur@ymail.com | Web site: www.sandoortown.gov.in

ಸಂ.ಪು.ಸ.ಸಂ/ವಿವಿದ ಅನುದಾನ /ಇ–ಟೆಂ.ಪ್ರ/2023–24/02 ದಿನಾಂಕ: 03.02.2024

ಇ – ಟೆಂಡರ್ ಪ್ರಕಟಣೆ(ದ್ವಿ –ಲಕೋಟೆ)

2023–24 ನೇಸಾಲಿನ 15ನೇ ಹಣಕಾಸು, ,2023–24 ನೇಸಾಲಿನ ಎಸ್ ಎಫ್ ಸಿ, ಎಸ್ ಎಫ್ ಸಿ ಕುಡಿಯುವ ನೀರಿನ ಉಳಿಕೆ ಅನುದಾನದಡಿಯಲ್ಲಿ ಒಟ್ಟು ಮೊತ್ತ ರೂ.221.20 ಲಕ್ಷಗಳಿಗೆ ಈ ಕೆಳಕಂಡ ಒಟ್ಟು 06 ಸಂಖ್ಯೆ ಪ್ಯಾಕೇಜ್‌ಗಳ ಕಾಮಗಾರಿಗಳಿಗೆ E-GOK, ಇ–ಪ್ರಕ್ಯೂರ್ ಮೆಂಟ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.ಅಸಕ್ತ ಗುತ್ತಿಗೆದಾರರು ವೆಬ್‌ಸೈಟ್ **(https://kppp.karnataka.gov.in/)** ಮೂಲಕ ಟೆಂಡರ್ ಸಲ್ಲಿಸಬಹುದು.

ಪ್ಯಾ. ಸಂ.	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಕಾಲಮಿತಿ
01	ಕುಡಿಯುವ ನೀರು ಕಾಮಗಾರಿ	DMA/2023-24/OW/WORK_INDENT13867 (Reserved for SC Category)	69.75	69,750/–	06 ತಿಂಗಳು
02		DMA/2023-24/WS/WORK_INDENT13832	40.40	80,800/–	04 ತಿಂಗಳು
03	ಸಿಸಿ ರಸ್ತೆ ಕಾಮಗಾರಿ	DMA/2023-24/OW/WORK_INDENT13998	15.67	39,175/–	03 ತಿಂಗಳು
04	ಟಿ ಸಿ ರಿಪೇರಿ	DMA/2023-24/EL/WORK_INDENT11769/CALL-2	2.68	6700/–	03 ತಿಂಗಳು
05	ಕಟ್ಟಡ ಕಾಮಗಾರಿ	DMA/2023-24/BD/WORK_INDENT13850	50.00	1,00,000/–	06 ತಿಂಗಳು
06		DMA/2023-24/OW/WORK_INDENT13862 (Reserved for ST Category)	42.70	42,700/–	4 ತಿಂಗಳು

ಸಾಮಾನ್ಯ ಸೂಚನೆಗಳು:–

1) ಇ–ಪ್ರಕ್ಯೂರ್ ಮೆಂಟ್ ಮೂಲಕ ಮಾಹಿತಿ/ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ: 19.02.2024 ಸಾಯಂಕಾಲ 4.30 ರ ಒಳಗೆ. 2)ಇ–ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.02.2024 ಸಾಯಂಕಾಲ 4.30 ರ ಒಳಗೆ. 3)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:21.02,2024 ಸಾಯಂಕಾಲ 5.00ರ ನಂತರ 4)ಆರ್ಥಿಕ ಬಿಡ್ ತೆರೆಯುವ ದಿನಾಂಕ:22.01,2024 ಸಾಯಂಕಾಲ 5.00ರ ನಂತರ ಹಾಗೂ ಯಾವುದೇ ಬಿಡ್‌ರ ನಿಗದಿತ ಕೊನೆಯ ದಿನಾಂಕದ ಒಳಗಡೆ ಭಾಗವಹಿಸದಿದ್ದಲ್ಲಿ 3 ದಿನಗಳ ಸ್ವಯಂಚಾಲಿತವಾಗಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ವಿಸ್ತರಣೆಯಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಸಂಬಂದಿಸಿದ ಕಿರಿಯ ಅಭಿಯಂತರರು, ಪುರಸಭೆ ಕಾರ್ಯಾಲಯ ಸಂಡೂರು ರವರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ. **ದೂರವಾಣಿ ಸಂಖ್ಯೆ 08395 – 260275, website: www.sandoortown.mrc.gov.in**

ಸಹಿ/– ಮುಖ್ಯಾಧಿಕಾರಿ, ಪುರಸಭೆ ಸಂಡೂರು

ಸಹಿ/– ಮಾನ್ಯ ಆಡಳಿತಾಧಿಕಾರಿಗಳು ಮತ್ತು ಸಹಾಯಕ ಅಯುಕ್ತರು, ಪುರಸಭೆ ಸಂಡೂರು

ನಗರಸಭೆ ಕಾರ್ಯಾಲಯ, ಬೀದರ

ನಂ.ಬಿಎಂಸಿ/ಇಎನ್‌ಜಿ/ಸಿಆರ್–85/86/2023–24 ದಿನಾಂಕ:05–02–2024.

– : ಕೊರಿಜೆಂಡಮ್: –

ಈ ಕಛೇರಿಯ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆಯ ಸಂಖ್ಯೆ ಬಿಎಂಸಿ/ಇಎನ್‌ಜಿ/ಸಿಆರ್–85/86/2023–24 ದಿನಾಂಕ:– 12–01–2024ರಂದು ಟೆಂಡರ ಕರೆಯಲಾಗಿರುವ ಕಾಲಾವಧಿಯನ್ನು ದಿನಾಂಕ: 29–01–2024ರಂದು ಜಾರಿ ಮಾಡಿಡಿಣವ ಕೊರಿಜೆಂಡಮ್ ಮೂಲಕ ಟೆಂಡರಿಗಳಿಗೆ ಬಿಡ್ಡ್ ಸಲ್ಲಿಸುವ ಕೊನೆಯ ದಿನಾಂಕವನ್ನು 05–02–2024 ರಂದು ನಿಗದಿಪಡಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಎರಡು ಕಾಮಗಾರಿಯ ಇಂಡೆಂಟ್ ಸಂಖ್ಯೆ:–DMA/2023-24/OW/WORK_INDENT10165 & DMA/2023-24/OW/WORK_INDENT10103ಗೆ ಬಿಡ್ಡ ಸಲ್ಲಿಸುವ ಕೊನೆಯ ದಿನಾಂಕವನ್ನು ದಿನಾಂಕ:–08–02–2024ವರೆಗೆ ವಿಸ್ತರಿಸಲಾಗಿದೆ. ಹಾಗೂ ದಿನಾಂಕ: 09–02–2024ರ ಸಾಯಂಕಾಲ 04:30 ಗಂಟೆಗೆ ಟೆಂಡರ್ ತೆರೆಯಲಾಗುವುದುದೆಂದು ಕೊರಿಜೆಂಡಮ್ ಜಾರಿ ಮಾಡುವ ಮೂಲಕ ತಿಳಿಸಲಾಗಿದೆ. ಟೆಂಡರ್‌ನಲ್ಲಿರುವ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.

ಸಹಿ/– ಪೌರಾಯುಕ್ತರು
ನಗರಸಭೆ ಬೀದರ

ವಾ.ಸಾ.ಸಂ.ಇ/ಬೀದರ/232–1/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ
(ಧಾರ್ಮಿಕ ದತ್ತಿ ಇಲಾಖೆ)
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಶ್ರೀಕಂಠೇಶ್ವರ ಸ್ವಾಮಿ, ದೇವಾಲಯ,
ನಂಜನಗೂಡು–571301

ಸಂಖ್ಯೆ : ಎಸ್‌ಎಸ್‌ಟಿ/ಇತರೆ/ಸಿಆರ್ 02/23–24 ದಿನಾಂಕ : 03–02–2024

ಪ್ರಕಟಣೆ

ವಿಷಯ : ಮೈಸೂರು ಜಿಲ್ಲೆ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಸಂಗ್ರಹವಾಗಿರುವ ಅನುಪಯುಕ್ತ ಹರಕೆ ರೂಪಗಳು, ಅನುಪಯುಕ್ತ ವಸ್ತುಗಳನ್ನು ವಿಲೇ ಮಾಡಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ : ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರ ಪತ್ರ ಸಂಖ್ಯೆ : ಡಿಎಎಸ್/2/ಸಿಆರ್08/2023–24, ದಿನಾಂಕ : 18–12–2023 ಹಾಗೂ 17–01–2024.

ಮೈಸೂರು ಜಿಲ್ಲೆ, ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಸಂಗ್ರಹವಾಗಿರುವ ಅನುಪಯುಕ್ತ ಸ್ಟೀಲ್ ಪಾತ್ರೆಗಳು, ಪ್ಲಾಸ್ಟಿಕ್ ತಟ್ಟೆಗಳು, ಹಳೆಯ ಪೀಠೋಪಕರಣಗಳು, ಕಬ್ಬಿಣದ ವಸ್ತುಗಳು, ವಿದ್ಯುತ್ ಉಪಕರಣಗಳು, ಮರದ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು, ಅಲ್ಯೂಮಿನಿಯಂ ವಸ್ತುಗಳು, ಬ್ಯಾಟರಿಗಳು ಇತ್ಯಾದಿ ಹಾಗೂ ಹರಕೆ ರೂಪಗಳನ್ನು ವಿಲೇ ಮಾಡುವ ಬಗ್ಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಈ ಕೆಳಕಂಡ ಷರತ್ತುಗೊಳಪಟ್ಟು ಭಾಗವಹಿಸ ಬಹುದಾಗಿದೆ.

ಷರತ್ತುಗಳು :

1) ಅನುಪಯುಕ್ತ ವಸ್ತುಗಳು, ಹರಕೆ ರೂಪಗಳನ್ನು ಎಲ್ಲಿ ಹೇಗಿದೆಯೋ ಹಾಗೆ ಯಥಾಸ್ಥಿತಿಯಲ್ಲಿ ವಿಲೇ ಮಾಡಲಾಗುವುದು. ಇಚ್ಚೆಯುಳ್ಳವರು ಶ್ರೀಯವರ ದೇವಾಲಯದ ವಿವಿಧ ಸ್ಥಳಗಳಲ್ಲಿ ಸಂಗ್ರಹಿಸಲಾಗಿರುವ ಅನುಪಯುಕ್ತ ವಸ್ತುಗಳನ್ನು ಖುದ್ದಾಗಿ ಪರಿಶೀಲಿಸಬಹುದಾಗಿದೆ.
2) ಅನುಪಯುಕ್ತ ವಸ್ತುಗಳಿಗೆ ಪ್ರತಿ ಕೆ.ಜಿ.ಗೆ ದರವನ್ನು ಪ್ರತ್ಯೇಕವಾಗಿ ನಮೂದಿಸಬೇಕು. ಯಶಸ್ವಿ ಬಿಡ್‌ದಾರರು ಮೇಲೆ ನಮೂದಿಸಿದ ಅನುಪಯುಕ್ತ ವಸ್ತುಗಳನ್ನು ತೂಕದ ಮೂಲಕ ಪಡೆದು ಅದಕ್ಕೆ ತಗಲುವ ಸಂಪೂರ್ಣ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು ಹಾಗೂ ಕೂಡಲೇ ತಮ್ಮ ವಶಕ್ಕೆ ಪಡೆದುಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ದೇವಾಲಯದ ಆವರಣದಲ್ಲಿ ಇಡತಕ್ಕದ್ದಲ್ಲ. ವಿಲೇಯಾದ ಅನುಪಯುಕ್ತ ವಸ್ತುಗಳಿಗೆ/ ಹರಕೆ ರೂಪಗಳಿಗೆ ದೇವಾಲಯದ ಆಡಳಿತವು ಜವಾಬ್ದಾರರಾಗಿರುವುದಿಲ್ಲ.
3) ಯಶಸ್ವಿ ಬಿಡ್‌ದಾರರು ಒಟ್ಟು ತೂಕದ ಸಂಪೂರ್ಣ ಮೊತ್ತವನ್ನು ಪಾವತಿಸಿದ ನಂತರವೇ ಅನುಪಯುಕ್ತ ವಸ್ತುಗಳು/ ಹರಕೆ ರೂಪಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಯಾವುದೇ ಕಾರಣಕ್ಕೂ ಮೊತ್ತವನ್ನು ಹಿಂದಿರುಗಿಸಲು ಅವಕಾಶ ಇರುವುದಿಲ್ಲ.
4) ಮೊಹರಾದ ದರಪಟ್ಟಿಯನ್ನು ಸಲ್ಲಿಸಲು ಕಡೆಯ ದಿನಾಂಕ : 20–02–2024 ಸಂಜೆ 5.30 ಗಂಟೆಯವರೆಗೆ. ಮೊಹರಾದ ದರಪಟ್ಟಿಗಳನ್ನು ತೆರಯುವ ದಿನಾಂಕ : 23–02–2024 ರಂದು ಅಪರಾಹ್ನ 12.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
5) ಮೊಹರಾದ ದರಪಟ್ಟಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀಶ್ರೀಕಂಠೇಶ್ವರ ಸ್ವಾಮಿ ದೇವಾಲಯ, ನಂಜನಗೂಡು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001
ದೂರವಾಣಿ ಸಂ: 080–22265383 ವೆಬ್‌ಸೈಟ್: **www.kiadb.in** ಇಮೇಲ್: **ceoemkiadb@gmail.com**
ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19145 /2023–24 ದಿನಾಂಕ: 05.02.2024

ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕ.ಕೈ.ಪ್ರ.ಅ.ಮಂ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ರಡಿಯಲ್ಲಿ ಸಂಯೋಜಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ವೃದ್ಧಿಗಾಗಿ ಎಲ್ಲಾ ಮೂಲಸೌಕರ್ಯಗಳೊಂದಿಗೆ ಕ್ರಮಬದ್ಧವಾಗಿ ನಿರ್ಮಾಣ ಮಾಡುವ ಧ್ಯೇಯೋದ್ದೇಶ ಹೊಂದಿದೆ. ಮಂಡಳಿಯು ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೋದ್ಯಮಿಗಳ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸಿಎ/ಅಮೆನಿಟಿ ನಿವೇಶನಗಳನ್ನು ರಚಿಸುವ ಬಗ್ಗೆ ಕೆಐಎಡಿ ಕಾಯ್ದೆ 1966 ರ ಸೆಕ್ಷನ್ 14 (ಸಿ) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಐ 78 ಎಸ್‌ಪಿಕ್ಯೂ 2021 ಬೆಂಗಳೂರು ದಿನಾಂಕ: 10.11.2023 ರಲ್ಲಿ ಈ ಹಿಂದಿನ ಸರ್ಕಾರಿ ಅಧಿಸೂಚನೆ ಸಂ:ಸಿಐ 86 ಎಸ್‌ಪಿಕ್ಯೂ 90 ಬೆಂಗಳೂರು ದಿನಾಂಕ: 13.03.1991 ನ್ನು ಹಿಂಪಡೆದು ಕೆಲವು ಚಟುವಟಿಕೆಗಳನ್ನು ಅಮೆನಿಟಿ ಎಂದು ನಿಗದಿಪಡಿಸಿರುತ್ತದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಐ 78 ಎಸ್‌ಪಿಕ್ಯೂ 2021 ದಿ:10.11.2023 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶದಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಕಾರ್ಯವಿಧಾನಗಳನ್ನು ರಚಿಸಿ 10 ವರ್ಷಗಳ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಆಧಾರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ಮಂಡಳಿಯು ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಮಂಡಳಿಯ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗೆ ಪ್ರಸ್ತಾಪಿಸಿರುವ ಸಿಎ/ಅಮೆನಿಟಿ ನಿವೇಶನಗಳ ಪಟ್ಟಿಯನ್ನು ದಿನಾಂಕ: **08.02.2024** ರಿಂದ ಸಂಬಂಧಿಸಿದ ಎಲ್ಲಾ ಮಾಹಿತಿಯೊಂದಿಗೆ ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಪ್ರಕಟಿಸಲಾಗುತ್ತದೆ. ಅರ್ಜಿದಾರರು ನಿಗಧಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ರೂ.2,000/–ಗಳ ಅರ್ಜಿ ಶುಲ್ಕವನ್ನು RTGS ಮುಖಾಂತರ ಪಾವತಿಸುವುದು.

ನಿಗಧಿತ ಅರ್ಜಿ ನಮೂನೆ ಮತ್ತು RTGS ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ದಿನಾಂಕ: **08.02.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

District	Industrial Area
Bengaluru Rural	Sompura 1st & 2nd Stage
	Avverahalli
	Obadenahalli, Doddaballapura 3rd Phase
	Hitech, Defence and Aerospace Park, (Aerospace Sector)
	Hitech, Defence and Aerospace Park, (Aerospace SEZ)
Bengaluru Urban	Jigani 2nd Phase
	Hitech, Defence and Aerospace Park, (IT Sector)
	Hitech, Defence and Aerospace Park, (Hardware Sector)
Ramanagara	Bidadi phase-2, Sector-1
	Bidadi phase-2, Sector-2
	Harohalli 3rd Phase
	Harohalli 3rd Phase (Women Enter. Park)
Chikkaballapura	Gowribidnur 1st Phase
	Gowribidnur 2nd Phase
	Mastenahalli 1st Phase
Kolar	Vemgal
	Narasapura
	Malur 4th Phase
Tumakuru	Antharasanahalli 2nd Phase
	Vasanthanarasapura 1st Phase
	Vasanthanarasapura 1st Phase (Annexe)
	Vasanthanarasapura 2nd Phase
	Vasanthanarasapura 3rd Phase
	Vasanthanarasapura 3rd Phase (Residential Layout)
	Sira
	TMTP
Belagavi	Kanagala
Vijayapura	Mahalbhagayt
	Mulawad
Raichur	Manvi
	Yarmaras
Davanagere	Sarathi Kurubarahalli 1st Stage
Dakshina Kannada	Baikampadi
	EPIP 1st Stage
Udupi	Nandikur
	Belapu
	Miyaru
Hassan	Hassan Growth Centre
	Thimmanahalli
Chikkamagaluru	Amble
Chamarajanagar	Badanaguppe & Kellamballi
Mandya	Hebbal 2nd Phase
Mysuru	Kadakola
	Adakanahalli
	Thandya 2nd Phase Women's Park Phase-1
	Thandya 2nd Phase
Dharwad	Gamanagatti 1st Stage
	Mummigatti
	Kelageri SC/ST Cluster
	Rayapur
	KoturBelur
Gadag	Narasapur
Kalaburagi	Kapnoor 3rd Stage
	NanurKesaratagi
	Womens Park
Yadgir	Kadechur

ಮುಂದುವರೆದು, ಸಿಎ/ಅಮೆನಿಟಿ ನಿವೇಶನಗಳ ಹಂಚಿಕೆ ಕಾರ್ಯವಿಧಾನಗಳಲ್ಲಿ ದಿನಾಂಕ: 10–11–2023ರ ಸರ್ಕಾರಿ ಆದೇಶದನ್ವಯ ಮಾರ್ಪಾಡುಗಳನ್ನು ಮಾಡಿರುವ ಹಿನ್ನೆಲೆಯಲ್ಲಿ ಈ ಹಿಂದೆ ಹೊರಡಿಸಲಾದ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸಲಾಗಿರುತ್ತದೆ ಮತ್ತು ಸದರಿ ಅಧಿಸೂಚನೆಗಳಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರು ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಅಲ್ಲದೆ, ಸದರಿ ಅಧಿಸೂಚನೆಗಳಲ್ಲಿ ತಿಳಿಸಲಾದ ಸಿಎ/ಅಮೆನಿಟಿ ನಿವೇಶನಗಳಿಗೆ ಈಗಾಗಲೇ ಹಂಚಿಕೆಯಾಗಿದ್ದರೆ ಅವುಗಳನ್ನು ರದ್ದತಿಯಿಂದ ಹೊರತುಪಡಿಸಲಾಗಿರುತ್ತದೆ.

1. ಧಾರವಾಡ, ಗದಗ, ಕಲಬುರ್ಗಿ, ಯಾದಗಿರಿ ಹಾಗೂ ರಾಯಚೂರ್ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳ ಅಧಿಸೂಚನೆ ಸಂ: ಕೆಐಎಡಿಬಿ/ಕೇಂ.ಕ/ಹಂಚಿಕೆ/ಸಿ.ನಂ.35940/17382/2021–22 ದಿನಾಂಕ: 22–03–2022.
2. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳ ಅಧಿಸೂಚನೆ ಸಂ:ಕೆಐಎಡಿಬಿ/ಕೇಂ.ಕ/ಹಂಚಿಕೆ/ಸಿ.ನಂ.35940/17381/2021–22 ದಿನಾಂಕ: 22–03–2022 ಮತ್ತು ಅಧಿಸೂಚನೆ ಸಂ:ಕೆಐಎಡಿಬಿ/ಕೇಂ.ಕ/ಹಂಚಿಕೆ/ಸಿ.ನಂ.35940/952/2022–23 ದಿನಾಂಕ: 21–04–2022.

ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಇರುವ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ ರವರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಮಂಡಳಿಯು ಯಾವುದೇ ನಿವೇಶನ ಅಥವಾ ಕೈಗಾರಿಕಾ ಪ್ರದೇಶದ ಅಧಿಸೂಚನೆಯನ್ನು ಹಿಂಪಡೆಯಲು ಅಧಿಕಾರ ಹೊಂದಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಮಂಡಳಿಯ ನಿರ್ಣಯ ಅಂತಿಮವಾಗಿರುತ್ತದೆ, ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **23.02.2024.** ಅರ್ಜಿ ಶುಲ್ಕ ಸಲ್ಲಿಸದ ಹಾಗೂ ಇತರೆ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಮಂಡಳಿಗಿರುತ್ತದೆ. ನಿವೇಶನ ಹಂಚಿಕೆಯ ವಿಷಯದಲ್ಲಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಇದಕ್ಕೆ ಎಲ್ಲಾ ಅರ್ಜಿದಾರರು ಬದ್ಧರಾಗಿರಬೇಕಾಗಿರುತ್ತದೆ.

ಸಹಿ/–

ದಿನಾಂಕ: **05.02.2024**
ಸ್ಥಳ: ಬೆಂಗಳೂರು

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಮತ್ತು ಕಾರ್ಯನಿರ್ವಾಹಕ ಸದಸ್ಯರು

ಎರಡನೇ ಟೆಸ್ಟ್: ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 106 ರನ್ ಜಯ • ಐದು ಪಂದ್ಯಗಳ ಸರಣಿ 1–1 ಸಮಬಲ

‘ಬಾಝ್‌ಬಾಲ್’ಗೆ ಬೌಲರ್‌ಗಳ ತಿರುಗೇಟು

ವಿಕೆಟ್ ಪಡೆದ ಸಂಭ್ರಮದಲ್ಲಿ ಜಸ್‌ಪ್ರೀತ್ ಬೂಮ್ರಾ

ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸಿದ ಭಾರತ ತಂಡದ ಆಟಗಾರರ ವಿಜಯೋತ್ಸವ —ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ/ ಪಿಟಿಐ

ವಿಶಾಖಪಟ್ಟಣ: ಇಂಗ್ಲೆಂಡ್ ತಂಡದ ‘ಬಾಝ್‌ಬಾಲ್’ ಸವಾಲನ್ನು ಮಟ್ಟ ಹಾಕುವಲ್ಲಿ ಯಶಸ್ವಿಯಾದ ಭಾರತದ ಬೌಲರ್‌ಗಳು, ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಸೋಮವಾರ 106 ರನ್‌ಗಳ ಸುಲಭ ಗೆಲುವು ಸಾಧಿಸಲು ನೆರವಾದರು. ಆ ಮೂಲಕ ಐದು ಪಂದ್ಯಗಳ ಸರಣಿ 1–1 ರಲ್ಲಿ ಸಮನಾಯಿತು.

ಯುವ ಆಟಗಾರ ಯಶಸ್ವಿ ಜೈಸ್ವಾಲ್ ಆಕರ್ಷಕ ದ್ವಿಶತಕ (209) ಹೊಡೆದರೂ, ಮೊದಲ ಇನಿಂಗ್ಸ್‌ನಲ್ಲಿ ಆರು ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಪಡೆಯುವ ಮೂಲಕ (ಒಟ್ಟು 91ಕ್ಕೆ9) ಬ್ಯಾಟಿಂಗ್ ಪಿಚ್‌ನಲ್ಲಿ ಮಿಂಚಿದ ಜಸ್‌ಪ್ರೀತ್ ಬೂಮ್ರಾ ‘ಪಂದ್ಯದ ಆಟಗಾರ’ ಗೌರವ ಪಡೆದಿದ್ದು ವಿಶೇಷ.

ಭಾರತ ತಂಡ ನೀಡಿದ್ದ 399 ರನ್‌ಗಳ ದಾಖಲೆ ಗುರಿಗೆ ಉತ್ತರವಾಗಿ ಒಂದು ವಿಕೆಟ್‌ಗೆ 67 ರನ್ ಗಳಿಸಿದ್ದ ಇಂಗ್ಲೆಂಡ್ ಸೋಮವಾರ ಬೆಳಿಗ್ಗೆ ಬಿರುಸಿನ ಆರಂಭ ಮಾಡಿ ಆತಂಕ ಮೂಡಿಸಿತ್ತು. ಆದರೆ ಮೊದಲ ಒಂದು ಗಂಟೆಯ ನಂತರ ಭಾರತದ ಅನುಭವಿ ಬೌಲರ್‌ಗಳು ನಿಯಮಿತವಾಗಿ ತಿರುಗೇಟು ನೀಡಿದರು. ಚಹ ವಿರಾಮಕ್ಕೆ ಸರಿಯಾಗಿ 292 ರನ್‌ಗಳಿಗೆ ಇಂಗ್ಲೆಂಡ್ ಆಲೌಟ್ ಆಯಿತು. ಆಕ್ರಮಣದ ಆಟದಿಂದ ಒತ್ತಡ ಹೇರುವ ಪ್ರವಾಸಿ ತಂಡದ ತಂತ್ರ ಈ ಬಾರಿ ಕೈಗೂಡಲಿಲ್ಲ.

ಆರಂಭ ಆಟಗಾರ ಜ್ಯಾಕ್ ಕ್ರಾಲಿ ಎಚ್ಚರಿಕೆ ಮಿಶ್ರಿತ ಆಕ್ರಮಣದ ಆಟದಲ್ಲಿ (73, 132 ಎಸೆತ, 8x4, 6x1) ಅರ್ಧ ಶತಕ ಗಳಿಸಿದ್ದು ಬಿಟ್ಟರೆ ಉಳಿದವರಿಂದ ಅಂಥ ಕೊಡುಗೆ ಬರಲಿಲ್ಲ. ಸಾಂಘಿಕ ಯತ್ನದಲ್ಲಿ ಬೂಮ್ರಾ ಮತ್ತು ಅಶ್ವಿನ್ ತಲಾ ಮೂರು ವಿಕೆಟ್ ಪಡೆದರೆ, ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ತಲಾ ಒಂದು ವಿಕೆಟ್ ಪಡೆದರು.

‘ಇಂಥ ಪರಿಸ್ಥಿತಿಯಲ್ಲಿ ಟೆಸ್ಟ್ ಪಂದ್ಯ ಗೆಲ್ಲುವುದು ಸುಲಭವಾಗಿರಲಿಲ್ಲ. ನಾನು ಬೌಲರ್‌ಗಳಿಂದ ಉತ್ತಮ ಪ್ರದರ್ಶನ ಬಯಸಿದ್ದೆ. ಅದರಲ್ಲಿ ಅವರು ಯಶಸ್ವಿಯಾದರು’ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಪ್ರತಿಕ್ರಿಯಿಸಿದರು.

ಕ್ರಾಲಿ ಮತ್ತು ‘ನೈಟ್ ವಾಚ್‌ಮ್ಯಾನ್’ ರೆಹಾನ್ ಅಹ್ಮದ್ ಅವರು ಬೂಮ್ರಾ ಅವರ ಎಕ್ಸ್‌ಪ್ರೆಸ್ ಎಸೆತಗಳನ್ನು ಎಚ್ಚರಿಕೆಯಿಂದ ಆಡಿದರು. ಆದರೆ ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಬೌಂಡರಿಗಳನ್ನು ಬಾರಿಸತೊಡಗಿದರು. ಈ ಹಂತದಲ್ಲಿ ರೋಹಿತ್ ಶರ್ಮಾ ಸ್ವಲ್ಪ ಆತಂಕಿತರಾದಂತೆ ಕಂಡರು. ಆದರೆ, ಅಕ್ಷರ್ ಅವರನ್ನೇ ಮುಂದುವರಿಸಿದ್ದು ಫಲ ನೀಡಿತು. ಎಡಗೈ ಸ್ಪಿನ್ನರ್ ಬೌಲಿಂಗ್‌ನಲ್ಲಿ ಸ್ವಲ್ಪ ವೇಗವಾಗಿ ಬಂದ ಚೆಂಡಿಗೆ ರೆಹಾನ್ ಲೆಗ್‌ಬಿಫೋರ್ ಆದರು. ಆದರೆ ಇಂಗ್ಲೆಂಡ್ ಮಾಮೂಲಿ ಆಟದ ಮೊರೆ ಹೋಯಿತು. ಅಕ್ಷರ್ ಪಟೇಲ್ ಒಂದೇ ಓವರ್‌ನಲ್ಲಿ ಕ್ರಾಲಿ ಮೂರು ಬೌಂಡರಿಗಳನ್ನು ಬಾರಿಸಿದರು. ಇನ್ನೊಂದೆಡೆ, ಹೈದರಾಬಾದ್ ಟೆಸ್ಟ್‌ನಲ್ಲಿ 196 ರನ್ ಹೊಡೆದಿದ್ದ ಓಲಿ ಪೋಪ್ ಇಲ್ಲೂ ಬಿರುಸಿನ ಆಟಕ್ಕಿಳಿದರು. ಈ ಹಂತದಲ್ಲಿ ಅಶ್ವಿನ್ ಎಸೆತವನ್ನು ‘ಕಟ್’ ಮಾಡುವ ಯತ್ನದಲ್ಲಿ ಬ್ಯಾಟಿನಂಚಿಗೆ ತಾಗಿದ ಚೆಂಡನ್ನು ಸ್ಲಿಪ್‌ನಲ್ಲಿದ್ದ ರೋಹಿತ್ ಅಮೋಘವಾಗಿ ಕ್ಯಾಚ್ ಪಡೆದಿದ್ದರಿಂದ ಪೋಪ್ ನಿರ್ಗಮಿಸಿದರು.

ಜೋ ರೂಟ್ ಕೂಡ ‘ಪಿಂಚ್ ಹಿಟ್ಟರ್’ ರೀತಿಯಲ್ಲೇ ಬ್ಯಾಟಿಂಗ್ ಆರಂಭಿಸಿದರು. ಅಶ್ವಿನ್ ಅವರನ್ನು ಎರಡು ಸಲ ರಿವರ್ಸ್ ಸ್ವೀಪ್ ಮಾಡಿ ಅವರ ಲಯ ತಪ್ಪಿಸಲು ಮುಂದಾದರು. ಆದರೆ ಈ ‘ಸಮರ’ದಲ್ಲಿ ಅಂತಿಮ ನಗು ಅಶ್ವಿನ್ ಅವರದಾಯಿತು. ಮತ್ತೊಂದು ದೊಡ್ಡ ಹೊಡೆತದ ಯತ್ನದಲ್ಲಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ರೂಟ್ ಕ್ಯಾಚಿತ್ತರು. ಆಗ ಮೊತ್ತ 154ಕ್ಕೆ4.

ಆದರೂ ಕ್ರಾಲಿ ಮತ್ತು ಜಾನಿ ಬೇಸ್ಟೊ ಆಕ್ರಮಣದ ಆಟವನ್ನು ಮುಂದುವರಿಸಿ ಕೆಲಮಟ್ಟಿಗೆ ಕುಸಿತ ತಡೆಗಟ್ಟಿದರು. ಲಂಚ್‌ಗೆ ಕೆಲವೇ ನಿಮಿಷಗಳಿರುವಾಗ ಬೂಮ್ರಾ ಮತ್ತೆ ದಾಳಿಗಿಳಿದು ಬೇಸ್ಟೊ (26) ಅವರ ವಿಕೆಟ್ ಪಡೆದರು. ಲಂಚ್ ನಂತರ ನಾಯಕ ಬೆನ್ ಸ್ಟೋಕ್ಸ್, ಅವರು ಮಿಡ್‌ವಿಕೆಟ್‌ನಿಂದ ಶ್ರೇಯಸ್ ಅಯ್ಯರ್ ಅವರ ಚುರುಕಿನ ಥ್ರೋಗೆ ರನೌಟ್ ಆದರು. ಪಂದ್ಯ ಭಾರತದ ಹಿಡಿತಕ್ಕೆ ಬಂದಿತು. ಬೆನ್ ಫೋಕ್ಸ್ (36) ಮತ್ತು ಟಾಮ್ ಹಾರ್ಟ್ಲಿ (36) ಎಂಟನೇ ವಿಕೆಟ್‌ಗೆ 55 ರನ್ ಸೇರಿಸಿ ಕೆಲಕಾಲ ಪ್ರತಿರೋಧ ತೋರಿದರು. ಆದರೆ, ಇವರಿಬ್ಬರ ವಿಕೆಟ್ ಸಹ ಬೂಮ್ರಾ ಪಾಲಾಯಿತು.

499: ಟೆಸ್ಟ್ ಪಂದ್ಯಗಳಲ್ಲಿ ಅಶ್ವಿನ್ ಪಡೆದಿರುವ ವಿಕೆಟ್‌ಗಳು

97: ಇಂಗ್ಲೆಂಡ್ ವಿರುದ್ಧ ಟೆಸ್ಟ್‌ಗಳಲ್ಲಿ ಅಶ್ವಿನ್ ಪಡೆದಿರುವ ವಿಕೆಟ್‌ಗಳು. ಇದು ಭಾರತೀಯ ಬೌಲರ್ ಒಬ್ಬರ ಶ್ರೇಷ್ಠ ಸಾಧನೆ

695: ಜೇಮ್ಸ್ ಆ್ಯಂಡರ್ಸನ್ ಪಡೆದಿರುವ ಟೆಸ್ಟ್ ವಿಕೆಟ್‌ಗಳ ಸಂಖ್ಯೆ

ಟೆಸ್ಟ್: ಬೂಮ್ರಾ ಅವರ ಉತ್ತಮ ಸಾಧನೆ
9/86 ಆಸ್ಟ್ರೇಲಿಯಾ ವಿರುದ್ಧ (ಮೆಲ್ಬರ್ನ್) 2018
9/91 ಇಂಗ್ಲೆಂಡ್ ವಿರುದ್ಧ (ವಿಶಾಖಪಟ್ಟಣ) 2024
9/110 ಇಂಗ್ಲೆಂಡ್ ವಿರುದ್ಧ (ನಾಟಿಂಗ್‌ಹ್ಯಾಮ್) 2021

‘ಬೆರಳಿನ ಗಾಯ ತೀವ್ರ ಸ್ವರೂಪದ್ದಲ್ಲ’

ಶುಭಮನ್ ಗಿಲ್

ವಿಶಾಖಪಟ್ಟಣ (ಪಿಟಿಐ): ತಮಗೆ ಆಗಿರುವ ತೋರು ಬೆರಳಿನ ಗಾಯ ತೀವ್ರ ಸ್ವರೂಪದ್ದಲ್ಲ ಎಂಬುದು ಸ್ಕ್ಯಾನಿಂಗ್‌ನಿಂದ ಗೊತ್ತಾಗಿದೆ. ಮುಂದಿನ ಕೆಲ ದಿನಗಳಲ್ಲಿ ಸಂಪೂರ್ಣ ಗುಣವಾಗಲಿದೆ ಎಂದು ಭಾರತದ ಬ್ಯಾಟರ್ ಶುಭಮನ್ ಗಿಲ್ ಸೋಮವಾರ ಇಲ್ಲಿ ತಿಳಿಸಿದರು.

ಎರಡನೇ ಟೆಸ್ಟ್‌ನ ನಾಲ್ಕನೇ ದಿನವಾದ ಸೋಮವಾರ ಅವರು ಮೈದಾನಕ್ಕೆ ಇಳಿದಿರಲಿಲ್ಲ. ಅವರ ಬದಲು ಸರ್ಫರಾಜ್ ಖಾನ್ ಫೀಲ್ಡ್ ಮಾಡಿದ್ದರು. ಮೂರನೇ ದಿನವಾದ ಭಾನುವಾರ ಗಿಲ್ 147 ಎಸೆತಗಳಲ್ಲಿ 104 ರನ್ ಗಳಿಸಿದ್ದರು.

ಭಾನುವಾರ ಆಟದ ಕೊನೆಯ ಅವಧಿಯಲ್ಲಿ, ಇಂಗ್ಲೆಂಡ್ ಆಡುವ ವೇಳೆ ಅವಸರದಲ್ಲಿ ಕ್ರೀಡಾಂಗಣದಿಂದ ಹೊರಗೆ ಹೋಗಿದ್ದರು. ತಾವು ಸ್ಕ್ಯಾನಿಂಗ್‌ಗೆ ಹೋಗಿದ್ದಾಗಿ ಅವರು ಬಹಿರಂಗಪಡಿಸಿದ್ದಾರೆ. ‘ಎರಡನೇ ದಿನ ಫೀಲ್ಡಿಂಗ್ ವೇಳೆ ಗಿಲ್ ಅವರ ತೋರು ಬೆರಳಿಗೆ ಗಾಯವಾಗಿದ್ದು, ಅವರು ಕ್ರೀಡಾಂಗಣಕ್ಕೆ ಇಳಿಯುವುದಿಲ್ಲ’ ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ ಅವರು ನಾಲ್ಕು ಕ್ಯಾಚ್ ಪಡೆದಿದ್ದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 396 ಇಂಗ್ಲೆಂಡ್ 253. ಎರಡನೇ ಇನಿಂಗ್ಸ್: ಭಾರತ 255 ಇಂಗ್ಲೆಂಡ್: 292 (69.2 ಓವರುಗಳಲ್ಲಿ) (ಭಾನುವಾರ: 1 ವಿಕೆಟ್‌ಗೆ 67)

ಕ್ರಾಲಿ ಎಲ್‌ಬಿಡಬ್ಲ್ಯು ಬಿ ಕುಲದೀಪ್ 73 (132ಎ, 4x8, 6x1)
ರೆಹಾನ್ ಎಲ್‌ಬಿಡಬ್ಲ್ಯು ಬಿ ಪಟೇಲ್ 23 (31ಎ, 4x5)
ಪೋಪ್ ಸಿ ಶರ್ಮಾ ಬಿ ಅಶ್ವಿನ್ 23 (21ಎ, 4x5)
ರೂಟ್ ಸಿ ಪಟೇಲ್ ಬಿ ಅಶ್ವಿನ್ 16 (36ಎ, 4x2, 6x1)
ಬೇಸ್ಟೊ ಎಲ್‌ಬಿಡಬ್ಲ್ಯು ಬಿ ಬೂಮ್ರಾ 26 (36ಎ, 4x5)
ಸ್ಟೋಕ್ಸ್ ರನ್‌ಔಟ್ (ಅಯ್ಯರ್) 11 (29ಎ, 4x1)
ಫೋಕ್ಸ್ ಸಿ ಮತ್ತು ಬಿ ಬೂಮ್ರಾ 36 (69ಎ, 4x4, 6x1)
ಹಾರ್ಟ್ಲಿ ಬಿ ಬೂಮ್ರಾ 36 (47ಎ, 4x5, 6x1)
ಬಷೀರ್ ಸಿ ಭರತ್ ಬಿ ಮುಕೇಶ್ 0 (8ಎ)
ಆ್ಯಂಡರ್ಸನ್ ಔಟಾಗದೆ 5 (8ಎ, 4x1)

ಇತರೆ: 15 (ಬೈ 5, ಲೆಗ್ ಬೈ 8, ನೋಬಾಲ್ 2)

ವಿಕೆಟ್ ಪತನ: 2–95 (ರೆಹಾನ್ ಅಹ್ಮದ್; 21.5), 3–132 (ಓಲಿ ಪೋಪ್, 28.2), 4–154 (ಜೋ ರೂಟ್, 30.6), 5–194 (ಜ್ಯಾಕ್ ಕ್ರಾಲಿ, 41.6), 6–194 (ಜಾನಿ ಬೇಸ್ಟೊ, 42.4), 7–220 (ಬೆನ್ ಸ್ಟೋಕ್ಸ್, 52.4), 8–275 (ಬೆನ್ ಫೋಕ್ಸ್, 64.6), 9–281 (ಶೋಯೆಬ್ ಬಷೀರ್, 67.3), 10–292 (ಟಾಮ್ ಹಾರ್ಟ್ಲಿ, 69.2)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 17.2–4–46–3, ಮುಕೇಶ್ ಕುಮಾರ್ 5–1–26–1, ಕುಲದೀಪ್ ಯಾದವ್ 15–0–60–1, ಆರ್. ಅಶ್ವಿನ್ 18–2–72–3, ಅಕ್ಷರ್ ಪಟೇಲ್ 14–1–75–1

ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಮೂರನೇ ಟೆಸ್ಟ್: ಫೆ.15ರಿಂದ ರಾಜ್‌ಕೋಟ್‌ನಲ್ಲಿ

ಫಲಿತಾಂಶ: ಭಾರತಕ್ಕೆ 106 ರನ್ ಜಯ, ಸರಣಿ 1–1 ಸಮಬಲ

ಯುವ ಆಟಗಾರರಿಗೆ ದ್ರಾವಿಡ್ ಪ್ರಶಂಸೆ

ವಿಶಾಖಪಟ್ಟಣ (ಎಎಫ್‌ಪಿ): ಇಂಗ್ಲೆಂಡ್ ಎದುರು ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತದ ಯುವ ಆಟಗಾರರ ಪ್ರದರ್ಶನದಿಂದ ಸಂತಸವಾಗಿದೆ ಎಂದು ತಂಡದ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

‘ಸ್ಟಾರ್ ಬ್ಯಾಟರ್’ ವಿರಾಟ್ ಕೊಹ್ಲಿ ವೈಯಕ್ತಿಕ ಕಾರಣಗಳಿಂದ ಎರಡು ಪಂದ್ಯಗಳಲ್ಲಿ ಆಡಿರಲಿಲ್ಲ. ಅನುಭವಿ ಬ್ಯಾಟರ್ ಕೆ.ಎಲ್.ರಾಹುಲ್ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜಾ ಕೂಡ ವಿಶಾಖಪಟ್ಟಣದ ಟೆಸ್ಟ್‌ಗೆ ಲಭ್ಯರಿರಲಿಲ್ಲ. ಇವರ ಅನುಪಸ್ಥಿತಿಯಲ್ಲಿ, 22 ವರ್ಷದ ಯಶಸ್ವಿ ಜೈಸ್ವಾಲ್ ಮೊದಲ ಇನಿಂಗ್ಸ್‌ನಲ್ಲಿ ದ್ವಿಶತಕ ಬಾರಿಸಿ ಏಕಾಂಗಿ ಹೋರಾಟ ನಡೆಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿ, 24 ವರ್ಷದ ಶುಭಮನ್ ಗಿಲ್ ಅವರ ಶತಕದಿಂದ ಭಾರತ, ಇಂಗ್ಲೆಂಡ್‌ಗೆ ಸವಾಲಿನ ಗುರಿ ಎಸೆದಿತ್ತು. ‘ಯುವ ಆಟಗಾರರು ಈ ರೀತಿ ಸ್ಪಂದಿಸಿರುವುದನ್ನು ನೋಡುವಾಗ ಖುಷಿಯಾಗುತ್ತದೆ’ ಎಂದು ಅವರು ವರದಿಗಾರರಿಗೆ ತಿಳಿಸಿದರು.

ಮೂರನೇ ಟೆಸ್ಟ್‌ಗೆ ಎರಡು ದಿನಗಳಲ್ಲಿ ತಂಡ ಪ್ರಕಟಿಸುವ ಸಾಧ್ಯತೆಯಿದೆ. ಆದರೆ ಕೊಹ್ಲಿ ಅವರು ತಂಡಕ್ಕೆ ಮರಳುವ ಬಗ್ಗೆ ಕೇಳಿದಾಗ ಖಚಿತವಾಗಿ ಏನನ್ನೂ ಹೇಳಲಿಲ್ಲ. ‘ಮುಂದಿನ ಮೂರು ಪಂದ್ಯಗಳಿಗೆ ತಂಡವನ್ನು ಪ್ರಕಟಿಸಿದ ಬಳಿಕ ಈ ಬಗ್ಗೆ ಆಯ್ಕೆಗಾರರನ್ನೇ ಕೇಳಬಹುದು’ ಎಂದು ಹೇಳಿದರು.

ಇಂಗ್ಲೆಂಡ್‌ನ ಆಕ್ರಮಣಕಾರಿ ಶೈಲಿಯ ‘ಬಾಝ್‌ಬಾಲ್’ ಆಟದ ಬಗ್ಗೆಯೂ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ‘ಅವರಿಗೆ ಇದರಿಂದ ಎಷ್ಟು ಅನುಕೂಲವಾಗಿದೆ ಎಂಬುದು ತಿಳಿದಿಲ್ಲ. ಆದರೆ ಅವರು ಒಳ್ಳೆಯ ಕ್ರಿಕೆಟ್ ಆಡುತ್ತಿದ್ದಾರೆ. ತಂಡದ ಆಡಳಿತ, ಸ್ಪಿನ್ನರ್‌ಗಳಿಗೆ ನೆರವಾಗುವ ಪಿಚ್ ಕೇಳುವುದಿಲ್ಲ. ಆದರೆ, ಟೆಸ್ಟ್ ಪಂದ್ಯದಲ್ಲಿ ನಿರ್ದಿಷ್ಟ ಪಿಚ್‌ವೊಂದು ದಿನಕಳೆದಂತೆ ಹೇಗೆ ವರ್ತಿಸುತ್ತದೆ ಎಂಬುದನ್ನು ಹೇಳುವುದು ಕಷ್ಟ’ ಎಂದರು.

ಸಮತೋಲನ ಹೊಂದಿರುವ ಬೌಲಿಂಗ್ ದಾಳಿಯನ್ನು ಹೊಂದಿರುವ ಕಾರಣ, ಸ್ಪಿನ್ನರ್‌ಗಳಿಗೆ ನೆರವಾಗುವ ಪಿಚ್‌ಗಳನ್ನು ಭಾರತ ಕೇಳಬೇಕಾದ ಅಗತ್ಯವಿಲ್ಲ ಎಂದು ದ್ರಾವಿಡ್ ಜೊತೆ ಹಲವು ವರ್ಷ ಆಡಿದ್ದ ಮಾಜಿ ನಾಯಕ ಸೌರವ್ ಗಂಗೂಲಿ ಇತ್ತೀಚೆಗೆ ಹೇಳಿದ್ದರು.

ಟೆಸ್ಟ್ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ಏರಿದ ಭಾರತ

ದುಬೈ (ಪಿಟಿಐ): ಇಂಗ್ಲೆಂಡ್ ಮೇಲೆ ಸೋಮವಾರ ಸಾಧಿಸಿದ ಗೆಲುವಿನೊಡನೆ ಭಾರತ ತಂಡ, ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಕ್ರಮಾಂಕಪಟ್ಟಿಯಲ್ಲಿ (2023–25) ನಾಲ್ಕು ಸ್ಥಾನ ಬಡ್ತಿ ಪಡೆದಿದ್ದು, ಎರಡನೇ ಸ್ಥಾನಕ್ಕೆ ಜಿಗಿದಿದೆ.

ಮೊದಲ ಟೆಸ್ಟ್‌ನಲ್ಲಿ ಅನುಭವಿಸಿದ ಸೋಲಿನಿಂದ ಭಾರತ ಈ ಹಿಂದಿನ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಸರಿದಿತ್ತು. ಎರಡನೆ ಟೆಸ್ಟ್ ಗೆಲುವಿನ ನಂತರ ಭಾರತ 52.77 ಪರ್ಸೆಂಟೇಜ್ ಪಾಯಿಂಟ್ಸ್ ಪಡೆದಿದ್ದು, ಆಸ್ಟ್ರೇಲಿಯಾ ನಂತರ (55.00) ಎರಡನೇ ಸ್ಥಾನದಲ್ಲಿದೆ.

ಕ್ರಮಾಂಕಪಟ್ಟಿಯ ಮೇಲಿನ ಅರ್ಧದಲ್ಲಿರುವ ತಂಡಗಳ ನಡುವೆ ಪೈಪೋಟಿ ತೀವ್ರವಾಗಿದ್ದು ತಂಡಗಳ ಅಂತರ ಶೇ 5ಕ್ಕಿಂತ ಕಡಿಮೆಯಿದೆ.

ಕರ್ನಾಟಕಕ್ಕೆ ಮಣಿದ ನಾಗಾಲ್ಯಾಂಡ್

ಬೆಂಗಳೂರು: ಅದಿತಿ ಬಕ್ಕಾ ಅವರ ಪರಿಣಾಮಕಾರಿ ದಾಳಿಯಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ 260 ರನ್‌ಗಳಿಂದ ನಾಗಾಲ್ಯಾಂಡ್ ವಿರುದ್ಧ ಸುಲಭ ಜಯ ಸಾಧಿಸಿತು.

ಕೋಲ್ಕತ್ತದ 22 ಯಾರ್ಡ್ಸ್ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 316 ರನ್ ಗಳಿಸಿತ್ತು.

ಗುರಿಯನ್ನು ಬೆನ್ನತ್ತಿದ ನಾಗಾಲ್ಯಾಂಡ್ ತಂಡವನ್ನು ಕರ್ನಾಟಕದ ಅದಿತಿ ಬಕ್ಕಾ (20ಕ್ಕೆ 5) ಕಾಡಿದರು. ಹೀಗಾಗಿ, 19.2 ಓವರ್‌ಗಳಲ್ಲಿ ತಂಡವು ಕುಸಿಯಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 316 (ರೋಷಿನಿ ಕಿರಣ್ 88, ಚಾಂದಸಿ ಕೃಷ್ಣಮೂರ್ತಿ 57, ಮಿಥಿಲಾ ವಿನೋದ್ 87; ಮೆರೆನ್ಸೋಲಾ 69ಕ್ಕೆ 4). ನಾಗಾಲ್ಯಾಂಡ್ 19.2 ಓವರ್‌ಗಳಲ್ಲಿ 56 (ಅದಿತಿ 20ಕ್ಕೆ 5).

19 ವರ್ಷದೊಳಗಿನವರ ವಿಶ್ವಕಪ್: ಸೆಮಿಫೈನಲ್ ಇಂದು

ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಬೆನೋನಿ (ಪಿಟಿಐ): ಪ್ರಶಸ್ತಿಗೆ ನೆಚ್ಚಿನ ತಂಡವಾಗಿರುವ ಭಾರತ, ಮಂಗಳವಾರ ವಿಲ್ಲೊಮೂರ್ ಪಾರ್ಕ್‌ನಲ್ಲಿ ನಡೆಯುವ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಹಾಲಿ ಚಾಂಪಿಯನ್ ಆಗಿರುವ ಭಾರತ ಈ ಬಾರಿ ಟೂರ್ನಿಯಲ್ಲಿ ಸತತ ಐದು ಗೆಲುವುಗಳೊಂದಿಗೆ ಅಮೋಘ ಫಾರ್ಮಿನಲ್ಲಿದೆ. ಪ್ರತಿಭಾನ್ವಿತ ಯುವ ಆಟಗಾರರು ಸ್ಥಿರ ಪ್ರದರ್ಶನ ನೀಡುತ್ತಿರುವುದು ತಂಡದ ಸುಲಭ ಗೆಲುವುಗಳಿಗೆ ಕಾರಣವಾಗಿದೆ. ಬ್ಯಾಟರ್‌ಗಳು ರನ್ನಿನ ಹೊಳೆ ಹರಿಸಿದರೆ, ಬೌಲರ್‌ಗಳು ಪರಿಣಾಮಕಾರಿಯಾಗಿದ್ದಾರೆ.

18 ವರ್ಷದ ಮುಶೀರ್ ಖಾನ್ ಅವರು ಎರಡು ಶತಕ, ಒಂದು ಅರ್ಧ ಶತಕದೊಡನೆ ಈ ಟೂರ್ನಿಯಲ್ಲಿ 83.50 ಸರಾಸರಿಯಲ್ಲಿ 334 ರನ್ ಪೇರಿಸಿ ಟೂರ್ನಿಯ ಅಗ್ರ ಬ್ಯಾಟರ್ ಎನಿಸಿದ್ದಾರೆ. ನಾಯಕ ಉದಯ್ ಸಹಾರನ್ ಅವರು 304 ರನ್ (61.60 ಸರಾಸರಿ) ಕಲೆಹಾಕಿದ್ದಾರೆ. ಈ ಹಿಂದಿನ ಸೂಪರ್ ಸಿಕ್ಸ್ ಪಂದ್ಯದಲ್ಲಿ ಮತ್ತೊಬ್ಬ ಬ್ಯಾಟರ್ ಸಚಿನ್ ದಾಸ್ ಶತಕ ಬಾರಿಸಿದ್ದರು.

ಬೌಲಿಂಗ್‌ನಲ್ಲಿ ತಂಡದ ಉಪನಾಯಕ ಸೌಮಿ ಕುಮಾರ್ ಪಾಂಡೆ ಎಡಗೈ ಸ್ಪಿನ್ ದಾಳಿಯಲ್ಲಿ ಮೂರು ಬಾರಿ ನಾಲ್ಕು ವಿಕೆಟ್ ಗೊಂಚಲು ಸಹಿತ 16 ವಿಕೆಟ್‌ಗಳನ್ನು ಬಾಚಿಕೊಂಡಿದ್ದಾರೆ. ಅವರ ಇಕಾನಮಿ ದರ 2.17 ಇದ್ದು, ಟೂರ್ನಿಯ ಯಶಸ್ವಿ ಬೌಲರ್‌ಗಳಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ವೇಗದ ಬೌಲರ್‌ಗಳಾದ ನಮನ್ ತಿವಾರಿ (9 ವಿಕೆಟ್) ಮತ್ತು ರಾಜ್ ಲಿಂಬಾನಿ (4 ವಿಕೆಟ್) ಅವರು ಯಶಸ್ಸು ದೊರಕಿಸಿಕೊಟ್ಟ ನಂತರ ಪಾಂಡೆ ಎದುರಾಳಿಗಳ ಬೆನ್ನೆಲುಬು ಮುರಿಯುತ್ತ ಬಂದಿದ್ದಾರೆ. ಈ ಟೂರ್ನಿಗೆ ನಡೆದ ತ್ರಿಕೋನ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಚೇಸಿಂಗ್ ವೇಳೆ ಭಾರತ ತಂಡ ಎರಡು ಬಾರಿ ಜಯಗಳಿಸಿತ್ತು. ಈ ಅಂಶ ತಂಡಕ್ಕೆ ಹೆಚ್ಚಿನ ಆತ್ಮವಿಶ್ವಾಸ ನೀಡಲಿದೆ.

ಉದಯ್ ಸಹಾರನ್

ಪಾಕಿಸ್ತಾನ ತಂಡವು ಫೆ. 8ರಂದು ನಡೆಯುವ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರೊ ಕಬಡ್ಡಿ: ಪೈರೇಟ್ಸ್‌ಗೆ ರೋಚಕ ಜಯ

ನವದೆಹಲಿ: ಸಚಿನ್ ಹಾಗೂ ಸುಧಾಕರ್ ಅವರ ‘ಸೂಪರ್ ಟೆನ್’ ಸಾಧನೆ ನೆರವಿನಿಂದ ಪಟ್ನಾ ಪೈರೇಟ್ಸ್ ತಂಡವು ಸೋಮವಾರ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 36–33 ರಿಂದ ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ ಗೆಲುವು ಸಾಧಿಸಿತು.

ಇಲ್ಲಿನ ತ್ಯಾಗರಾಜ ಕ್ರೀಡಾ ಸಂಕೀರ್ಣದಲ್ಲಿ ನಡೆದ ಪಂದ್ಯದಲ್ಲಿ ಮಧ್ಯಂತರ ವೇಳೆಗೆ 14–18 ರಿಂದ ಹಿನ್ನಡೆಯಲ್ಲಿದ್ದ ಪೈರೇಟ್ಸ್ ತಂಡವು ನಂತರ ಸಾಂಘಿಕ ಆಟವಾಡಿ ಗೆಲುವು ದಾಖಲಿಸಿತು. ರೈಡಿಂಗ್‌ನಲ್ಲಿ ಸಚಿನ್ ಮತ್ತು ಸುಧಾಕರ್ ತಲಾ 10 ಪಾಯಿಂಟ್ಸ್ ಪಡೆದು ಮಿಂಚಿದರೆ, ಟ್ಯಾಕಲ್‌ನಲ್ಲಿ ಕೃಷ್ಣ ಅವರು 5 ಅಂಕ ಕಲೆ ಹಾಕಿ ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಪ್ಯಾಂಥರ್ಸ್ ಪರ ಪ್ರಮುಖ ರೈಡರ್ ಅರ್ಜುನ್ ದೇಶ್ವಾಲ್ ಅವರು ಹೋರಾಟ ತೋರಿ 9 ಟಚ್ ಪಾಯಿಂಟ್ಸ್ ಸಹಿತ 12 ಅಂಕ ಗಳಿಸಿದರೂ, ಅದು ತಂಡದ ಗೆಲುವಿಗೆ ಸಾಕಾಗಲಿಲ್ಲ. ಇತರ ಆಟಗಾರರಿಂದ ಅವರಿಗೆ ಉತ್ತಮ ಬೆಂಬಲ ದೊರೆಯಲಿಲ್ಲ. ಭವಾನಿ ರಜಪೂತ್ ಮತ್ತು ಶೌಲ್ ಕುಮಾರ್ ತಲಾ 4 ಪಾಯಿಂಟ್ಸ್ ಗಳಿಸಲಷ್ಟೇ ಶಕ್ತರಾದರು.

ದಿನದ ಇನ್ನೊಂದು ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಮತ್ತು ಪುಣೇರಿ ಪಲ್ಟನ್ ನಡುವಿನ ಪಂದ್ಯವು ರೋಚಕ ಟೈ ಆಯಿತು.

ಪ್ರೊ ಕಬಡ್ಡಿ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಪಟ್ನಾ ಪೈರೇಟ್ಸ್ ನಡುವೆ ಹಣಾಹಣಿ

ಉಭಯ ತಂಡಗಳು 30–30 ಸಮಬಲ ಸಾಧನೆ ಮಾಡಿದವು. ಪುಣೇರಿ ಪರ ಅಸ್ಲಾಂ 10 ಪಾಯಿಂಟ್ಸ್ ಕಲೆ ಹಾಕಿದರೆ, ದಬಾಂಗ್ ತಂಡದ ಪರ ಅಶು ಮಲ್ಲಿಕ್ 8 ಅಂಕ ಸಂಪಾದಿಸಿದರು.

ಇಂದಿನ ಪಂದ್ಯ: ತಮಿಳ್ ತಲೈವಾಸ್–ಯು.ಪಿ.ಯೋಧಾಸ್

ರಚಿನ್ ರವೀಂದ್ರ ದ್ವಿಶತಕ

ಮೌಂಟ್ ಮಾಂಗಾನೂಯಿ (ನ್ಯೂಜಿಲೆಂಡ್) (ಎಪಿ): ಮಧ್ಯಮ ಕ್ರಮಾಂಕದ ಬ್ಯಾಟರ್ ರಚಿನ್ ರವೀಂದ್ರ ಅವರ ದ್ವಿಶತಕದ (240) ನೆರವಿನಿಂದ ನ್ಯೂಜಿಲೆಂಡ್ ತಂಡ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದ ಆಟದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಮೇಲುಗೈ ಸಾಧಿಸಿದೆ. ನ್ಯೂಜಿಲೆಂಡ್ ತಂಡ ಮೊದಲ ಇನಿಂಗ್ಸ್‌ನಲ್ಲಿ 511 ರನ್‌ಗಳ ಭಾರಿ ಮೊತ್ತ ಗಳಿಸಿದೆ.

ಸೋಮವಾರ ಎರಡನೇ ದಿನದಾಟದ ಕೊನೆಗೆ ಪ್ರವಾಸಿ ದಕ್ಷಿಣ ಆಫ್ರಿಕಾ 80 ರನ್ನಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ. ಮೊದಲ ಇನಿಂಗ್ಸ್ ಬಾಕಿ ತೀರಿಸಲು ಇನ್ನೂ 431 ರನ್ ಗಳಿಸಬೇಕಾಗಿದೆ. ಒಂದು ಹಂತದಲ್ಲಿ ತಂಡ 30 ರನ್ನಿಗೆ 3 ವಿಕೆಟ್ ಕಳೆದುಕೊಂಡಿತ್ತು

ಆತಿಥೇಯರ ಪರ ಕೇನ್ ವಿಲಿಯಮ್ಸನ್ 118 ರನ್ ಗಳಿಸಿದರು. ರಚಿನ್ ಅವರ 366 ಎಸೆತಗಳ ಇನಿಂಗ್ಸ್‌ನಲ್ಲಿ ಮೂರು ಸಿಕ್ಸರ್, 24 ಬೌಂಡರಿಗಳಿದ್ದವು.

ದ್ವಿಶತಕ ಸಿಡಿಸಿದ ಸಂಭ್ರಮದಲ್ಲಿ ರಚಿನ್ ರವೀಂದ್ರ —ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 144 ಓವರುಗಳಲ್ಲಿ 511 (ಕೇನ್ ವಿಲಿಯಮ್ಸನ್ 118, ರಚಿನ್ ರವೀಂದ್ರ 240, ಡೇರಿಲ್ ಮಿಚೆಲ್ 34, ಗ್ಲೆನ್ ಫಿಲಿಪ್ಸ್ 39; ನೀಲ್ ಬ್ರಾಂಡ್ 119ಕ್ಕೆ6); ದಕ್ಷಿಣ ಆಫ್ರಿಕಾ: 28 ಓವರ್‌ಗಳಲ್ಲಿ 4 ವಿಕೆಟ್‌ಗೆ 80 (ಡೇವಿಡ್ ಬೆಡ್ಡಿಂಗಂ ಬ್ಯಾಟಿಂಗ್ 29; ಕೈಲ್ ಜೇಮಿಸನ್ 21ಕ್ಕೆ2).

ಲವ್ಲೀನಾಗೆ ಅನರ್ಹತೆ ಆಘಾತ

ಸೋಫಿಯಾ, ಬಲ್ಗೇರಿಯಾ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕವಿಜೇತೆ, ಭಾರತದ ಲವ್ಲಿನಾ ಬೋರ್ಗೊಹೈನ್ (75 ಕೆಜಿ) ಸೋಮವಾರ ಇಲ್ಲಿ ನಡೆದ 75ನೇ ಸ್ಟ್ರಾಂಡ್ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅನರ್ಹಗೊಂಡು ಆಘಾತ ಅನುಭವಿಸಿದರು.

ಈಗಾಗಲೇ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ 26 ವರ್ಷದ ಲವ್ಲಿನಾ ಅವರು ಐರ್ಲೆಂಡ್‌ನ ಒರೂರ್ಕೆ ಅಯೋಫೆ ವಿರುದ್ಧದ ಹೋರಾಟ ನಡೆಸಿದರು. ಮೊದಲ ಎರಡು ಸುತ್ತುಗಳಲ್ಲಿ 3-2ರಿಂದ ಮುನ್ನಡೆ ಪಡೆದಿದ್ದರು. ಆದರೆ, ಮೂರನೇ ಸುತ್ತಿನಲ್ಲಿ ಆಕ್ರಮಣಕಾರಿ ವಿಧಾನ ಬಳಸಿದ್ದಕ್ಕೆ ಮೂರು ಎಚ್ಚರಿಕೆ ಪಡೆದ ಅವರನ್ನು ಅನರ್ಹಗೊಳಿಸಲಾಯಿತು.

ಮತ್ತೊಂದೆಡೆ ಭಾರತದ ನಿಖತ್ ಜರೀನ್ ಗೆಲುವಿನೊಂದಿಗೆ ಅಭಿಯಾನ ಆರಂಭಿಸಿದರು. 50 ಕೆ.ಜಿ. ಬೌಟ್ ವಿಭಾಗದಲ್ಲಿ 27 ವರ್ಷದ ನಿಖತ್ ಅವರು ಮಂಗೋಲಿಯಾದ ಒಯುಂಟ್‌ಸೆಟ್ಸೆಗ್ ಯೆಸುಜೆನ್ ವಿರುದ್ಧ 3–2ರಿಂದ ಜಯ ಸಾಧಿಸಿದರು. ಹಾಲಿ ವಿಶ್ವ ಚಾಂಪಿಯನ್ ನಿಖತ್ ಅವರು ಗುರುವಾರ ನಡೆಯಲಿರುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಫ್ರಾನ್ಸ್‌ನ ಲ್ಯಾದಿರಿ ವಾಸಿಲಾ ಅವರನ್ನು ಎದುರಿಸಲಿದ್ದಾರೆ.

57 ಕೆಜಿ ವಿಭಾಗದಲ್ಲಿ ಸಾಕ್ಷಿ ಚೌಧರಿ 5–0ಯಿಂದ ಅಲ್ಜೀರಿಯಾದ ಸೆಲ್ಮೌನಿ ಚಾಹಿರಾ ವಿರುದ್ಧ ಸುಲಭ ಗೆಲುವು ಸಾಧಿಸಿದರು. 23 ವರ್ಷದ ಸಾಕ್ಷಿ ಗುರುವಾರ ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಮಮಜೊನೊವಾ ಖುಮೊರಬೊನು ಅವರನ್ನು ಎದುರಿಸಲಿದ್ದಾರೆ. ಪ್ರೀತಿ (54 ಕೆಜಿ) ಅವರು 2–3ರಿಂದ ಐರ್ಲೆಂಡ್‌ನ ಫಾಯ್ ನಿಯಾಮ್ ವಿರುದ್ಧ ಪರಾಭವಗೊಂಡು, ಟೂರ್ನಿಯಿಂದ ಹೊರಬಿದ್ದರು.

ಸಂಕ್ಷಿಪ್ತ ಸುದ್ದಿ

ಸತೀಶ್– ಆದ್ಯಾ ಜೋಡಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಸತೀಶ್ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವರಿಯತ್ ಅವರು ಇರಾನ್‌ನ ಯಜದ್‌ನಲ್ಲಿ ಭಾನುವಾರ ಮುಕ್ತಾಯಗೊಂಡ 32ನೇ ಫಜರ್ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಸ್ವದೇಶದ ಬಿ.ಸುಮೀತ್ ರೆಡ್ಡಿ– ಎನ್.ಸಿಕ್ಕಿ ರೆಡ್ಡಿ ಜೋಡಿಯನ್ನು ಸೋಲಿಸಿ ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದರು.

ಶನಿವಾರ ನಡೆದ ಫೈನಲ್‌ನಲ್ಲಿ ಸತೀಶ್– ಆದ್ಯಾ ಜೋಡಿ 22–20, 21–14 ರಿಂದ ಸುಮೀತ್– ಸಿಕ್ಕಿ ಜೋಡಿ ಯನ್ನು ಸೋಲಿಸಿತು. ಕೆ.ಸಾಯಿ ಪ್ರತೀಕ್ ಮತ್ತು ಕೃಷ್ಣ ಪ್ರಸಾದ್ ಗರಗ ಜೋಡಿ ಭಾನುವಾರ ನಡೆದ ಪುರುಷರ ಡಬಲ್ಸ್ ಫೈನಲ್‌ನಲ್ಲಿ 21–18, 21–19 ರಿಂದ ಮೆಕ್ಸಿಕೊದ ಜೊಬ್ ಕ್ಯಾಸ್ಟಿಲೊ– ಲೂಯಿಸ್ ಅರ್ಮಾಂಡೊ ಮೊಂಟೊಯಾ ಜೋಡಿಯನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಎನ್ಗುಯೆನ್ ಹೈ ದಂಗ್ 21–17, 21–18 ರಿಂದ ಸತೀಶ್ ಕುಮಾರ್ ಅವರನ್ನು ಸೋಲಿಸಿದರೆ, ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಸಿನ್ ಯಾನ್ ಹ್ಯಾಪಿ ಲೊ 21–14, 21–12 ರಿಂದ ನಾಲ್ಕನೇ ಶ್ರೇಯಾಂಕದ ತಸ್ನಿಮ್ ಮೀರ್ ಅವರನ್ನು ಮಣಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಬ್ಯಾಸ್ಕೆಟ್‌ಬಾಲ್ ಟೂರ್ನಿ 8ರಿಂದ

ಧಾರವಾಡ: ಕರ್ನಾಟಕ ರಾಜ್ಯ ಮತ್ತು ಧಾರವಾಡ ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಸಹಯೋಗದಲ್ಲಿ ರೋವರ್ಸ್ ಬಾಸ್ಕೆಟ್‌ಬಾಲ್ ಕ್ಲಬ್ ವತಿಯಿಂದ ಫೆಬ್ರುವರಿ 8ರಿಂದ 11ರವರೆಗೆ ರಾಜ್ಯಮಟ್ಟದ ಬ್ಯಾಸ್ಕೆಟ್ ಬಾಲ್ ಹೊನಲು ಬೆಳಕಿನ ಟೂರ್ನಿ ಏರ್ಪಡಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೋವರ್ಸ್ ಬ್ಯಾಸ್ಕೆಟ್ ಬಾಲ್ ಕ್ಲಬ್ ಪೋಷಕ ಮಹೇಶ ಶೆಟ್ಟಿ, ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಟೂರ್ನಿ ಜರುಗಲಿದೆ. ಇಲ್ಲಿನ ರೋವರ್ಸ್ ಮತ್ತು ಎಂವಿಎಎಸ್ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ. ವಿವಿಧ ಜಿಲ್ಲೆಗಳ 24 ಪುರುಷ ಹಾಗೂ 8 ಮಹಿಳಾ ತಂಡಗಳು ನೋಂದಾಯಿಸಿಕೊಂಡಿವೆ ಎಂದು ಹೇಳಿದರು.

ಪ್ರಭಾತ್ ದಾಳಿ: ಶ್ರೀಲಂಕಾಕ್ಕೆ ಜಯ

ಕೊಲಂಬೊ (ಎಎಫ್‌ಪಿ): ಎಡಗೈ ಸ್ಪಿನ್ನರ್ ಪ್ರಭಾತ್ ಜಯಸೂರ್ಯ ಐದು ವಿಕೆಟ್ ಗೊಂಚಲು ನೆರವಿನಿಂದ ಶ್ರೀಲಂಕಾ ತಂಡವು ಅಫ್ಗಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ 10 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಜಯಸೂರ್ಯ ಏಳನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದ ಸಾಧನೆ ಮಾಡಿದ್ದಾರೆ.

ಸೋಮವಾರ 56 ರನ್‌ಗಳ ಸುಲಭ ಗುರಿಯನ್ನು ಬೆನ್ನಟ್ಟಿದ ಲಂಕಾ ತಂಡ ಇನ್ನೂ ಒಂದು ದಿನ ಬಾಕಿ ಇರುವಂತೆಯೇ ಪಂದ್ಯವನ್ನು ಗೆದ್ದುಕೊಂಡಿತು. ಅಫ್ಗಾನಿಸ್ತಾನ ತನ್ನ ಎರಡನೇ ಇನಿಂಗ್ಸ್‌ನಲ್ಲಿ 296 ರನ್‌ಗಳಿಗೆ ಆಲೌಟ್ ಆಯಿತು. ದಿಮುತ್ ಕರುಣರತ್ನೆ (ಅಜೇಯ 32) ಮತ್ತು ನಿಶಾನ್ ಮಧುಷ್ಕಾ (ಅಜೇಯ 22) ಅವರ ಆಟದ ನೆರವಿನಿಂದ 7.2 ಓವರ್‌ಗಳಲ್ಲಿ ಗುರಿ ತಲುಪಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಅಫ್ಗಾನಿಸ್ತಾನ 198, ಶ್ರೀಲಂಕಾ 439: ಎರಡನೇ ಇನಿಂಗ್ಸ್: ಅಫ್ಗಾನಿಸ್ತಾನ 112.3 ಓವರ್‌ಗಳಲ್ಲಿ 296 (ಇಬ್ರಾಹಿಂ ಝದ್ರನ್ 114, ರಹಮತ್ ಷಾ 54, ಪ್ರಬಾತ್ ಜಯಸೂರ್ಯ 107ಕ್ಕೆ5). ಶ್ರೀಲಂಕಾ 7.6 ಓವರ್‌ಗಳಲ್ಲಿ 52. (ದಿಮುತ್ ಕರುಣರತ್ನೆ ಔಟಾಗದೆ 32, ನಿಶಾನ್ ಮಧುಷ್ಕಾ ಔಟಾಗದೆ 22) **ಫಲಿತಾಂಶ:** ಶ್ರೀಲಂಕಾಕ್ಕೆ ಹತ್ತು ವಿಕೆಟ್‌ಗಳ ಜಯ

ಭಾರತ–ನೇಪಾಳ ಹಣಾಹಣಿ ಇಂದು

ಢಾಕಾ (ಪಿಟಿಐ): ಭಾರತ ತಂಡ ಸ್ಯಾಫ್ 19 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ನೇಪಾಳ ವಿರುದ್ಧ ಆಡಲಿದೆ. ಭಾನುವಾರ ನಡೆದ ಪಂದ್ಯದಲ್ಲಿ ಆತಿಥೇಯ ಬಾಂಗ್ಲಾದೇಶ ವಿರುದ್ಧ 0-1 ಗೋಲಿನಿಂದ ಭಾರತ ಪರಾಭವಗೊಂಡಿತ್ತು.

ಅಂಕಿತಾ–ರುತುಜಾ ಜೋಡಿಗೆ ಸೋಲು

ಮುಂಬೈ (ಪಿಟಿಐ): ಭಾರತದ ಡಬಲ್ಸ್ ಜೋಡಿ ಅಂಕಿತಾ ರೈನಾ– ರುತುಜಾ ಭೋಸಲೆ ಅವರು ಮುಂಬೈ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಸಿಂಗಲ್ಸ್‌ನಲ್ಲಿ ವೈಷ್ಣವಿ ಅಡ್ಕರ್ ಕೂಡ ನಿರ್ಗಮಿಸಿದರು.

ಹಂಗೆರಿಯ ಫ್ಯಾನಿ ಸ್ಟೊಲ್ಲರ್– ಬ್ರಿಟನ್‌ನ ನೈಕ್ತಾ ಬೈನ್ಸ್ ಜೋಡಿ ಸೋಮವಾರ ನಡೆದ ಪಂದ್ಯದಲ್ಲಿ 3–6, 6–2, 10–8 ರಿಂದ ಅಂಕಿತಾ– ರುತುಜಾ ಅವರನ್ನು ಹಿಮ್ಮೆಟ್ಟಿಸಿದರು.

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದ ದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡ ಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ :
08037836183

ಬೈದ್ಯನಾಥ್ ನಾಗಪುರ ಅಸಲಿ ಆಯುರ್ವೇದ
ಮೂಲವ್ಯಾಧಿ ? ಅಸ್ವಸ್ಥತೆ ಮತ್ತು ನೋವಿನಿಂದ ಬೇಸತ್ತಿದ್ದಾರೆ ?
ಸಿಡ್‌ಪೈಲ್ಸ್ ಟ್ಯಾಬ್ಲೆಟ್
ಪೈಲ್ಸ್, ಫಿಸ್ಟೂಲಾ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಉಂಟಾಗುವ ಮಲಬದ್ಧತೆ, ಉರಿಯೂತ, ನೋವು, ಉರಿತ, ತುರಿಕೆ ಮತ್ತು ಕೆರೆತದಂತಹ ಸಮಸ್ಯೆಗಳನ್ನು ನಿವಾರಿಸಲು ಸಹಾಯಕಾರಿ ಯಾಗಿದೆ.



ಅಭಯಾಮೃತ

ದೀರ್ಘಕಾಲೀನ ಮಲಬದ್ಧತೆ ನಿವಾರಿಸಲು ಹಾಗೂ ಜೀರ್ಣಕ್ರಿಯೆ ಹೆಚ್ಚಿಸಲು ನೆರವಾಗುತ್ತದೆ
Customer Care : +91 844 844 4935
www.baidyanath.co

ನಿಮ್ಮ ಕಣ್ಣುಗಳಿಗೆ ನೀಡಿ ನೈಸರ್ಗಿಕ ಐ ಮಂತ್ರ

Helpline: 8196822222

ಸಂಪೂರ್ಣ ದೇಸಿ ಸಂಪೂರ್ಣ ಆಯುರ್ವೇದಿಕ

#VocalforLocal

Dr. Juneja's ಐ ಮಂತ್ರ

ಐ ಮಂತ್ರ ಐ ಡ್ರಾಪ್ ಉತ್ಪನ್ನವು ಗುಲಾಬಿ, ತುಳಸಿ, ನೆಲ್ಲಿ, ಬೇವು, ಪುದಿನ, ಜೇನು ಮುಂತಾದ 12 ಆಯುರ್ವೇದಿಕ ಮೂಲಿಕೆಗಳಿಂದ ಸೂತ್ರೀಕರಣಗೊಂಡಿದೆ. ಇದು ಕಣ್ಣುಗಳ ಒತ್ತಡ ಮತ್ತು ಆಯಾಸ ನಿವಾರಣೆಗೆ ಸಹಕಾರಿಯಾಗಿದೆ. ದಣಿದ ಕಣ್ಣುಗಳಿಗೆ ತಾಜಾತನ ನೀಡುವಲ್ಲಿ ಕೂಡ ನೆರವಾಗುತ್ತದೆ. ಇದರಲ್ಲಿ ರಾಸಾಯನಿಕ ಅಂಶಗಳಿಲ್ಲದಿರುವುದರಿಂದ ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ.